ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 17 ಭಾನುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 31 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, *website: www.mysurumithra.com*

₹4



ಮೈಸೂರು ಮಿತ್ರ ಭಾನುವಾರ 17 ಮೇ 2026

ಹಣ ದುರುಪಯೋಗ, ಕ್ರಮಕ್ಕೆ ಆಗ್ರಹ

ಮೈಸೂರು, ಮೇ 16(ಜಿಎ)–ಹುಣಸೂರು ತಾಲೂಕಿನ ರತ್ನಪುರಿ ಕಾಲೋನಿ ಸಾಧನಾಪುರದ ಸಿದ್ಧಿ ಕೇಂದ್ರದಲ್ಲಿರುವ ವಿಶ್ವಶಾಂತಿ ಶಿಕ್ಷಣ ಸಂಸ್ಥೆಯ ಸ್ವಯಂ ಘೋಷಿತ ಕಾರ್ಯದರ್ಶಿ ಎನ್.ಬಿ. ಮಹಾ ಲಿಂಗಯ್ಯ ಸಂಸ್ಥೆಯ ಸುಮಾರು 40 ರಿಂದ 50 ಲಕ್ಷ ರೂ.ಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದರೂ ಸಂಬಂಧಿಸಿದವರು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಕರ್ನಾಟಕ ರಾಜ್ಯ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಮುಖ್ಯಸ್ಥ ಹರಿಹರ ಆನಂದಸ್ವಾಮಿ ಕಿಡಿಕಾರಿದರು.



ಆನಂದಸ್ವಾಮಿ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಲಕ್ಕಪ್ಪ ಸ್ವಾಮೀಜಿಯವರು ಸಮಾಜ ಸೇವೆ ಉದ್ದೇಶದಿಂದ ಸರ್ಕಾರದಿಂದ 40ರಿಂದ 45 ಎಕರೆ ಜಮೀನು ಮಂಜೂರು ಮಾಡಿಸಿಕೊಂಡು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದರು. ಆದರೆ ಅವರು ಕಾಲವಾಗುವುದನ್ನೇ ಕಾದಿದ್ದ ಎನ್.ಬಿ. ಮಹಾಲಿಂಗಯ್ಯ ಸಂಸ್ಥೆಯ ಆಡಳಿತ ಆಕ್ರಮಿಸಿಕೊಂಡು ಈ ಎಲ್ಲಾ ಜಮೀನಿನಿಂದ ಬರುವ ಆದಾಯ ಹಾಗೂ ಶಿಕ್ಷಣ ಸಂಸ್ಥೆ ಪ್ರವೇಶಕ್ಕೆ ಮಕ್ಕಳು ಕಟ್ಟುವ ಹಣವನ್ನು ಗುಳುಂ ಮಾಡುತ್ತಿದ್ದಾರೆ. ಇವರ ಇಡೀ ಕುಟುಂಬವೇ ಸಂಸ್ಥೆಯನ್ನು ಆಕ್ರಮಿಸಿಕೊಂಡಿದೆ ಎಂದು ಆರೋಪಿಸಿದರು.

ಇದು ಅನುದಾನಿತ ಸಂಸ್ಥೆಯೂ ಆಗಿದೆ. ಹೀಗಿದ್ದರೂ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುವ ಶಿಕ್ಷಕರು ಹಾಗೂ ಸಿಬ್ಬಂದಿಯನ್ನು ಬೆದರಿಸಿ, ವಿವಿಧ ಕಾರಣಗಳಿಗಾಗಿ ಹಣ ಸುಲಿಗೆ ಮಾಡಲಾಗು ತ್ತಿದೆ. ಸಂಸ್ಥೆಯ ಜಮೀನಿನಲ್ಲಿ ಬರುವ ತೆಂಗಿನಕಾಯಿ, ಎಳನೀರು, ಜಮೀನಿನ ಗುತ್ತಿಗೆ, ಮೈಸೂರು ನಗರದಲ್ಲಿರುವ ಜಾಗದಿಂದ ಬರುವ ಹಣ, ಇಟ್ಟಿಗೆ ವ್ಯಾಪಾರದ ಹಣ ಮೊದಲಾದುವನ್ನು ಈ ವ್ಯಕ್ತಿ ಕಬಳಿ ಸುತ್ತಿದ್ದಾರೆ. ಹೀಗಾಗಿ ಸರ್ಕಾರ ಈ ಕೂಡಲೇ ತನಿಖೆ ನಡೆಸಿ ಸಂಸ್ಥೆಯ ಹಣ ಸಂಸ್ಥೆಗೆ ಹಾಗೂ ಬಡ ಮಕ್ಕಳ ಶಿಕ್ಷಣಕ್ಕೆ ಬಳಕೆ ಆಗು ವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ವೇದಿಕೆ ವತಿಯಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಹೋರಾಟಗಾರರಾದ ಅಹಿಂದ ಜವರಪ್ಪ, ರತ್ನಪುರಿ ಪುಟ್ಟಸ್ವಾಮಿ, ನಟರಾಜು ಶಿವಣ್ಣ, ಪ್ರಜ್ವಲ್ ಉಪಸ್ಥಿತರಿದ್ದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸ್ವಾಗತ ಕಾರ್ಯಕ್ರಮ

ಮೈಸೂರು,ಮೇ 16(ಪಿಎಂ)– ಮೈಸೂರು ಜಿಲ್ಲೆಯ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜನರೊಂದಿಗೆ ಜನತಾದಳ ಕಾರ್ಯಕ್ರಮ ನಿಮಿತ್ತ ಮೇ 17ರಂದು ಮೈಸೂರಿಗೆ ಆಗಮಿಸುತ್ತಿರುವ ಜೆಡಿಎಸ್‌ನ ರಾಜ್ಯಾಧ್ಯಕ್ಷ ಹಾಗೂ ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಯುವ ಜನತಾದಳದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನ ಪಯಣ ಮ್ಯೂಸಿಯಂನ ಜಂಕ್ಷನ್ ಸಮೀಪ ಪಕ್ಷದ ಮುಖಂಡರು, ಕಾರ್ಯಕರ್ತರಿಂದ ಆತ್ಮೀಯವಾಗಿ ಸ್ವಾಗತಿಸಲಾಗುವುದು ಎಂದು ಜೆಡಿಎಸ್ ರಾಜ್ಯ ವಕ್ತಾರ ಹಾಗೂ ವಕೀಲ ಎನ್.ಆರ್.ರವಿಚಂದ್ರೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಕೆಶಿ ಹುಟ್ಟುಹಬ್ಬಕ್ಕೆ ಮೈಸೂರು ಪಾಕ್ ವಿತರಣೆ...



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ಸೇವಾದಳ, ವಿವಿಧ ಹಂತದ ಪದಾಧಿಕಾರಿಗಳ ಸಹಯೋಗದಲ್ಲಿ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ಡಿಕೆಶಿ ಅವರ ಬೃಹತ್ ಭಾವಚಿತ್ರವನ್ನು ರಂಗೋಲಿಯಲ್ಲಿ ಪಡಿಮೂಡಿಸಿದ ವೇಳೆ ಸಾರ್ವಜನಿಕರಿಗೆ ಮೈಸೂರು ಪಾಕು ವಿತರಿಸಲಾಯಿತು. ಈ ವೇಳೆ ಪಕ್ಷದ ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿಗಳಾದ ಚೇತನ್ ವಿಷಕಂಠೇಗೌಡ, ಶ್ರೀನಿವಾಸ್, ದಿನೇಶ್ ಕುಮಾರ್, ಸೇವಾದಳದ ಅಧ್ಯಕ್ಷ ಎಂ.ಕೆ.ಅಶೋಕ, ಬ್ಲಾಕ್ ಅಧ್ಯಕ್ಷರಾದ ಮಂಚೇಗೌಡನಕೊಪ್ಪಲು ರವಿ, ನಾಗಭೂಷಣ್, ಓಬಿಸಿ ಘಟಕದ ಎನ್.ಆರ್.ನಾಗೇಶ್ ಮತ್ತಿತರರಿದ್ದರು.

ಬಿಡದಿಯ ಟೌನ್‌ಶಿಪ್, ಗುಡುಮಾದನಹಳ್ಳಿಯ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಕೈ ಬಿಡದಿದ್ದರೆ ರಾಜ್ಯಾದ್ಯಂತ ಹೋರಾಟ

● ರಾಜ್ಯ ರೈತ ಸಂಘ ಎಚ್ಚರಿಕೆ ● ನಾಳೆ ಬೆಂಗಳೂರಲ್ಲಿ ಸಭೆ

ಮೈಸೂರು, ಮೇ 16(ಜಿಎ)–ಬಿಡದಿ ಹೋಬಳಿಯಲ್ಲಿ ಬಿಡದಿ ಟೌನ್‌ಶಿಪ್‌ಗಾಗಿ 9640 ಎಕರೆ ಭೂಸ್ವಾಧೀನ ನಿರ್ಧಾರ, ಮೈಸೂರು ತಾಲ್ಲೂಕಿನ ಗುಡು ಮಾದನ ಹಳ್ಳಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಪ್ರಸ್ತಾಪವನ್ನು ಸರ್ಕಾರ ಕೂಡಲೇ ಕೈಬಿಡಬೇಕು. ಇಲ್ಲದಿದ್ದರೆ ರಾಜ್ಯ ರೈತ ಸಂಘ ರಾಜ್ಯಾದ್ಯಂತ ಹೋರಾಟ ನಡೆಸಲಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಡದಿ ಹೋಬಳಿಯ ಬೈರಮಂಗಲ, ಕೆ.ಜಿ.ಗೊಲ್ಲರಪಾಳ್ಯ, ಅರಳಾಳುಸಂದ್ರ, ಬನ್ನಿಗಿರಿ, ಹೊಸೂರು, ಮಂಡಲಹಳ್ಳಿ, ಕೆಂಪಯ್ಯನಪಾಳ್ಯ, ಒಡೆಯರ ಹಳ್ಳಿ ಗ್ರಾಮಗಳ ಫಲವತ್ತಾದ ಸುಮಾರು 9640 ಎಕರೆ ಜಮೀನು ವಶಕ್ಕೆ ಸರ್ಕಾರ ಮುಂದಾಗಿದೆ. ಇದೇ ರೀತಿ ಮೈಸೂರು ತಾಲೂಕಿನ ಗುಡುಮಾದನಹಳ್ಳಿಯಲ್ಲಿಯೂ ನಿಮಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ಮುಂದಾಗುವ ಮೂಲಕ ರೈತರನ್ನು ಒಕ್ಕಲೆಬ್ಬಿಸ ಹೊರಟಿರುವುದು ಸರಿಯಲ್ಲ. ಹೀಗಾಗಿ ಈ ಕುರಿತು ಚರ್ಚಿಸಲು ಮೇ 18 ರಂದು ಬೆಂಗಳೂರಿನಲ್ಲಿ ಸಂಯುಕ್ತ ಹೋರಾಟ–ಕರ್ನಾಟಕದ ಕೋರ್ ಸಮಿತಿ ಸಭೆ ನಡೆಯಲಿದ್ದು, ಹೋರಾಟದ ರೂಪುರೇಷೆ ನಿರ್ಧರಿಸಲಾಗುವುದು ಎಂದರು.



ಸುದ್ದಿಗೋಷ್ಠಿಯಲ್ಲಿ ಬಡಗಲಪುರ ನಾಗೇಂದ್ರ ಮಾತನಾಡಿದರು.

ಬಿಡದಿ ಜಮೀನಿಗೆ ವರ್ಷಪೂರ್ತಿ ನೀರಾವರಿ ಸೌಲಭ್ಯವಿದೆ. ಇಲ್ಲಿ ತೆಂಗು, ಅಡಕೆ, ಮಾವು ಮೊದಲಾದ ತೋಟಗಾರಿಕೆ ಬೆಳೆಗಳಿವೆ. ಇಲ್ಲಿಂದಲೇ ಬೆಂಗಳೂರು ನಗರಕ್ಕೆ ತರಕಾರಿ, ಹಣ್ಣು, ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಸರಬರಾಜಾಗುತ್ತಿದೆ. ಹೀಗಾಗಿ ಭೂ ಸ್ವಾಧೀನ ವಿರೋಧಿಸಿ ಕಳೆದ 438 ದಿನಗಳಿಂದಲೂ ರೈತರು ಬೈರಮಂಗಲದಲ್ಲಿ ಅನಿರ್ದಿಷ್ಟಾವಧಿ ಹೋರಾಟ ನಡೆಸುತ್ತಿದ್ದಾರೆ. ಆದರೂ ಸರ್ಕಾರ ರಿಯಲ್ ಎಸ್ಟೇಟ್ ದಂಧೆಗೆ ಮಣಿದು ಇದನ್ನು ನಿರ್ಲಕ್ಷಿಸಿದೆ ಎಂದು ಕಿಡಿಕಾರಿದರು.

ಒಂದು ವೇಳೆ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯದಿದ್ದಲ್ಲಿ ರಾಜ್ಯಾದ್ಯಂತ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಧರ್ಮದ ಮೇಲೆ ಮತ ಕೇಳುವ ಬಿಜೆಪಿ, ಸಂವಿಧಾನದ ಮೇಲೆ ಮತ ಕೇಳುವ ಕಾಂಗ್ರೆಸ್ ಪಕ್ಷಗಳ ಆರ್ಥಿಕ ನೀತಿಗಳಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ಈ ಎರಡೂ ಪಕ್ಷಗಳು ರೈತರ ಭೂಮಿಯನ್ನು ಕಾರ್ಪೋರೇಟ್ ಸಂಸ್ಥೆಗಳಿಗೆ ಧಾರೆ ಎರೆಯುತ್ತಿವೆ.

> ಈ ವರ್ಷ ರಾಜ್ಯದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ಬಿಸಿಲಿನ ತಾಪಮಾನ ಹೆಚ್ಚಾಗಿ ಬರ ಬರುವ ಮುನ್ಸೂಚನೆ ಕಂಡು ಬಂದಿದೆ. ಸರ್ಕಾರ ಈಗಲೇ ಸೂಕ್ತ ಕ್ರಮವಹಿಸಿ, ಸಕಲ ಸಿದ್ಧತೆ ಮಾಡಿಕೊಳ್ಳಬೇಕಿದೆ. ಜಾನುವಾರು ಮೇವು ಪೂರೈಸುವ ಬಗ್ಗೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕು. ಇವುಗಳನ್ನು ಒತ್ತಾಯಿಸಿ, ಸಂಘದ ವತಿಯಿಂದ ಸದ್ಯದಲ್ಲಿಯೇ ಜಿಲ್ಲಾ ಕೇಂದ್ರಗಳಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಗುತ್ತದೆ.
>
> –ಬಡಗಲಪುರ ನಾಗೇಂದ್ರ

ಈ ಹಿನ್ನೆಲೆಯಲ್ಲಿ ನೆಲ, ಜಲ, ಭಾಷೆ, ಜನರ ಬದುಕಿನ ರಕ್ಷಣೆಗಾಗಿ ಪ್ರಾದೇಶಿಕ ರಾಜಕೀಯ ಪಕ್ಷ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಜಾಸತ್ತಾತ್ಮಕ ಮತ್ತು ಎಡ ಪಕ್ಷಗಳು ಹಾಗೂ ಜನ ಚಳವಳಿ ಒಳಗೊಂಡ ಪ್ರಾದೇಶಿಕ ರಾಜಕೀಯ ರಂಗ ಹುಟ್ಟು ಹಾಕಲು ಚಿಂತಿಸುತ್ತಿದ್ದು, ಸರ್ವೋದಯ ಕರ್ನಾಟಕ ಪಕ್ಷ ಚರ್ಚಿಸುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಹೊಸಕೋಟೆ ಬಸವರಾಜು, ನೇತ್ರಾವತಿ, ಪಿ.ಮರಂಕಯ್ಯ, ಮಂಡಕಳ್ಳಿ ಮಹೇಶ್ ಉಪಸ್ಥಿತರಿದ್ದರು.

ವಿಶ್ವಕರ್ಮ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 16(ಜಿಎ)–ಮೈಸೂರಿನ ವಿಶ್ವಕರ್ಮ ಜಾಗೃತಿ ವೇದಿಕೆಯಿಂದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.75ಕ್ಕೂ ಹೆಚ್ಚು ಅಂಕ ಪಡೆದ ವಿಶ್ವಕರ್ಮ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷ ಕೆ.ಕೆಂಡಗಣ್ಣ ವಿಶ್ವಕರ್ಮ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ನಗರ ಮತ್ತು ಗ್ರಾಮಾಂತರ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕು. ಜೂನ್ 15 ಕೊನೆಯ ದಿನವಾಗಿದೆ. ಅರ್ಜಿಯೊಂದಿಗೆ ಆಧಾರ್ ಕಾರ್ಡ್, ಅಂಕಪಟ್ಟಿ, ಭಾವಚಿತ್ರ ಲಗತ್ತಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ.9902658188, 9739809952 ಸಂಪರ್ಕಿಸಬಹುದು ಎಂದರು.

ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಸಿದ್ದರಾಜು, ಶ್ರೀಲಕ್ಷ್ಮಿ, ಬಿ.ರಾಜು, ಲೋಕೇಶ್, ಮಹಾಂತೇಶ್, ಸಿದ್ದೇಶ್ ಇದ್ದರು.

ನಾಡಪ್ರಭು ಕೆಂಪೇಗೌಡರ ಪುತ್ಥಳಿ ಪ್ರತಿಷ್ಠಾಪಿಸಲು ಮನವಿ...



ಮೈಸೂರಿನ ನಾಡಪ್ರಭು ಕೆಂಪೇಗೌಡರ ವೃತ್ತದ ಫ್ಲೈಓವರ್ ಕಾಮಗಾರಿ ಭರದಿಂದ ಸಾಗಿದ್ದು, ಸದರಿ ವೃತ್ತದಲ್ಲಿ ನಾಡಪ್ರಭು ಕೆಂಪೇಗೌಡರ ಪುತ್ಥಳಿಯನ್ನು ಪ್ರತಿಷ್ಠಾಪನೆ ಮಾಡುವಂತೆ ಹಾಗೂ ಈ ಸಂಬಂಧ ಸ್ಥಳ ಗುರುತಿಸಿ ನೀಲ ನಕ್ಷೆಯಲ್ಲಿ ಅಳವಡಿಸುವಂತೆ ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಮನವಿ ಸಲ್ಲಿಸಲಾಯಿತು. ಮನವಿಗೆ ಸ್ಪಂದಿಸಿದ ಸಂಸದರು, ರಾಷ್ಟ್ರೀಯ ಹೆದ್ದಾರಿ ಮುಖ್ಯಸ್ಥರೊಂದಿಗೆ ಈ ವಿಚಾರ ಮಾತನಾಡಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಈ ವೇಳೆ ನಮ್ಮೂರು ನಮ್ಮೋರು ಟ್ರಸ್ಟ್ ಬೀಡನಹಳ್ಳಿ ಸತೀಶ್‌ಗೌಡ, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಈ. ಚೇತನ್, ದಂತ ವೈದ್ಯ ಲೋಕೇಶ್, ವಕೀಲ ಹೇಮಂತ್ ಕುಮಾರ್‌ಗೌಡ ಉಪಸ್ಥಿತರಿದ್ದರು.



ಶುಭಾಶಯ

ಬೋಗಾದಿ ಯುವ ಮುಖಂಡರಾದ ಕೆ.ದಿನೇಶ್ ಅವರ 50ನೇ ವರ್ಷದ ಹುಟ್ಟುಹಬ್ಬವನ್ನು ಬೋಗಾದಿ ಗ್ರಾಮಸ್ಥರು, ಗೆಳೆಯರು ಸಂಭ್ರಮದಿಂದ ಆಚರಿಸಿ, ಶುಭಾಶಯ ಕೋರಿದರು.

ಅರ್ಜಿ ಆಹ್ವಾನ

ಮೈಸೂರು,ಮೇ16–ಮೈಸೂರಿನ ವಿಜಯನಗರದ ಬ್ರಾಹ್ಮಣ ಸಂಘ ಹೆಬ್ಬಾಳು–ವಿಜಯನಗರ ವತಿಯಿಂದ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ85 ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂ.12 ಕಡೇ ದಿನ. ಹೆಚ್ಚಿನ ಮಾಹಿತಿಗೆ ಮೊ: 9243529365, 9035011459 ಸಂಪರ್ಕಿಸಬಹುದು.

ಸಾರ್ವಜನಿಕ ಪ್ರಕಟಣೆ

ಮೈಸೂರು ಸಿಟಿ – 570026: 2ನೇ ಹಂತ ಬೋಗಾದಿ, ಪ್ರಶಾಂತನಗರ, 3ನೇ ಕ್ರಾಸ್, ಮನೆ ಸಂ. 52 ರಲ್ಲಿ ವಾಸವಾಗಿರುವ ಲೇಟ್ ಮಹದೇವಯ್ಯ ರವರ ಮಗನಾದ ಶ್ರೀ ಎಂ.ಅರವಿಂದ ರವರಿಂದ. ಬೆಂಗಳೂರು ನಾರ್ತ್ 560086. ಮಹಾಲಕ್ಷ್ಮಿಪುರಂ, ಡಬ್ಲ್ಯೂ.ಸಿ.ರೋಡ್, 2ನೇ ಹಂತ, 12.ಎ ಕ್ರಾಸ್, ಮನೆ ನಂ 183. ನೆಲ ಅಂತಸ್ತಿನಲ್ಲಿ ವಾಸವಾಗಿರುವ ಶ್ರೀ ನಾಗರಾರ್ಜುನ್ ಪ್ರೀತಮ್ ಕೆ.ಸಿ. ರವರ ಧರ್ಮಪತ್ನಿಯಾದ ಶ್ರೀಮತಿ ತೇಜಸ್ವಿನಿ ಬಿ.ಎಸ್ ಆದ ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಹೌಸಿಂಗ್ ಫೈನಾನ್ಸ್ ಮೋರೆ ಹೋಗಿ ಖರೀದಿಸಲು ಇಚ್ಛಿಸಿರುತ್ತೇನೆ. ಹಾಗೂ ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಹೆಚ್.ಅಬ್ದುಲ್ ಮುನಾಫ್ ಬಿನ್ ರೇಟ್ ಬಾಪು ಶಾಹೇಬ ದವರ ಹೆಸರಿನಲ್ಲಿರುವ ಮೂಲ ಶುದ್ಧ ಕ್ರಯಪತ್ರ (ಮದರ್ ಡೀಡ್) ಕಳೆದುಹೋಗಿರುತ್ತದೆ. ಕಳೆದು ಹೋಗಿರುವ ಬಗ್ಗೆ ಮೈಸೂರು ಮಿತ್ರ ದಿನಪತ್ರಿಕೆಯಲ್ಲಿ ದಿ: 14.05.2026 ರಂದು ಜಾಹಿರಾತು ನೀಡಲಾಗಿರುತ್ತದೆ.

ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ, ಯಾವುದೇ ವಿಧವಾದ ಹಕ್ಕು ಬಾಧ್ಯತೆ ಇದ್ದಲ್ಲಿ ಈ ದಿನದಿಂದ 07 (ಏಳು) ದಿನದೊಳಗೆ ತಮ್ಮ ಲಿಖಿತ ತಕರಾರುಗಳನ್ನು ದಾಖಲೆ ಸಮೇತ ಈ ಕೆಳಕಂಡ ನನಗೆ ಸಲ್ಲಿಸಬೇಕಾಗಿ ಪ್ರಕಟಿಸಲಾಗಿದೆ. ಒಂದು ವೇಳೆ 07 (ಏಳು) ದಿನಗಳೊಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಮುಂದಿನ ಪ್ರಕ್ರಿಯೆಗಳನ್ನು ಮೇಲೆ ತಿಳಿಸಿದ ವ್ಯಕ್ತಿಗಳೊಡನೆ ನಡೆಸುತ್ತಾರೆ ಎಂದು ತಿಳಿಯುವುದು. 07 (ಏಳು) ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಯಾದವಗಿರಿ, ಸ್ವಾಮಿ ವಿವೇಕಾನಂದ ರಸ್ತೆ, "ಚೈತ್ರ ಅಪಾರ್ಟ್‌ಮೆಂಟ್"ನ ಅಸೆಸ್‌ಮೆಂಟ್ ನಂ. 137/19, ಕಾರ್ಪೋರೇಷನ್ ನಂ. 137 ರ ಸ್ವತ್ತಿನ ಒಟ್ಟು ವಿಸ್ತೀರ್ಣ 1200 ಚ.ಅಡಿಗಳು / 111.48 ಚ.ಮೀಟರ್‌ಗಳುಳ್ಳ ಅಳತೆಯ 2ನೇ ಅಂತಸ್ತಿನಲ್ಲಿರುವ ಹಳೇ ಪ್ಲಾಟ್ ನಂ.6. ಹೊಸ ಪ್ಲಾಟ್ ನಂ. 26 ರಲ್ಲಿರುವ ಪ್ಲಾಟ್‌ನ್ನು ಖರೀದಿಸಲು ಇಚ್ಛಿಸಿರುವ ಸ್ವತ್ತಾಗಿರುತ್ತದೆ.

ಸಹಿ/– ಓ ಮಂಜುಳ .ಬಿಎ., ಎಲ್.ಎಲ್.ಬಿ
ವಕೀಲರು & ನೋಟರಿ
ರಿ.ನಂ. ಕೆಎಆರ್/890/2002
ನಂ.51, ನಾಚನಹಳ್ಳಿ ಪಾಳ್ಯ, 1ನೇ ಮುಖ್ಯರಸ್ತೆ,
ಜೆ.ಪಿ ನಗರ, ಮೈಸೂರು
ಮೊ: 9900743964

ದಿನಾಂಕ: 18–05–2026



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 17 ಭಾನುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 31 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರಲ್ಲಿ ಬಿರುಗಾಳಿ, ಗುಡುಗು–ಸಿಡಿಲು ಸಹಿತ ಮಳೆ ಆರ್ಭಟ

ಸಿಡಿಲಿಗೆ ರೈತ ಮಹಿಳೆ, ಜಾನುವಾರು ಬಲಿ! ಧರೆಗುರುಳಿದ ಮರಗಳು, ವಿದ್ಯುತ್ ಕಂಬಗಳು!!

- ಬೆಳ್ಳಂಬೆಳಗ್ಗೆ ಸಂಚಾರ ದುಸ್ತರ
- ಹಲವೆಡೆ ವಿದ್ಯುತ್ ಸಂಪರ್ಕ ಕಡಿತ
- ಹೆಚ್.ಡಿ.ಕೋಟೆ ತಾಲೂಕಲ್ಲೂ ವರುಣನ ಹೊಡೆತಕ್ಕೆ ಭಾರೀ ಹಾನಿ


ಮೈಸೂರಿನ ವಿವಿಧ ಕಡೆ ಬಿದ್ದ ಮರಗಳನ್ನು ಅಭಯ ತಂಡ ತೆರವುಗೊಳಿಸುತ್ತಿರುವುದು.

ಮೈಸೂರು,ಮೇ16(ಎಂಟಿವೈ)– ಮೈಸೂರು ಜಿಲ್ಲೆಯಲ್ಲೂ ಭಾರೀ ಬಿರುಗಾಳಿ ಸಹಿತ ಮಳೆಯಿಂದ ಅಪಾರ ಪ್ರಮಾಣದ ಹಾನಿಯಾಗಿದೆ. ಸಿಡಿಲು ಬಡಿದು ರೈತ ಮಹಿಳೆ ಸಾವನ್ನಪ್ಪಿದ್ದು, ಜೊತೆಯಲ್ಲಿದ್ದ ಎರಡು ಹಸುಗಳೂ ಬಲಿಯಾಗಿವೆ.

ಪಿರಿಯಾಪಟ್ಟಣ ತಾಲೂಕು, ಕಸಬಾ ಹೋಬಳಿ ಸತ್ಯಗಾಲ ಗ್ರಾಮದ ಚಿತ್ರಶೇಖರ್ ಎಂಬುವರ ಪತ್ನಿ ವಿನೋದ(30) ಶನಿವಾರ ಸಂಜೆ ಸಿಡಿಲು ಬಡಿದು ಸಾವನಪ್ಪಿದ್ದಾರೆ. ವಿನೋದ ಅವರು ಹಸುಗಳನ್ನು ಮೇಯಿಸಲು ತಮ್ಮ ಮಾವ ಚಂದ್ರಪ್ಪಚಾರ್ ಅವರ ಜಮೀನಿ(ಸರ್ವೆ ನಂ.79/1ಎ)ಗೆ ಹೋಗಿದ್ದರು. ಸಂಜೆ 4 ಗಂಟೆ ವೇಳೆಗೆ ಭಾರೀ ಗಾಳಿಸಹಿತ ಧಾರಾಕಾರ ಮಳೆ ಸುರಿಯಲಾರಂಭಿಸಿದೆ. ಮಳೆಯಿಂದ ರಕ್ಷಣೆ ಪಡೆಯಲು ತಮ್ಮ ಎರಡು ಹಸುಗಳೊಂದಿಗೆ ಜಮೀನಿನಲ್ಲಿರುವ ಮರದ ಕೆಳಗೆ ನಿಂತಿದ್ದರು. ಈ ವೇಳೆ ಅದೇ ಮರಕ್ಕೆ ಸಿಡಿಲು ಬಡಿದು ಎರಡೂ ಹಸುಗಳು ಕ್ಷಣ ಮಾತ್ರದಲ್ಲಿ ಸಾವಿಗೀಡಾಗಿವೆ. ನಿತ್ರಾಣಗೊಂಡಿದ್ದ ವಿನೋದ ಅವರನ್ನು ಸ್ಥಳೀಯರು ಪಿರಿಯಾಪಟ್ಟಣ ತಾಲೂಕು ಆಸ್ಪತ್ರೆಗೆ ಕರೆದೊಯ್ದರಾದರೂ ಮಾರ್ಗಮಧ್ಯೆ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಪಿಡಿಓ ವೀರಭದ್ರಶೆಟ್ಟಿ,

▶ 10ನೇ ಪುಟಕ್ಕೆ


ಮೃತ ವಿನೋದ


ಮೈಸೂರು–ಬನ್ನೂರು ಮುಖ್ಯ ರಸ್ತೆಯ ವಾಜಮಂಗಲ ಹಾಗೂ ಭುಗತಗಳ್ಳಿ ನಡುವೆ ರಸ್ತೆಗೆ ಮರ ಉರುಳಿ ಬಿದ್ದು, ಸಂಚಾರ ದುಸ್ತರವಾಗಿತ್ತು.

ದೂರದಲ್ಲಿ ದಾಖಲೆ ಮಳೆ

ಮೈಸೂರಲ್ಲಿ ಕಳೆದ ರಾತ್ರಿ ಸುರಿದ ಧಾರಾಕಾರ ಮಳೆ ಒಂದೊಂದು ಪ್ರದೇಶದಲ್ಲಿ ಬಿದ್ದ ಪ್ರಮಾಣದಲ್ಲಿ ವ್ಯತ್ಯಯ ಕಂಡು ಬಂದಿದೆ. ಮೈಸೂರು ತಾಲೂಕಿನ ದೂರ ಗ್ರಾಮದಲ್ಲಿ ದಾಖಲೆಯ 51 ಮಿಲಿ ಮೀಟರ್ ಮಳೆ ಸುರಿದಿದೆ. ನಾಗನಹಳ್ಳಿ ಕೃಷಿ ಅಧ್ಯಯನ ಕೇಂದ್ರದಲ್ಲಿ 5.6 ಮಿಲಿ ಮೀಟರ್ ಮಳೆ ದಾಖಲಾಗಿದೆ. ಉಳಿದಂತೆ ಮೈಸೂರು ನಗರ ಹಾಗೂ ಜಿಲ್ಲೆಯ ವಿವಿಧೆಡೆ ಮಳೆ ಪ್ರಮಾಣದಲ್ಲಿ ಏರಿಳಿತ ಕಂಡಿದೆ.

ನಾಲ್ಕು ದಿನ ಮಳೆ!

“ ಪೂರ್ವ ಮುಂಗಾರು ಮಳೆ ಮೇ16ರಿಂದ 20ರವರೆಗೆ ಮೈಸೂರು ಭಾಗದಲ್ಲಿ ಬಿರುಗಾಳಿ ಸಹಿತ ಮಳೆ ಬರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಪ್ರತಿದಿನ ಸಂಜೆ ವೇಳೆ ಮಳೆ ಬರುವ ನಿರೀಕ್ಷೆಯಿದೆ. ಮೇ 26ರಂದು ಕೇರಳಕ್ಕೆ ಮುಂಗಾರು ಪ್ರವೇಶಿಸಲಿದ್ದು, 4 ದಿನದ ನಂತರ ರಾಜ್ಯ ಪ್ರವೇಶಿಸಲಿದೆ. ಕಳೆದ ವರ್ಷ ಮೇ24ಕ್ಕೆ ಮುಂಗಾರು ಪ್ರವೇಶಿಸಿತ್ತು. ಕೇರಳಕ್ಕೆ ಮುಂಗಾರು ಪ್ರವೇಶಿಸುತ್ತಿದ್ದಂತೆ ಮೈಸೂರು ಭಾಗದಲ್ಲಿ ಮಳೆ ಸಾಧ್ಯತೆ ಇದೆ. **–ಡಾ.ಸುಮಂತ್‌ಕುಮಾರ್ ಜಿ.ವಿ., ತಾಂತ್ರಿಕ ಅಧಿಕಾರಿ, ನಾಗನಗಳ್ಳಿ ಕೃಷಿ ಸಂಶೋಧನಾ ಕೇಂದ್ರ**

ಬೇಡಿಕೆ ಈಡೇರಿಸಲು ಮೇ 20ರ ಗಡುವು: ತಪ್ಪಿದರೆ ಅನಿರ್ದಿಷ್ಟಾವಧಿ ಮುಷ್ಕರದ ಎಚ್ಚರಿಕೆ ನೀಡಿದ ಸಾರಿಗೆ ನೌಕರರು

ಬೆಂಗಳೂರು, ಮೇ 16(ಕೆಎಂಶಿ)– ಈ ತಿಂಗಳ 20ರೊಳಗೆ ಬೇಡಿಕೆಗಳು ಈಡೇರದಿದ್ದರೆ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ರಾಜ್ಯ ರಸ್ತೆ ಸಾರಿಗೆ ನೌಕರರು ಸರ್ಕಾರಕ್ಕೆ ಇಂದಿಲ್ಲಿ ಎಚ್ಚರಿಕೆ ನೀಡಿದ್ದಾರೆ.

ಇದೇ 19ರಂದು ತುಮಕೂರಿನಲ್ಲಿ ನಡೆಯುವ ಸರ್ಕಾರದ ಸಾಧನಾ ಸಮಾವೇಶ ಸಂದರ್ಭದಲ್ಲಿ ಕಪ್ಪು ಬಾವುಟ ಪ್ರದರ್ಶಿಸುವುದಾಗಿಯೂ ತಿಳಿಸಿದ್ದಾರೆ.

2024ರ ಜನವರಿಯಿಂದ ನಮಗೆ ಶೇ.25ರಷ್ಟು ವೇತನ ಹೆಚ್ಚಿಸಬೇಕಿತ್ತು. ಆದರೆ, ನೀವು ಶೇ.12.5ರಷ್ಟು ಮಾತ್ರ ಮಾಡಿದ್ದೀರಿ. ಇದಕ್ಕೆ ನಮ್ಮ ಒಪ್ಪಿಗೆ ಇಲ್ಲ.

ಪೂರ್ಣ ಪ್ರಮಾಣದಲ್ಲಿ ನಮ್ಮ ಬೇಡಿಕೆಗಳನ್ನು ಈಡೇರಿಸದ ಹೊರತು ನಮ್ಮ ನಿಲುವಿನಿಂದ ಹಿಂದೆ ಸರಿಯಲು ಸಾಧ್ಯವಿಲ್ಲ.

ಮೇ 19ರ ಮಧ್ಯರಾತ್ರಿಯಿಂದಲೇ ರಾಜ್ಯಾದ್ಯಂತ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಯಾವುದೇ ನಿಗಮದ ಬಸ್‌ಗಳು ರಸ್ತೆಗೆ ಇಳಿಯುವುದಿಲ್ಲ. ಈ ಹಿಂದೆ ನ್ಯಾಯಾಲಯದ ಆದೇಶಕ್ಕೆ ಸ್ಪಂದಿಸಿ ಮುಷ್ಕರ ಹಿಂಪಡೆಯಲಾಗಿತ್ತು. ಅಂದು ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ.

ಈ ಬಾರಿ ಸರ್ಕಾರ ಎಸ್ಮಾ ಜಾರಿಗೊಳಿಸಿದರೂ ಇದಕ್ಕೆ ಬೆದರದೆ ನಮ್ಮ ಹೋರಾಟ ನಡೆಸುತ್ತೇವೆ.

ನಾವು ಬೇಡಿಕೆ ಇಟ್ಟ ನಂತರ ಶೇಕಡ 7ರಷ್ಟು ವೇತನ ಹೆಚ್ಚಿಸಿ ಆದೇಶ ಮಾಡಿದ್ದೀರಿ. ಇದನ್ನು ಒಪ್ಪದಿದ್ದಾಗ, ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರೇ ನಮ್ಮ ಜಂಟಿ ಕ್ರಿಯಾ ಸಮಿತಿ ಪದಾಧಿಕಾರಿಗಳ ಜೊತೆ ನಡೆಸಿದ ಮಾತುಕತೆ ವೇಳೆಯೂ ನಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದ್ದೆವು. ನಂತರ ಸರ್ಕಾರ ಶೇ.12.5ರಷ್ಟು ವೇತನ ಹೆಚ್ಚಳ ಮಾಡಿದೆ, ಇದಕ್ಕೂ ನಮ್ಮ ಒಪ್ಪಿಗೆ ಇಲ್ಲ. ಕಳೆದ ಎರಡು ವರ್ಷಗಳಿಂದ ಇರುವ ಬೇಡಿಕೆ ಶೇಕಡ 25 ವೇತನ ಏರಿಕೆ ಜೊತೆ ಇತರ ಬೇಡಿಕೆಗಳನ್ನೂ ಈಡೇರಿಸಬೇಕು.

ಬೇಡಿಕೆ ಈಡೇರಿಕೆಗೆ ಮೂರು ದಿನಗಳ ಗಡುವು ನೀಡಿದ್ದೇವೆ. ಗಡುವು ಮುಗಿಯುತ್ತಿದ್ದಂತೆ ನಾವ್ಯಾರೂ ಬಸ್‌ಗಳನ್ನು ರಸ್ತೆಗೆ ಇಳಿಸುವುದಿಲ್ಲ ಎಂದಿದ್ದಾರೆ.

ಚಿನ್ನತಂಬಿಯಿಂದ ವಂಚನೆಯಾಗಿದೆಯಾ...

ತನಿಖಾಧಿಕಾರಿಗೆ ದಾಖಲೆ ಸಲ್ಲಿಸಿ!!

ಮೈಸೂರು,ಮೇ 16(ಪಿಎಂ)– ಧನ ಗಣಪತಿ ಗೋಲ್ಡನ್ ಅಂಡ್ ಡೈಮಂಡ್ ಸಂಸ್ಥೆ (ಡಿಜಿಎಫ್) ಮಾಲೀಕ ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿ ಎಂಬಾತನಲ್ಲಿ ಚಿನ್ನ ಅಡವಿಟ್ಟು ವಂಚನೆಗೆ ಒಳಗಾಗಿರುವ ಗ್ರಾಹಕರು ಸಿಸಿಬಿ ಕಚೇರಿಯಲ್ಲಿ ತನಿಖಾಧಿಕಾರಿಯನ್ನು ಸಂಪರ್ಕಿಸಿ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬಹುದು ಎಂದು ನಗರ ಪೊಲೀಸ್ ಆಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಚಿನ್ನತಂಬಿ ಎಂಬಾತನು ವಿವಿಧ ಚಿನ್ನದ ವ್ಯವಹಾರ ನಡೆಸುವ ಸಂಸ್ಥೆಗಳ ಮುಖಾಂತರ ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ಬಡ್ಡಿ ಹಾಗೂ ಗರಿಷ್ಠ ಬೆಲೆಗೆ ಚಿನ್ನಾಭರಣಗಳನ್ನು ಖರೀದಿಸುವುದಾಗಿ ಗ್ರಾಹಕರನ್ನು ಆಕರ್ಷಿಸಿ ಅವರಿಂದ ಚಿನ್ನಾಭರಣಗಳ ಖರೀದಿ ಮತ್ತು ಗಿರಿವಿ ಇಟ್ಟುಕೊಂಡು ಚಿನ್ನಕ್ಕೆ ನಿಗದಿತ ಮೌಲ್ಯವನ್ನು ನೀಡದೇ ಗ್ರಾಹಕರ ಚಿನ್ನಾಭರಣಗಳನ್ನು ಕರಗಿಸಿ ದುರುಪಯೋಗಪಡಿಸಿಕೊಂಡು

▶ 10ನೇ ಪುಟಕ್ಕೆ


3ನೇ ಮಗುವಿಗೆ 30,000, 4ನೇ ಮಗುವಿಗೆ 40,000!

ನರಸನ್ನಪೇಟೆ (ಆಂಧ್ರಪ್ರದೇಶ): ರಾಜ್ಯದಲ್ಲಿ ಜನಸಂಖ್ಯೆ ಕುಸಿತವನ್ನು ತಡೆಯುವ ಪ್ರಯತ್ನದ ಭಾಗವಾಗಿ, ಮೂರನೇ ಮಗುವಿನ ಜನನಕ್ಕೆ 30,000 ಮತ್ತು ನಾಲ್ಕನೇ ಮಗುವಿಗೆ 40,000 ಪ್ರೋತ್ಸಾಹ ಧನ ನೀಡುವುದಾಗಿ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಘೋಷಿಸಿದ್ದಾರೆ.

ಶ್ರೀಕಾಕುಳಂ ಜಿಲ್ಲೆಯ ನರಸನ್ನಪೇಟೆಯಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ನಾಯ್ಡು, ಸರ್ಕಾರ ಈ ನಿರ್ಧಾರವನ್ನು ತೆಗೆದುಕೊಂಡಿದ್ದು, ಒಂದು ತಿಂಗಳೊಳಗೆ ಹೆಚ್ಚಿನ ವಿವರಗಳನ್ನು ಪ್ರಕಟಿಸಲಾಗುವುದು ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಜನಸಂಖ್ಯೆ ಇಳಿಯುತ್ತಿರುವುದನ್ನು ತಡೆಯಲು ನಾವು ಒಂದು ನಿರ್ಧಾರ ಮಾಡಿದ್ದೇವೆ. ಮೂರನೇ ಮಗು ಪಡೆದ ದಂಪತಿಗೆ ಕೂಡಲೇ 30,000, ನಾಲ್ಕನೇ ಮಗುವಿಗೆ 40,000 ಪ್ರೋತ್ಸಾಹ ಧನ ನೀಡಲಿದ್ದೇವೆ ಎಂದು 'ಸ್ವರ್ಣ ಆಂಧ್ರ–ಸ್ವಚ್ಛ ಆಂಧ್ರ' ಅಭಿಯಾನದ ಸಂದರ್ಭ ಹೇಳಿದ್ದಾರೆ.

ಒಂದೊಮ್ಮೆ, ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಪ್ರತಿಪಾದಿಸಿದ್ದ ಅವರು, ಜನನ ಪ್ರಮಾಣವನ್ನು ಹೆಚ್ಚಿಸಲು ಸಮಾಜವು ಒಟ್ಟಾಗಿ ಕೆಲಸ ಮಾಡುವ ಸಮಯ ಈಗ ಬಂದಿದೆ ಎಂದು ಹೇಳಿದ್ದಾರೆ. ಎರಡನೇ ಮಗುವಿನ ಜನನಕ್ಕೆ 25,000 ಪ್ರೋತ್ಸಾಹ ಧನ ನೀಡುವ ನಾಯ್ಡು ಅವರ ಹಿಂದಿನ ಘೋಷಣೆಯ ಮುಂದುವರಿದ ಭಾಗ ಇದಾಗಿದೆ. ಎರಡನೇ ಮಗುವನ್ನು ಹೊಂದುವ ದಂಪತಿಗೆ 25,000 ಪ್ರೋತ್ಸಾಹ ಧನ ನೀಡಲಾಗುತ್ತದೆ ಎಂದು ಸಿಎಂ ನಾಯ್ಡು ಮಾರ್ಚ್ 5 ರಂದು ವಿಧಾನಸಭೆಯಲ್ಲಿ ಘೋಷಿಸಿದ್ದರು. ಬಳಿಕ, ಮಾತನಾಡಿದ್ದ ಆರೋಗ್ಯ ಸಚಿವ ಸತ್ಯ ಕುಮಾರ್ ಯಾದವ್, ಸರ್ಕಾರವು ಮೂರನೇ ಮಗು ಮತ್ತು ಅದಕ್ಕಿಂತ ಹೆಚ್ಚಿನ ಮಕ್ಕಳನ್ನ ಹೊಂದುವ ದಂಪತಿಗೂ ಪ್ರೋತ್ಸಾಹ ಧನ ವಿಸ್ತರಿಸಲು ನಿರ್ಧರಿಸಿದೆ ಎಂದಿದ್ದರು.


ಚಂದ್ರಬಾಬು ನಾಯ್ಡು

ನೀಟ್ ರದ್ದತಿಗೆ ಮನನೊಂದು ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆ

ನವದೆಹಲಿ: ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆ ರದ್ದುಗೊಂಡ ಹಿನ್ನೆಲೆ ಆಘಾತಕ್ಕೊಳಗಾಗಿ ನಾಲ್ವರು ನೀಟ್ ಆಕಾಂಕ್ಷಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ. ರಾಜಸ್ಥಾನದ ಸೀಕರ್ ಮೂಲದ ಪ್ರದೀಪ್ ಮೇಘವಾಲ್, ಉತ್ತರ ಪ್ರದೇಶ ರಿತಿಕ್ ಮಿಶ್ರಾ, ದೆಹಲಿಯ ಆಜಾದ್‌ಪುರದ ಅನಿಷ್ಕಾ ಪಾಂಡೆ ಹಾಗೂ ದಕ್ಷಿಣ ಗೋವಾದ 17 ವರ್ಷದ ಬಾಲಕ ಆತ್ಮಹತ್ಯೆಗೆ ಶರಣಾಗಿದ್ದಾರೆ.

650 ಅಂಕಗಳ ನಿರೀಕ್ಷೆಯಲ್ಲಿದ್ದ ರಾಜಸ್ಥಾನದ ಪ್ರದೀಪ್: ಮೃತ ಪ್ರದೀಪ್ ಕಳೆದ 3 ವರ್ಷಗಳಿಂದ ತನ್ನ ಇಬ್ಬರು ಸಹೋದರಿಯರೊಂದಿಗೆ ಸೀಕರ್‌ನಲ್ಲಿ ವಾಸಿಸುತ್ತಿದ್ದು, ಖಾಸಗಿ ಕೋಚಿಂಗ್ ಸಂಸ್ಥೆಯೊಂದರಲ್ಲಿ ವೈದ್ಯಕೀಯ ಪ್ರವೇಶ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದ. ಈ ಬಾರಿ ಪರೀಕ್ಷೆಯನ್ನು ಉತ್ತಮವಾಗಿ ಬರೆದಿದ್ದು, ಸರ್ಕಾರಿ ವೈದ್ಯಕೀಯ ಸೀಟು ಸಿಗುವುದು ಖಚಿತ ಎಂಬ ಭರವಸೆಯಲ್ಲಿ ಇದ್ದಿದ್ದಾಗಿ ಕುಟುಂಬಸ್ಥರು ತಿಳಿಸಿದ್ದಾರೆ. ಆದರೆ ಪ್ರಶ್ನೆಪತ್ರಿಕೆ ಸೋರಿಕೆಯಿಂದಾಗಿ ಪರೀಕ್ಷೆ ರದ್ದಾಗಿದ್ದು, ಆಘಾತದಿಂದ ನೊಂದು ಆತ್ಮಹತ್ಯೆಗೆ ಶರಣಾಗಿದ್ದಾನೆ.

ಶುಕ್ರವಾರ (ಮೇ 15) ಮಧ್ಯಾಹ್ನ ಪ್ರದೀಪ್ ತನ್ನ ಸಹೋದರಿಯ ಸ್ಕಾರ್ಫ್ ಬಳಸಿ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದುಕೊಂಡಿದ್ದಾನೆ. ಘಟನೆ ನಡೆದ ಸಮಯದಲ್ಲಿ ಆತನ ಕಿರಿಯ ತಂಗಿ

▶ 10ನೇ ಪುಟಕ್ಕೆ







ಶಾಸಕ ಜಿ.ಟಿ.ದೇವೇಗೌಡರು ತಪ್ಪು ತಿದ್ದಿಕೊಂಡು ಪಕ್ಷದಲ್ಲೇ ಉಳಿದರೆ ನಮ್ಮದೇನೂ ಅಭ್ಯಂತರವಿಲ್ಲ

ಮೈಸೂರಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಮತ್ತೊಮ್ಮೆ ಸ್ಪಷ್ಟನೆ


ಮೈಸೂರಿನ ಬೋಗಾದಿ ಬಳಿಯ ಬ್ಯಾಂಕರ್ಸ್ ಲೇಔಟ್ ಮೈದಾನದಲ್ಲಿ ನಡೆಯುವ ಜನರೊಂದಿಗೆ ಜನತಾದಳ ಸಮಾವೇಶದ ಸಿದ್ಧತೆಯನ್ನು ಶನಿವಾರ ಮಾಜಿ ಸಚಿವ ಸಾ.ರಾ.ಮಹೇಶ್, ಜಿ.ಡಿ.ಹರೀಶ್‌ಗೌಡ, ಸಿ.ಎನ್.ಮಂಜೇಗೌಡ ಇತರರು ಪರಿಶೀಲನೆ ನಡೆಸಿದರು.

ಮೈಸೂರು, ಮೇ16(ಬಿಎಲ್‌ಯು)–ಶಾಸಕ ಜಿ.ಟಿ.ದೇವೇಗೌಡರು ತಾವು ಮಾಡಿರುವ ತಪ್ಪು ತಿದ್ದಿಕೊಂಡು ಪಕ್ಷದಲ್ಲೆ ಉಳಿಯುವುದಾದರೆ ನಮ್ಮ ಅಭ್ಯಂತರವಿಲ್ಲ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬೋಗಾದಿ ಬಳಿಯ ಬ್ಯಾಂಕರ್ಸ್ ಲೇಔಟ್ ಮೈದಾನದಲ್ಲಿ ನಾಳೆ ನಡೆಯುವ ಜನರೊಂದಿಗೆ ಜನತಾದಳ ಸಮಾವೇಶದ ಸಿದ್ಧತೆ ಪರಿಶೀಲನೆ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಮ್ಮ ಪಕ್ಷದ ವರಿಷ್ಠರಿಗೆ ಜಿ.ಟಿ.ದೇವೇಗೌಡರ ಮೇಲೆ ನಂಬಿಕೆ ಬಂದು ಅವರನ್ನು ಪಕ್ಷದಲ್ಲೇ ಉಳಿಸಿಕೊಂಡರೆ ಅದಕ್ಕೂ ನಮ್ಮ ಅಭ್ಯಂತರವಿಲ್ಲ ಎಂದು ಹೇಳಿದರು.

ವರಿಷ್ಠರ ತೀರ್ಮಾನಕ್ಕೆ ಬದ್ಧ: ಯಾರು ಎಷ್ಟೇ ದೊಡ್ಡವರಾದರೂ ತಮ್ಮ ತಪ್ಪನ್ನು ತಿದ್ದಿಕೊಂಡು, ಅವಕಾಶವಾದಿ ರಾಜಕಾರಣಕ್ಕೆ ತಿಲಾಂಜಲಿ ಇಟ್ಟು ಬಂದರೆ ಅಂತಿಮವಾಗಿ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ವರಿಷ್ಠರು ಕೈಗೊಳ್ಳುವ ಯಾವುದೇ ನಿರ್ಧಾರಕ್ಕೆ ನಮ್ಮ ಸ್ವಾಗತವಿದೆ ಎಂದು ಸ್ಪಷ್ಟನೆ ನೀಡಿದರು. ಜೆಡಿಎಸ್‌ನಲ್ಲಿ ಹೆಚ್.ಡಿ.ದೇವೇಗೌಡರು ರಾಷ್ಟ್ರೀಯ ನಾಯಕರು, ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ನಾಯಕರು, ಜಿ.ಟಿ.ದೇವೇಗೌಡರು ಮೈಸೂರು ನಾಯಕರೆಂದು ನಾವು ತಿಳಿದುಕೊಂಡಿದ್ದೆವು. ಆದರೆ, ಈಗ

▶ 10ನೇ ಪುಟಕ್ಕೆ



“ಕಾರ್ಯಕ್ರಮಕ್ಕೆ ನನಗೆ ಆಹ್ವಾನ ಇಲ್ಲ, ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರಿಲ್ಲ, ಜಾಹೀರಾತುಗಳಲ್ಲೂ ನನ್ನ ಭಾವಚಿತ್ರ ಇಲ್ಲ. ಆದ್ದರಿಂದ ನಾನು ಸಮಾವೇಶದಲ್ಲಿ ಭಾಗವಹಿಸುತ್ತಿಲ್ಲ.

–ಜಿ.ಟಿ.ದೇವೇಗೌಡ, ಶಾಸಕರು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಇಂದು ಜನರೊಂದಿಗೆ ಜನತಾದಳ ಸಮಾವೇಶ

ಹೆಚ್.ಡಿ.ಕುಮಾರಸ್ವಾಮಿ, ನಿಖಿಲ್ ಸೇರಿ ಹಲವು ನಾಯಕರು ಭಾಗಿ

ಮೈಸೂರು, ಮೇ16(ಬಿಎಲ್‌ಯು)– ಶಾಸಕ ಜಿ.ಟಿ.ದೇವೇಗೌಡರ ರಾಜಕೀಯ ಭದ್ರಕೋಟೆ ಮೈಸೂರಿನ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದಲ್ಲಿ ನಾಳೆ (ಮೇ 17) ಜನರೊಂದಿಗೆ ಜನತಾದಳ ಸಮಾವೇಶ ನಡೆಯಲಿದೆ.



ಮೈಸೂರಿನ ಬೋಗಾದಿ ಬಳಿಯ ನಾಗಲಿಂಗೇಶ್ವರ–ಬೋಗೇಶ್ವರ ದೇವಸ್ಥಾನದ ಎದುರಿನ ಬ್ಯಾಂಕರ್ಸ್ ಲೇಔಟ್ ಮೈದಾನದಲ್ಲಿ ನಾಳೆ ಬೆಳಿಗ್ಗೆ 10.30 ಗಂಟೆಗೆ ನಡೆಯುವ ಸಮಾವೇಶದಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಯುವ ಜನತಾದಳದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿ ಹಲವು ನಾಯಕರು ಭಾಗವಹಿಸಲಿದ್ದಾರೆ. ಬೋಗಾದಿ ಸಿಗ್ನಲ್ ವೃತ್ತದಿಂದ ತೆರೆದ ವಾಹನದಲ್ಲಿ

▶ 10ನೇ ಪುಟಕ್ಕೆ


ಕುಮಾರಸ್ವಾಮಿ


ನಿಖಿಲ್ ಕುಮಾರಸ್ವಾಮಿ



ನಕ್ಕರೆ ಅದೇ ಸ್ವರ್ಗ

ಹುಡುಗ : ನಿನ್ನೆ ನಾನು ನಿಮ್ಮ ಮನೆಗೆ ಹೋಗಿದ್ದೆ.
ನನಗನ್ನಿಸುತ್ತೆ ನನ್ನ-ನಿನ್ನ ಮದುವೆ ನಡೆಯೋದಿಲ್ಲ ಅಂತಾ!
ಹುಡುಗಿ : ಯಾಕೆ? ಅಪ್ಪಾನಾ ಮೀಟ್ ಮಾಡಿದ್ರಾ?
ಹುಡುಗ : ಇಲ್ಲಾ ನಿನ್ನ ತಂಗಿ ನಾ ಮೀಟ್ ಮಾಡಿದ್ದೆ...!!

ಮೈಸೂರು ಮಿತ್ರ

ಭಾನುವಾರ, ಮೇ 17, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.


ಅಮೃತ ವಾಹಿನಿ.........

ಪ್ರೇಮವನ್ನು ಬಲ್ಲವರು ಪರೀಕ್ಷಿಸುವುದಿಲ್ಲ. ಕಾಯುತ್ತಾ ಕೂರುವುದಿಲ್ಲ. ಪ್ರೇಮವನ್ನು ಬಲ್ಲವರು ಸುಮ್ಮನೆ ಪ್ರೇಮಿಸಲು ತೊಡಗುತ್ತಾರೆ. ಅಷ್ಟೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಭಾಷೆ ತಿಳಿಯದಿದ್ದರೂ ಹಾಸ್ಯಕ್ಕೆ ಕಡಿಮೆಯಿಲ್ಲ.

ನಿಮ್ಮ ಪತ್ರಗಳು

ಹುಣಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಶೌಚಾಲಯದಲ್ಲಿ ನೀರಿಲ್ಲದೆ ಪರದಾಟ



ಮಾನ್ಯರೆ,

ಹುಣಸೂರು ಆರು ತಾಲೂಕುಗಳನ್ನು ಒಳಗೊಂಡ ಉಪವಿಭಾಗ ಕೇಂದ್ರವಾಗಿದೆ. ಸಾರ್ವಜನಿಕರು ಪ್ರತಿಯೊಂದು ಕೆಲಸ ಕಾರ್ಯಗಳಿಗೆ ಹುಣಸೂರಿಗೆ ಆಗಮಿಸುತ್ತಿದ್ದು ಗ್ರಾಮಾಂತರ ಬಸ್ ನಿಲ್ದಾಣದ ಶೌಚಾಲಯವನ್ನು ಅತೀ ಹೆಚ್ಚು ಜನರು ಬಳಸಿಕೊಳ್ಳುತ್ತಿದ್ದಾರೆ. ಆದರೆ ಕಳೆದ ನಾಲ್ಕು ದಿನಗಳಿಂದ ನೀರಿಲ್ಲದೆ ಶೌಚಾಲಯ ಗಬ್ಬು ನಾರುತಿದ್ದು ಸಾರ್ವಜನಿಕರು ಈ ಶೌಚಾಲಯವನ್ನು ಬಳಸಲು ಸಾಧ್ಯವಿಲ್ಲದೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಈ ರೀತಿಯ ಅವ್ಯವಸ್ಥೆಗೆ ಮುಖ್ಯ ಕಾರಣ ಜನಪ್ರತಿನಿಧಿಗಳ ಆಡಳಿತ ವೈಫಲ್ಯವಾಗಿದೆ. ಜನಪ್ರತಿನಿಧಿಗಳು ತಾಲೂಕಿನ ಸಮಸ್ಯೆಗಳನ್ನು ಪರಿಹರಿಸುವ ಬದಲು ಪಕ್ಕದ ರಾಜ್ಯಗಳಿಗೆ ಹೋಗಿ ಪ್ರಚಾರ ಕಾರ್ಯದಲ್ಲಿ ತೊಡಗಿರುವುದು ನಗರದ ಸಮಸ್ಯೆಗಳ ಬಗ್ಗೆ ಅರಿವಿನ ಕೊರತೆಯೂ ಇದೆ. ಇತ್ತೀಚಿನ ದಿನಗಳಲ್ಲಿ ಅತೀ ಹೆಚ್ಚು ಜನ ಮಧುಮೇಹ ರೋಗದಿಂದ ಬಳಲುತ್ತಿದ್ದು ನಗರದ ಮಧ್ಯ ಭಾಗದಲ್ಲಿರುವ ಗ್ರಾಮಾಂತರ ಬಸ್ ನಿಲ್ದಾಣದ ಶೌಚಾಲಯವನ್ನೇ ಅವಲಂಬಿಸಿದ್ದಾರೆ.

ನಗರ ಸಭೆಯ ಅಧಿಕಾರಿಗಳು ತಮಗೆ ಸಂಬಂಧವೇ ಇಲ್ಲ ಎನ್ನುವಂತೆ ವರ್ತಿಸುತ್ತಿದ್ದಾರೆ. ಜನರ ತೆರಿಗೆ ಹಣ ಕಂದಾಯ ರೂಪದಲ್ಲಿ ಸರ್ಕಾರದ ಬೊಕ್ಕಸಕ್ಕೆ ಸೇರುತ್ತಿದ್ದು ಆದರೆ ನಗರದ ಅಭಿವೃದ್ಧಿ ಮಾತ್ರ ಸಂಪೂರ್ಣ ಕುಂಠಿತಗೊಂಡಿದೆ.

ಕೂಡಲೇ ಸಂಬಂಧಪಟ್ಟವರು ಇತ್ತ ಗಮನಹರಿಸಿ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಈ ಕೂಡಲೇ ಸರ್ಕಾರಿ ಸಾರ್ವಜನಿಕ ಬಸ್ ನಿಲ್ದಾಣದಲ್ಲಿರುವ ಶೌಚಾಲಯಕ್ಕೆ ನೀರಿನ ಸೌಕರ್ಯ ಕಲ್ಪಿಸಬೇಕು. ತಪ್ಪಿದಲ್ಲಿ ಅಧಿಕಾರಿಗಳ ಆಡಳಿತ ಕಾರ್ಯವೈಖರಿಯ ಬಗ್ಗೆ ಖಂಡಿಸಿ ಸಾರ್ವಜನಿಕರೊಡಗೂಡಿ ಹುಣಸೂರು ನಗರಸಭೆ ಮುಂಭಾಗದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ.

– ಸತ್ಯಪ್ಪ, ಅಧ್ಯಕ್ಷರು, ಸತ್ಯ ಎಂ.ಎ.ಎಸ್. ಫೌಂಡೇಷನ್, ಹುಣಸೂರು.

ಚಾಮುಂಡಿ ಎಕ್ಸ್‌ಪ್ರೆಸ್ ಮಾದರಿ ವ್ಯವಸ್ಥೆ ಪ್ಯಾಸೆಂಜರ್ ರೈಲುಗಳಲ್ಲೂ ಕಲ್ಪಿಸಲಿ

ಮಾನ್ಯರೆ,



ಸುಮಾರು 50 ವರ್ಷಗಳಿಗೂ ಹೆಚ್ಚು ಕಾಲ ದಿಂದ ಮೈಸೂರು-ಬೆಂಗಳೂರು ನಡುವೆ ಪ್ರತಿ ದಿನ ಸಂಚರಿಸುವ 'ಚಾಮುಂಡಿ ಎಕ್ಸ್‌ಪ್ರೆಸ್' ರೈಲು, ಹಳೆ ಮೈಸೂರು ಭಾಗದಲ್ಲಿ ಜನಪ್ರಿಯ ರೈಲು ಎನಿಸಿಕೊಂಡಿದೆ. ಈ ರೈಲಿಗೂ ಪ್ರಯಾಣಿಕರಿಗೂ ಒಂದು ರೀತಿಯ ಅವಿನಾಭಾವ ಸಂಬಂಧವಿದೆ. ಇತ್ತೀಚೆಗೆ ಈ ರೈಲಿನ ಎಲ್ಲಾ ಭೋಗಿಗಳ ಆಸನ ವ್ಯವಸ್ಥೆ ಮತ್ತು ಫ್ಯಾನ್‌ಗಳ ನವೀಕರಣದ ಜೊತೆಗೆ ಆರಾಮ ದಾಯಕ ಪ್ರಯಾಣಕ್ಕೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಇದಕ್ಕಾಗಿ ರೈಲ್ವೆ ಇಲಾಖೆಗೆ ಅಭಿನಂದನೆಗಳು. ನಾನು ಮೊನ್ನೆ ಪ್ರಯಾಣಿಸುವಾಗ ವಿಶಾಲ ಆಸನ ವ್ಯವಸ್ಥೆ ಬಗ್ಗೆ ಪ್ರಯಾಣಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದು ಕೇಳಿ ಖುಷಿ ಆಯಿತು. ಮೈಸೂರು-ಬೆಂಗಳೂರು ನಡುವೆ ಸಂಚರಿಸುವ ಎಲ್ಲಾ ಪ್ಯಾಸೆಂಜರ್ ರೈಲಿನಲ್ಲೂ ಇದೇ ಮಾದರಿಯ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕಾಗಿ ಮನವಿ.

-ಬೂಕನಕೆರೆ ವಿಜೇಂದ್ರ, ಕುವೆಂಪುನಗರ ಮೈಸೂರು

ಸ್ವದೇಶಿ ವಸ್ತುಗಳ ಬಳಕೆಯಾಗಲಿ

ಮಾನ್ಯರೆ,

ಆರ್ಥಿಕ ಶಿಸ್ತಿನ ಮಂತ್ರದ ಅನಿವಾರ್ಯತೆ ಪ್ರಧಾನಿ ಮೋದಿ ಅವರ ಮಿತ ವ್ಯಯದ ಮಂತ್ರ ಆರ್ಥಿಕ ಅಸ್ಥಿರತೆಗೆ ಸೂಕ್ತ ಪರಿಹಾರಗಳನ್ನು ಸೂಚಿಸಿದೆ. ಪ್ರಸ್ತುತ ರೂಪಾಯಿ ಮೌಲ್ಯವು ಡಾಲರ್ ಎದುರು 95ಕ್ಕೆ ಕುಸಿದಿರುವುದು ದೇಶದ ವಿದೇಶಿ ವಿನಿಮಯ ಮೀಸಲಿನ ಮೇಲೆ ಭಾರೀ ಒತ್ತಡ ಉಂಟು ಮಾಡುತ್ತಿದೆ. ಭಾರತವು ತನ್ನ ತೈಲ ಅಗತ್ಯದ ಶೇ.85ರಷ್ಟು ಭಾಗವನ್ನು ಆಮದು ಮಾಡಿಕೊಳ್ಳುತ್ತಿದ್ದು ವಾರ್ಷಿಕವಾಗಿ ಚಿನ್ನದ ಆಮದಿಗಾಗಿ 6 ಲಕ್ಷ ಕೋಟಿ ವ್ಯಯಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಐಷಾರಾಮಿ ವಿದೇಶಿ ವಸ್ತುಗಳ ಬದಲಿಗೆ ವೋಕಲ್ ಫಾರ್ ಲೋಕಲ್ ಅಳವಡಿಸಿಕೊಳ್ಳುವುದು ಅತ್ಯಗತ್ಯ. ಎಲೆಕ್ಟ್ರಿಕ್ ವಾಹನಗಳ ಬಳಕೆ ಶೇ.20ಕ್ಕೆ ಏರಿದರೆ ತೈಲ ಆಮದು ವೆಚ್ಚದಲ್ಲಿ ವಾರ್ಷಿಕ 1.5 ಲಕ್ಷ ಕೋಟಿ ಉಳಿಸ ಬಹುದು. ಸರ್ಕಾರದ ಮಿತವ್ಯಯದ ಜೊತೆಗೆ ನಾಗರಿಕರ ಸ್ವದೇಶಿ ವಸ್ತುಗಳ ಬಳಕೆಯು ದೇಶದ ಆರ್ಥಿಕ ಭದ್ರತೆಗೆ ಭದ್ರ ಬುನಾದಿಯಾಗಲಿದೆ.

–ಡಾ. ಎಚ್.ಕೆ. ವಿಜಯಕುಮಾರ್, ಮೈಸೂರು.

ರಾಜ್ಯಪಾಲರ ಮಾದರಿ ನಡೆ

ಮಾನ್ಯರೆ,


ರಾಜ್ಯದ ಪ್ರಥಮ ಪ್ರಜೆಯಾದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮಿತವ್ಯಯ ಅನುಸರಿಸಬೇಕೆಂಬ ಪ್ರಧಾನಿ ಮೋದಿಯವರ ಕರೆಗೆ ಓಗೊಟ್ಟು, ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿತಗೊಳಿಸಿರುವುದು ಸ್ವಾಗತಾರ್ಹವಾಗಿದೆ. ಇದೇ ಮೇಲ್ಪಂಕ್ತಿಯನ್ನು ರಾಜ್ಯ ಸರ್ಕಾರದ ಮುಖ್ಯಸ್ಥ ಸಿಎಂ ಸಿದ್ದರಾಮಯ್ಯ ಕೂಡ ಅನುಸರಿಸುವುದು ಅಪೇಕ್ಷಣೀಯವಾಗಿದೆ. ಕೆಲವು ಗಣ್ಯ ವ್ಯಕ್ತಿಗಳು ರಸ್ತೆಯಲ್ಲಿ ಸಂಚರಿಸುವಾಗ ಹಲವಾರು ವಾಹನಗಳು ಹಿಂಬಾಲಿಸುತ್ತವೆ. ಇದು ಬಹಳಷ್ಟು ವರ್ಷಗಳಿಂದ ನಡೆದುಕೊಂಡು ಬಂದಿರುವ ಪದ್ಧತಿ ಯಾಗಿದೆ. ಇದಕ್ಕೆ ಶಿಷ್ಟಾಚಾರ ಎಂಬ ಬಿರುದಾವಳಿ ಬೇರೆ. ಇಂತಹ ಅನಪೇಕ್ಷಣೀಯ ಒಡ್ಡೋಲಗವನ್ನು ತಡೆಯುವುದರಿಂದ, ಇಂಧನ ಉಳಿಸುವುದರ ಜೊತೆಗೆ ಸಾರ್ವಜನಿಕರಿಗೆ ಉಂಟಾಗುವ ಕಿರಿಕಿರಿಯನ್ನು ಕೂಡ ತಪ್ಪಿಸಬಹುದಲ್ಲವೇ? –ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ನಮ್ಮೂರ ಆದರ್ಶಪ್ರಾಯರು...



ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು 'ನಮ್ಮೂರ ಆದರ್ಶಪ್ರಾಯರು' ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ಈಗ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲಾಗಿ ಉಳಿಯಲಿ ಎಂದು ನಾನಾದರೋ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತವರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗಿರುವುದು ಶುಭಾರಂಭವೇ ಹೌದು.

6. ಪ್ರೊಫೆಸರ್ ಚಿಂತಾಮಣಿ ರಾಮಲಿಂಗಾರೆಡ್ಡಿ





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಪ್ರತಿಭಾವಂತ ವ್ಯಕ್ತಿಗಳು ಹೊರ ರಾಜ್ಯಗಳಿಂದ ಬಂದು ಮೈಸೂರು ಸಂಸ್ಥಾನದಲ್ಲಿ ಸೇವೆ ಸಲ್ಲಿಸಿ ಕೀರ್ತಿ ಪಡೆಯುತ್ತಿದ್ದ ಅನೇಕ ನಿದರ್ಶನಗಳನ್ನು ನಾವು ಮೈಸೂರಿನ ಇತಿಹಾಸದಲ್ಲಿ ಕಾಣುತ್ತೇವೆ. ಇಂತಹ ಜನರ ಪ್ರತಿಭೆಯನ್ನು ಗುರುತಿಸಿ ಮೈಸೂರಿನ ಮಹಾರಾಜರೂ ಇವರನ್ನು ತಾವೇ ಸ್ವತಃ ತಮ್ಮ ರಾಜ್ಯಕ್ಕೆ ಕರೆಸಿಕೊಂಡು ಪ್ರಮುಖ ಸ್ಥಾನಗಳಲ್ಲಿ ನೇಮಿಸುತ್ತಿದ್ದರು. ಅವರೂ ತಮ್ಮ ಜಾಣ್ಮೆ ಮತ್ತು ಸಾಮರ್ಥ್ಯಗಳಿಂದ ರಾಜ್ಯದ ಏಳಿಗೆಗೆ ದುಡಿಯುತ್ತಿದ್ದರು. ರಾಜ್ಯಕ್ಕೆ ಕೀರ್ತಿ ತರಲು ನೆರವಾಗುತ್ತಿದ್ದರು. ಅಂಥಹ ಪ್ರತಿಭಾವಂತ ವ್ಯಕ್ತಿಗಳಲ್ಲಿ **ಪ್ರೊ. ಚಿಂತಾಮಣಿ ರಾಮಲಿಂಗಾರೆಡ್ಡಿ** ಒಬ್ಬರು.

ಪ್ರೊ.ಸಿ.ಆರ್.ರೆಡ್ಡಿ ಎಂದೇ ಖ್ಯಾತಿ ಪಡೆದಿದ್ದ ಅವರು ಪ್ರಸಿದ್ಧ ಶಿಕ್ಷಣವೇತ್ತರು, ರಾಜಕೀಯ ಚಿಂತಕರು, ಆರ್ಥಿಕ ತಜ್ಞರು, ರಾಜಕಾರಿಣಿ, ಕವಿ, ಸಾಹಿತ್ಯ ವಿಮರ್ಶಕರು ಹೀಗೆ ಬಹುಮುಖ ವ್ಯಕ್ತಿತ್ವದ ಪ್ರತಿಭಾವಂತರು. ಬ್ರಾಹ್ಮಣೇತರ ಚಳವಳಿಯ ಕಟ್ಟಾ ಬೆಂಬಲಿಗರು. ಅದಕ್ಕೆ ಪೂರಕವಾಗಿ ಬ್ರಾಹ್ಮಣೇತ್ತರ ಪಂಗಡಗಳನ್ನು ಒಟ್ಟುಗೂಡಿಸುವ ಪ್ರಯತ್ನ ಮಾಡಿದರು. ಈ ದಿಕ್ಕಿನಲ್ಲಿ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ ಕಾರ್ಯವನ್ನು ಅವರು ಮೆಚ್ಚಿ ಸಮರ್ಥಿಸಿದ್ದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಇತಿಹಾಸ ಮತ್ತು ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಹೆಸರು ಮಾಡಿದ್ದರು.

ಡಾ.ರೆಡ್ಡಿ ಅವರು ಆಂಧ್ರ ವಿಶ್ವವಿದ್ಯಾನಿಲಯದ ಸಂಸ್ಥಾಪಕರು ಕೂಡ. 1926ರಿಂದ 1931ರಲ್ಲಿ ಅದರ ಉಪಕುಲಪತಿಗಳಾಗಿದ್ದು 1936ರಿಂದ 1949ರವರೆಗೆ ಎರಡನೆಯ ಅವಧಿಗೂ ಉಪಕುಲಪತಿಗಳಾಗಿ ಮುಂದುವರಿದಿದ್ದರು. ಶಿಕ್ಷಣತಜ್ಞರಾಗಿ ಅವರು ದೇಶದ ಶಿಕ್ಷಣ ನೀತಿಯನ್ನು ರೂಪಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದರು. ತೆಲುಗು ಮತ್ತು ಇಂಗ್ಲಿಷ್ ಭಾಷೆಗಳಲ್ಲಿನ ಅವರ ಗ್ರಂಥಗಳು ಅವರ ಭಾರತೀಯ ಶಾಸ್ತ್ರೀಯ ಸಾಹಿತ್ಯದ ಅರಿವನ್ನು ಎತ್ತಿ ತೋರುತ್ತವೆ. ಆದರೂ ಅವರು ತಮ್ಮ ಚಿಂತನೆಯಲ್ಲಿ ಆಧುನಿಕತೆಯನ್ನು ಅಳವಡಿಸಿಕೊಂಡರು. ಅವರ ಅಪಾರ ಜ್ಞಾನ-ವಿದ್ವತ್ತನ್ನು ಗುರುತಿಸಿದ್ದ ಬ್ರಿಟಿಷ್ ಸರ್ಕಾರ ಅವರಿಗೆ 'ನೈಟ್‌ಹುಡ್' ನೀಡಿ ಗೌರವಿಸಿತ್ತು.

ರೆಡ್ಡಿ ಅವರು ಸಿ.ಸುಬ್ರಹ್ಮಣ್ಯರೆಡ್ಡಿ ಅವರ ಎರಡನೆಯ ಪುತ್ರರಾಗಿ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕಟ್ಟಮಂಚಿ ಗ್ರಾಮದಲ್ಲಿ 1880ರಲ್ಲಿ ಹುಟ್ಟಿದ್ದರು. ಸುಬ್ರಹ್ಮಣ್ಯರೆಡ್ಡಿ ಅವರು ಚಿತ್ತೂರಿನಲ್ಲಿ ವಕೀಲರಾಗಿ ಹೆಸರು ಮಾಡಿದ್ದರು. ಅವರ ಮಗ ರಾಮಲಿಂಗಾರೆಡ್ಡಿಯವರನ್ನು ಅವರ ಚಿಕ್ಕಪ್ಪ ರಾಮಸ್ವಾಮಿರೆಡ್ಡಿ ದತ್ತು ತೆಗೆದುಕೊಂಡರು. ರೆಡ್ಡಿ ಅವರು ಚಿತ್ತೂರಿನಲ್ಲಿ ಬೋರ್ಡ್ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡಿ ಅತೀ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದರು. ನಂತರ 1897ರಲ್ಲಿ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿಗೆ ಸೇರಿ ಇತಿಹಾಸ ಶಾಸ್ತ್ರವನ್ನು ಆಯ್ಕೆ ಮಾಡಿಕೊಂಡು 1901ರಲ್ಲಿ ಬಿ.ಎ. ಪದವಿಯನ್ನು ಮೊದಲ ಶ್ರೇಣಿಯಲ್ಲಿ ಪಡೆದರು. ಜೊತೆಗೆ ನಂತರದ ವರ್ಷದಲ್ಲಿ ತತ್ವಶಾಸ್ತ್ರದಲ್ಲಿಯೂ ಇನ್ನೊಂದು ಬಿ.ಎ. ಪದವಿಯನ್ನು ಪ್ರಥಮ ದರ್ಜೆಯಲ್ಲೇ ಗಳಿಸಿ ಕೊಂಡರು. ರಾಜಕೀಯ ಆರ್ಥಿಕತೆ ಮತ್ತು ತತ್ವಶಾಸ್ತ್ರ ವಿಷಯಗಳಲ್ಲಿ ಪದಕಗಳನ್ನು ಗಿಟ್ಟಿಸಿಕೊಂಡರು. ಕಾಲೇಜಿನಲ್ಲಿ ಓದುತ್ತಿದ್ದಾಗಲೇ ತೆಲುಗು ಪದ್ಯಗಳನ್ನು ಬರೆದು ಬಹುಮಾನ ಪಡೆದರು.

ನಂತರ ಇವರಿಗೆ ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಓದಲು ಇಂಡಿಯಾ ಸರ್ಕಾರದ ಸ್ಕಾಲರ್‌ಶಿಪ್ ಲಭಿಸಿತು. 1902ರಲ್ಲಿ ಅವರು ಆ ವಿಶ್ವವಿದ್ಯಾನಿಲಯದ ಸೇಂಟ್ ಜಾನ್ ಕಾಲೇಜಿಗೆ ಸೇರಿದರು. ಅಲ್ಲಿ ಲಿಬರಲ್ ಕ್ಲಬ್ ಕಾರ್ಯದರ್ಶಿಯಾಗಿ, ನಂತರ ಯೂನಿಯನ್ ಸೊಸೈಟಿ ಉಪಾಧ್ಯಕ್ಷರಾಗಿ ಆಯ್ಕೆಗೊಂಡರು. ಹಾಗೆ ಆಯ್ಕೆಯಾದ ಮೊದಲ ಭಾರತೀಯರಾಗಿದ್ದರು. ಅಲ್ಲಿ ಅಧ್ಯಯನ ಮಾಡುತ್ತಿದ್ದಾಗ ಅವರಿಗೆ ಸೇಂಟ್ ಜೋಲಿನ್ಸ್ ಕಾಲೇಜಿನ ರೈಟ್ ಬಹುಮಾನ ಬಂದಿತು. ಮಾರನೆಯ ವರ್ಷ ತಾವು ಓದುತ್ತಿದ್ದ ಸೇಂಟ್ ಜಾನ್ ಕಾಲೇಜಿನ ಸ್ಕಾಲರ್ ಆಗಿ ಚುನಾಯಿತರಾದರು. ಆಗಲೂ ಅವರಿಗೆ ರೈಟ್ ಬಹುಮಾನ ಬಂದಿತು. ತಾವು ಉಪಾಧ್ಯಕ್ಷರಾಗಿದ್ದ ಯೂನಿಯನ್ ಸೊಸೈಟಿಯ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಲು ರೆಡ್ಡಿ ಅವರು ಗೋಪಾಲ ಕೃಷ್ಣ ಗೋಖಲೆಯವರನ್ನು ಆಹ್ವಾನಿಸಿದರು.

ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದಾಗಲೇ 1906ರ ಚುನಾವಣೆಯಲ್ಲಿ ಭಾಗವಹಿಸಿ ಲಿಬರಲ್ ಪಕ್ಷದ ಪರವಾಗಿ ಇಂಗ್ಲೆಂಡಿನ ಹಲವಾರು ಸ್ಥಳಗಳಲ್ಲಿ ಭಾಷಣಗಳನ್ನು ಮಾಡಿದರು. ಆ ವರ್ಷ ಲಿಬರಲ್ ಪಾರ್ಟಿ ಅಧಿಕಾರಕ್ಕೆ ಬಂದು. ಅನೇಕ ಬ್ರಿಟಿಷ್ ರಾಜಕಾರಿಣಿಗಳು ರೆಡ್ಡಿ ಅವರ ಬುದ್ಧಿವಂತಿಕೆಯನ್ನು ಪ್ರಶಂಸಿಸಿದರು. ಈ ಸಂದರ್ಭದಲ್ಲಿ ಗೋಖಲೆಯವರು ಇವರನ್ನು ಬರೋಡಾ ಗಾಯಕವಾಡ್ ಅವರಿಗೆ ಪರಿಚಯ ಮಾಡಿಕೊಟ್ಟಿದ್ದು, ಅವರ ಆದೇಶದಂತೆ ಅಮೆರಿಕಾಕ್ಕೆ ತೆರಳಿ ಅಲ್ಲಿನ ವಿದ್ಯಮಾನ್ಯಗಳನ್ನು ಅರಿತುಕೊಂಡು ಬಂದರು. 1907ರಲ್ಲಿ ರೆಡ್ಡಿ ಅವರು ಭಾರತಕ್ಕೆ ಹಿಂತಿರುಗಿ ಶ್ರೀ ಅರಬಿಂದೋ ಅವರು ತೆರವು ಮಾಡಿದ್ದ ಬರೋಡಾ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಆದರು. ಅಧ್ಯಾಪಕರಾಗಿ ತಮ್ಮ ಹಾಸ್ಯ ಪ್ರವೃತ್ತಿ ಮತ್ತು ಪಾಂಡಿತ್ಯದಿಂದ ವಿದ್ಯಾರ್ಥಿಗಳ ಗೌರವಕ್ಕೆ ಪಾತ್ರರಾದರು.

ಪ್ರೊ.ಸಿ.ಆರ್.ರೆಡ್ಡಿ ಅವರ ಮುಂದಿನ ಪಯಣ ಮೈಸೂರಾಗಿತ್ತು. ಬರೋಡಾ ವಿಶ್ವವಿದ್ಯಾನಿಲಯ ದಲ್ಲಿನ ಹುದ್ದೆಗೆ ರಾಜೀನಾಮೆ ನೀಡಿ ಮೈಸೂರಿಗೆ ಬಂದ ಪ್ರೊ.ರೆಡ್ಡಿ ಅವರನ್ನು ಶಿಕ್ಷಣ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಅವರಿಗೆ ಸಹಾಯಕರನ್ನಾಗಿ ನೇಮಿಸಲಾಯಿತು. ಆ ನಂತರ 1913ರಲ್ಲಿ ಮಹಾರಾಜ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರನ್ನಾಗಿ ನೇಮಿಸಲಾಯಿತು. ಮೂರು ವರ್ಷಗಳ ತರುವಾಯ ಕಾಲೇಜಿನ ಪ್ರಿನ್ಸಿಪಾಲ್ ಕೂಡ ಆದರು.

ಜೊತೆಗೆ ಮೈಸೂರು ರಾಜ್ಯದ ಶಿಕ್ಷಣದ ಇನ್ಸ್‌ಪೆಕ್ಟರ್ ಜನರಲ್ ಜವಾಬ್ದಾರಿಯೂ ಹೆಗಲಿಗೆ ಬಿದ್ದಿತು. ಅವರಿಗೆ ಅದೊಂದು ಸುಸಂದರ್ಭವಾಗಿ ರಾಜ್ಯದಲ್ಲಿನ ಎಲ್ಲಾ ಶಾಲೆಗಳನ್ನು ಪಂಚಮರ ಮಕ್ಕಳು ಮುಕ್ತವಾಗಿ ಓದಲು ತೆರೆದರು. ಅವರ ಈ ಕಾರ್ಯ ಎಷ್ಟು ಮುಂದಾಲೋಚನೆಯ ಸಾಮಾಜಿಕ ಪರಿವರ್ತನೆಯ ಕಾರ್ಯವಾಗಿತ್ತೆಂದರೆ ಅದು ಗಾಂಧೀಜಿ ಅವರು ಹರಿಜನರಿಗೆ ದೇವಸ್ಥಾನಗಳನ್ನು ತೆರೆಯಲು ನಡೆಸಿದ ಹೋರಾಟಕ್ಕಿಂತ ಮುಂಚಿನದಾಗಿತ್ತು.

ಯುವರಾಜ ಕಂಠೀರವ ನರಸಿಂಹರಾಜ ಒಡೆಯರು ಯೂರೋಪ್ ಪ್ರವಾಸ ಮಾಡಿದಾಗ ಪ್ರೊ.ರೆಡ್ಡಿ ಅವರೂ ಜೊತೆಯಲ್ಲಿ ತೆರಳಿದ್ದರು. ಅವರನ್ನು ವಿದೇಶಗಳಲ್ಲಿ ಶೈಕ್ಷಣಿಕ ಅಭ್ಯಾಸಗಳ ಬಗ್ಗೆ ತಿಳಿದು ಬರಲು ಕಳುಹಿಸಲಾಗಿ ಅವರು ಕೆನಡಾ, ಜಪಾನ್, ಫಿಲಿಪೈನ್ಸ್, ಹಾಂಗ್‌ಕಾಂಗ್ ಮತ್ತಿತರ ದೇಶಗಳಿಗೆ ಭೇಟಿ ನೀಡಿದರು. ಅವರು ಮೈಸೂರಿಗೆ ಹಿಂತಿರುಗಿದ ಮೇಲೆ ಅವರ ಅನುಭವಗಳ ಆಧಾರದ ಮೇಲೆ ಮೈಸೂರಿನಲ್ಲಿ ಒಂದು ವಿಶ್ವವಿದ್ಯಾನಿಲಯಕ್ಕಾಗಿ ಯೋಜನೆಯೊಂದನ್ನು ರೂಪಿಸಲು ವಿಶೇಷ ಸ್ಥಾನದಲ್ಲಿ ನೇಮಿಸಲಾಯಿತು. 1913ರಲ್ಲಿ ಅವರನ್ನು ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರನ್ನಾಗಿ ಮತ್ತೆ ನೇಮಕ ಮಾಡಲಾಯಿತು.

1921ರಲ್ಲಿ ಡಾ. ರೆಡ್ಡಿ ಅವರು ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿದರು. ಶೈಕ್ಷಣಿಕ ಕ್ಷೇತ್ರದಲ್ಲಿ ಅಸಾಮಾನ್ಯ ತಜ್ಞರೆಂದೆನಿಸಿಕೊಂಡು ಮದ್ರಾಸ್ ವಿಧಾನ ಪರಿಷತ್ತಿಗೆ ಆಯ್ಕೆಯಾದರು. ಅವರು ಸ್ವಲ್ಪ ಕಾಲ ಜಸ್ಟಿಸ್ ಪಾರ್ಟಿ ಸದಸ್ಯರಾಗಿದ್ದರು. ಆದರೆ ಆ ಪಕ್ಷವಾದರೋ ಪ್ರೊ. ರೆಡ್ಡಿ ಅವರು ಅತೀ ಹೆಚ್ಚಿನ ಬುದ್ಧಿವಂತಿಕೆ ಹಾಗೂ ಸ್ವತಂತ್ರ ಮನೋಭಾವದವರಾಗಿದ್ದು ಅವರನ್ನು ನಿಯಂತ್ರಿಸುವುದು ಕಷ್ಟವೆಂದು ಬಗೆಯಿತು. 1926ರಲ್ಲಿ ವಾಲ್ಟೇರ್‌ನಲ್ಲಿ ಆಂಧ್ರ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಉದ್ದೇಶಿಸಿದಾಗ ಅದರ ಉಪಕುಲಪತಿ ಸ್ಥಾನಕ್ಕೆ ಪ್ರೊ.ರೆಡ್ಡಿ ಅವರು ಅತ್ಯಂತ ಅರ್ಹರಾದ ವ್ಯಕ್ತಿ ಎಂದೆನಿಸಿಕೊಂಡು ಅದರ ಮೊದಲ ಉಪ ಕುಲಪತಿಗಳಾದರು. ಹೊಸದಾಗಿ ಸ್ಥಾಪಿತವಾಗಿ ಆಂಧ್ರ ವಿವಿಯ ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಅತ್ಯುತ್ತಮ ಕೇಂದ್ರವೊಂದೆಂದು ಹೆಸರು ಮಾಡಿತು. 1930ರಲ್ಲಿ ಅವರು ರಾಜೀನಾಮೆ ಕೊಟ್ಟು ಇಂಡಿಯಾ ಸರ್ಕಾರ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ಸಿನ ನೇತಾರರನ್ನು ಬಂಧಿಸಿದ್ದನ್ನು ತೀವ್ರವಾಗಿ ವಿರೋಧಿಸಿದರು.

ಸ್ವಲ್ಪ ಸಮಯದ ನಂತರ ಅವರು ರಾಜಕೀಯ ಕ್ಷೇತ್ರಕ್ಕೆ ಹಿಂತಿರುಗಿ ಆಂಧ್ರದ ಚಿತ್ತೂರು ಜಿಲ್ಲಾ ಮಂಡಳಿ ಅಧ್ಯಕ್ಷರಾದರು. 1936ರಲ್ಲಿ ಆಂಧ್ರ ವಿವಿ ಸೆನೆಟ್ ಅವರನ್ನು ಉಪಕುಲಪತಿ ಸ್ಥಾನಕ್ಕೆ ಹಿಂತಿರುಗುವಂತೆ ಕೋರಲು ನಿರ್ಧರಿಸಿತು. ಪ್ರೊ ರೆಡ್ಡಿ ಅವರು ವಾಲ್ಟೇರ್‌ಗೆ ಹಿಂತಿರುಗಿ ಬಂದು ಎರಡನೆಯ ಬಾರಿಗೆ ಅಲ್ಲಿನ ಉಪಕುಲಪತಿಗಳಾಗಿ ಅಧಿಕಾರ ಸ್ವೀಕರಿಸಿ, 1949 ರವರೆಗೆ ಮುಂದುವರಿದರು. ಈ ಅವಧಿಯಲ್ಲಿ ಆಂಧ್ರ ವಿವಿ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿತು. ಅವರ ಧ್ಯೇಯೋದ್ದೇಶ ಮತ್ತು ವಿಶೇಷ ನೈತಿಕ ನಾಯಕತ್ವದಿಂದ ಪ್ರೇರೇಪಿತರಾಗಿ ಖ್ಯಾತ ನಾಮರಾದ ಡಾ.ಎಸ್.ಭಗವಂತಮ್, ಡಾ.ಟಿ.ಆರ್.ಶೇಷಾದ್ರಿ, ಡಾ.ವಿ.ಕೆ.ಆರ್.ವಿ.ರಾವ್, ಡಾ.ವಿ.ಎಸ್.ಕೃಷ್ಣ, ಕೆ.ಆರ್.ಶ್ರೀನಿವಾಸ ಅಯ್ಯಂಗಾರ್ ಮುಂತಾದ ಪ್ರಾಧ್ಯಾಪಕರು ವಾಲ್ಟೇರಿಗೆ ಬಂದು ಸೇರಿದರು. ಬ್ರಿಟಿಷ್ ಸರ್ಕಾರ ಡಾ. ರೆಡ್ಡಿ ಅವರ ಸಾಮರ್ಥ್ಯವನ್ನು ಗುರುತಿಸಿ 1942 ನೈಟ್ ಹುಡ್ ನೀಡಿ ಗೌರವಿಸಿತು. 1949ರಲ್ಲಿ ಡಾ.ಸಿ. ಆರ್. ರೆಡ್ಡಿ ಅವರು ಮೈಸೂರು ವಿವಿಯ ಪ್ರೊ-ಛಾನ್ಸಲರ್ ಆಗಿ ಮಹಾರಾಜರಿಂದ ನೇಮಕಗೊಂಡರು. ಎರಡು ವರ್ಷಗಳ ನಂತರ 1951ರ ಫೆಬ್ರವರಿ 24ರಂದು ಎಪ್ಪತ್ತೊಂದನೆ ವಯಸ್ಸಿನ ಸರ್ ಚಿಂತಾಮಣಿ ರಾಮಲಿಂಗಾರೆಡ್ಡಿ ಅವರು ಮದ್ರಾಸಿನಲ್ಲಿ ನಿಧನರಾದರು.

ಅವರು ಕಾಲವಾದಾಗ ಮಹಾರಾಜ ಜಯಚಾಮರಾಜ ಒಡೆಯರ್ ತಮ್ಮ ಶೋಕ ವ್ಯಕ್ತಪಡಿಸುತ್ತಾ, "ರೆಡ್ಡಿ ಅವರು ಮೈಸೂರಿನಲ್ಲಿ ಹಲವಾರು ಹುದ್ದೆಗಳಲ್ಲಿ ಅಪ್ರತಿಮವಾಗಿ ಸೇವೆ ಸಲ್ಲಿಸಿದ್ದು, ಪ್ರತಿಯೊಂದೂ ಅವರ ಸ್ಪಷ್ಟವಾದ ಪ್ರತಿಭೆ, ಅಸಾಮಾನ್ಯ ಉತ್ಸಾಹ ಮತ್ತು ದಣಿವಿಲ್ಲದ ಶಕ್ತಿ, ಈ ಗುಣಗಳನ್ನು ಎತ್ತಿ ತೋರುತ್ತಿದ್ದವು" ಎಂದು ನುಡಿದಿದ್ದರು.

ಡಾ.ರೆಡ್ಡಿ ಅವರ ಪ್ರಕಟಣೆಗಳಲ್ಲಿ 'ಮುಸಲಮ್ಮನ ಸಾವು' (The Death of Musalamma), 'ಅರ್ಥ ಶಾಸ್ತ್ರ ಮತ್ತು ಕವಿತ್ವತತ್ವವಿಚಾರ' ಗ್ರಂಥಗಳು ಸೇರಿವೆ.

ಮುಗಿದ ಸಿಂಧು ದರ್ಶನ ಯಾತ್ರೆ...



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

(ಮೇ 10ರ ಸಂಚಿಕೆಯಿಂದ)

ಹೀಗಾಗಿ ರಾತ್ರಿಯೇ ಪ್ಯಾಕಿಂಗ್ ಮುಗಿಸಿದಾಗ ಮನಸಿಗೆ ನಿರಾಳ. ನಾಳೆ ಕಾರ್ಗಿಲ್ಲಿಗೆ ಹೋಗುವ ಸಂಭ್ರಮ. ರಾತ್ರಿ ಒಂದು ಗಂಟೆಯಾದರೂ ನಿದ್ರೆ ಬಾರದೆ ಹೊರಳಾಡುತ್ತಿದ್ದ ನನಗೆ ಯಾವಾಗ ನಿದ್ದೆಗೆ ಜಾರಿದೆನೋ ತಿಳಿಯಲಿಲ್ಲ. 3.30ಕ್ಕೆ ಅತೀ ಜೋರಾಗಿ ಧ್ವನಿ ವರ್ಧಕದಲ್ಲಿ ಆಝಾನ್ ಬಡಿದೆಚ್ಚರಿಸಿತು. ಏನು ಮಾಡಿದರೂ ಮಲಗಲಾಗದೆ ಎದ್ದು, ತಯಾರಾಗುವ ಸಿದ್ಧತೆಯಲ್ಲಿ ತೊಡಗಿದೆ. ಆರಕ್ಕೆ ಸರಿಯಾಗಿ ಹೊರಟಾಗ, ಕರ್ನಾಟಕದ ಯಾತ್ರಿಕರೆಲ್ಲರೂ ಯೋಗಾಭ್ಯಾಸ ಆರಂಭಿಸಿದುದನ್ನು ನೋಡಿದಾಗಲೇ ಇಂದು ಅಂತರಾಷ್ಟ್ರೀಯ ಯೋಗ ದಿನ ಎಂಬುದು ನೆನಪಾಯಿತು. ಪ್ರಧಾನಮಂತ್ರಿಯವರು ಮೈಸೂರಿನಲ್ಲಿ. ನಾವಿಲ್ಲಿ! ಒಂದು ರೀತಿಯ ನಿರಾಶೆಯಾದರೆ, ಕಾಶ್ಮೀರದ ನೆಲದಲ್ಲಿ ನಿಂತು ಯೋಗಾಭ್ಯಾಸ ಮಾಡಿ ಎಲ್ಲರೂ ನಮಸ್ತೇ ಸದಾ ವತ್ಸಲೇ? ಜೋರಾಗಿ ಹೇಳಿದಾಗ ಆದ ರೋಮಾಂಚನ ವರ್ಣಿಸಲು ಪದಗಳೇ ಸಾಲದು.

ತಿಂಡಿ ತಿಂದು ಲಗೇಜನ್ನು ಬಸ್ಸಿಗೇರಿಸಿ, ಎಂಟರ ಒಳಗೆ ಬಸ್ಸು ಕಾಶ್ಮೀರದ ಸರಹದ್ದನ್ನು ದಾಟಿಯಾಗಿತ್ತು. ಕಾರ್ಗಿಲ್‌ಗೆ ಹೋಗುತ್ತಿರುವೆವೆಂಬ ಅಂಶವೇ ನಮ್ಮ ಮೈಮನಗಳನ್ನು ಪುಳಕಗೊಳಿಸಿ, ಸಂಭ್ರಮ ಹೆಚ್ಚಿಸುತ್ತಿತ್ತು. ನಿನ್ನೆ ಗುಲ್ಮಾರ್ಗ್ ತಪ್ಪಿಸಿಕೊಂಡಿದ್ದರೂ ಇಂದು ನಾವು ಹಾದಿಯಲ್ಲಿ ಸೋನ್ ಮಾರ್ಗ್‌ಗೆ ಭೇಟಿ ನೀಡಲಿದ್ದೇವೆ ಎಂಬುದು ಎಲ್ಲರಿಗೂ ಖುಷಿ ಕೊಟ್ಟ ಸಂಗತಿ. ದಾರಿಯುದ್ದಕ್ಕೂ ಹಸಿರಿನ ಗಿರಿಗಳ ಸಾಲು , ಮುಳ್ಳು ತಂತಿಗಳಿಂದ ಆವೃತವಾದ ಮಿಲಿಟರಿ ಸಂಬಂಧಿತ ಆಫೀಸುಗಳು, ಅಲ್ಲಲ್ಲಿ ಬಂದೂಕು ಹಿಡಿದ ಸೈನಿಕರು. ಚಳಿ, ಮಳೆ, ಗಾಳಿ, ಬಿಸಿಲು ಏನೇ ಇದ್ದರೂ ತಮ್ಮ ಕರ್ತವ್ಯದಿಂದ ಎಂದೂ ವಿಮುಖರಾಗದ ನಮ್ಮ ಸೈನಿಕರನ್ನು ಕಂಡಾಗ ಮನಸ್ಸು ಗೌರವದಿಂದ ತಲೆಬಾಗುತ್ತದೆ.

ಬೆಟ್ಟದ ಮೇಲಿರುವ ವಿಹಾರತಾಣ ಸೋನ್ಮಾರ್ಗ್. ಬಸ್‌ಗಳು ಕೆಳಗೇ ನಿಲ್ಲುತ್ತವೆ. ಕುದುರೆಯನ್ನೇರಿಯೇ ಮೇಲೆ ಹೋಗಬೇಕು. ಮೇಲೆ ಹಿಮ ದರ್ಶನ ಆಗುತ್ತದೆ. ಕೆಳಗೇ ನಿಂತು ಸುತ್ತ ಕಣ್ಣಾಡಿಸಿದರೆ, ಪ್ರಕೃತಿ ಸೌಂದರ್ಯವೇ ಇಲ್ಲಿ ಹೆಪ್ಪುಗಟ್ಟಿದೆಯೇನೋ ಎಂದೆನಿಸುತ್ತದೆ. ಸುತ್ತಲೂ ಸುಂದರ ಹಸಿರು ಬೆಟ್ಟ, ಆ ಬೆಟ್ಟದ ತುದಿಯೇ ಕಾಣದಂತೆ ಮುಚ್ಚುತ್ತಾ ಸಾಗುತ್ತಿರುವ ಮೋಡಗಳ ಹಿಂಡು. ಎಲ್ಲಿ ನೋಡಿದರೂ ಪೈನ್ ಮರಗಳು. ಅದರ ನಡುವೆ ಕಂಗೊಳಿಸುವ ಹಚ್ಚ ಹಸಿರ ಹುಲ್ಲುಹಾಸು. ಬೆಟ್ಟವನ್ನು ಪ್ರಕೃತಿಮಾತೆ ಹಸಿರ ಹಾಸಿನಿಂದ ಅಲಂಕರಿಸಿದ್ದಾಳೇನೋ ಎಂದನಿಸುತ್ತದೆ. ಆ ಸುಂದರ ದೃಶ್ಯದಿಂದ ಕಣ್ಣ ದೃಷ್ಟಿ ನಾವು ನಿಂತ ನೆಲದೆಡೆಗೆ ಸಾಗಿದರೆ, ಕೊಚ್ಚೆ, ಕುದುರೆಗಳ ಲದ್ದಿ, ಯಾತ್ರಿಕರು ಪ್ರಸಾದಿಸಿದ ಪ್ಲಾಸ್ಟಿಕ್ ಕವರ್, ಬಾಟಲ್, ರಾಪರುಗಳು ಹುಣ್ಣಿನಂತೆ ಕಣ್ಣಿಗೆ ರಾಚುತ್ತದೆ.

ನಾಳೆ ಕಾರ್ಗಿಲ್ಲಿಗೆ ಹೋಗುವ ಸಂಭ್ರಮ. ರಾತ್ರಿ ಒಂದು ಗಂಟೆಯಾದರೂ ನಿದ್ರೆ ಬಾರದೆ ಹೊರಳಾಡುತ್ತಿದ್ದ ನನಗೆ ಯಾವಾಗ ನಿದ್ದೆಗೆ ಜಾರಿದೆನೋ ತಿಳಿಯಲಿಲ್ಲ. 3.30ಕ್ಕೆ ಅತೀ ಜೋರಾಗಿ ಧ್ವನಿವರ್ಧಕದಲ್ಲಿ ಆಝಾನ್ ಬಡಿದೆಚ್ಚರಿಸಿತು. ಏನು ಮಾಡಿದರೂ ಮಲಗಲಾಗದೆ ಎದ್ದು, ತಯಾರಾಗುವ ಸಿದ್ಧತೆಯಲ್ಲಿ ತೊಡಗಿದೆ. ಆರಕ್ಕೆ ಸರಿಯಾಗಿ ಹೊರಟಾಗ, ಕರ್ನಾಟಕದ ಯಾತ್ರಿಕರೆಲ್ಲರೂ ಯೋಗಾಭ್ಯಾಸ ಆರಂಭಿಸಿದುದನ್ನು



ನೋಡಿದಾಗಲೇ ಇಂದು ಅಂತರರಾಷ್ಟ್ರೀಯ ಯೋಗ ದಿನ ಎಂಬುದು ನೆನಪಾಯಿತು. ಪ್ರಧಾನಮಂತ್ರಿಯವರು ಮೈಸೂರಿನಲ್ಲಿ. ನಾವಿಲ್ಲಿ! ಒಂದು ರೀತಿಯ ನಿರಾಶೆಯಾದರೆ, ಕಾಶ್ಮೀರದ ನೆಲದಲ್ಲಿ ನಿಂತು ಯೋಗಾಭ್ಯಾಸ ಮಾಡಿ ಎಲ್ಲರೂ ನಮಸ್ತೇ ಸದಾ ವತ್ಸಲೇ ಜೋರಾಗಿ ಹೇಳಿದಾಗ ಆದ ರೋಮಾಂಚನ ವರ್ಣಿಸಲು ಪದಗಳೇ ಸಾಲದು. ತಿಂಡಿ ತಿಂದು ಲಗೇಜನ್ನು ಬಸ್ಸಿಗೇರಿಸಿ, ಎಂಟರ ಒಳಗೆ ಬಸ್ಸು ಕಾಶ್ಮೀರದ ಸರಹದ್ದನ್ನು ದಾಟಿಯಾಗಿತ್ತು. ಕಾರ್ಗಿಲ್‌ಗೆ ಹೋಗುತ್ತಿರುವೆವೆಂಬ ಆಂಶವೇ ನಮ್ಮ ಮೈಮನಗಳನ್ನು ಪುಳಕಗೊಳಿಸಿ, ಸಂಭ್ರಮ ಹೆಚ್ಚಿಸುತ್ತಿತ್ತು. ನಿನ್ನೆ ಗುಲ್‌ಮಾರ್ಗ್ ತಪ್ಪಿಸಿಕೊಂಡಿದ್ದರೂ ಇಂದು ನಾವು ಹಾದಿಯಲ್ಲಿ ಸೋನ್ ಮಾರ್ಗ್ಗೆ ಭೇಟಿ ನೀಡಲಿದ್ದೇವೆ ಎಂಬುದು ಎಲ್ಲರಿಗೂ ಖುಷಿ ಕೊಟ್ಟ ಸಂಗತಿ. ದಾರಿಯುದ್ದಕ್ಕೂ ಹಸಿರಿನ ಗಿರಿಗಳ ಸಾಲು, ಮುಳ್ಳು ತಂತಿಗಳಿಂದ ಆವೃತ್ತವಾದ ಮಿಲಿಟರಿ ಸಂಬಂಧಿತ ಆಫೀಸುಗಳು, ಅಲ್ಲಲ್ಲಿ ಬಂದೂಕು ಹಿಡಿದ ಸೈನಿಕರು. ಚಳಿ, ಮಳೆ, ಗಾಳಿ, ಬಿಸಿಲು ಏನೇ ಇದ್ದರೂ ತಮ್ಮ ಕರ್ತವ್ಯದಿಂದ ಎಂದೂ ವಿಮುಖರಾಗದ ನಮ್ಮ ಸೈನಿಕರನ್ನು ಕಂಡಾಗ ಮನಸ್ಸು ಗೌರವದಿಂದ ತಲೆಬಾಗುತ್ತದೆ.

ಬೆಟ್ಟದ ಮೇಲಿರುವ ವಿಹಾರತಾಣ ಸೋನ್‌ಮಾರ್ಗ್. ಬಸ್‌ಗಳು ಕೆಳಗೇ ನಿಲ್ಲುತ್ತವೆ. ಕುದುರೆಯನ್ನೇರಿಯೇ ಮೇಲೆ ಹೋಗಬೇಕು. ಮೇಲೆ ಹಿಮದರ್ಶನ ಆಗುತ್ತದೆ. ಕೆಳಗೇ ನಿಂತು ಸುತ್ತ ಕಣ್ಣಾಡಿಸಿದರೆ, ಪ್ರಕೃತಿ ಸೌಂದರ್ಯವೇ ಇಲ್ಲಿ ಹೆಪ್ಪುಗಟ್ಟಿದೆಯೇನೋ ಎಂದೆನಿಸುತ್ತದೆ. ಸುತ್ತಲೂ ಸುಂದರ ಹಸಿರು ಬೆಟ್ಟ, ಆ ಬೆಟ್ಟದ ತುದಿಯೇ ಕಾಣದಂತೆ ಮುಚ್ಚುತ್ತಾ ಸಾಗುತ್ತಿರುವ ಮೋಡಗಳ ಹಿಂಡು. ಎಲ್ಲಿ ನೋಡಿದರೂ ಪೈನ್ ಮರಗಳು. ಅದರ ನಡುವೆ ಕಂಗೊಳಿಸುವ ಹಚ್ಚ ಹಸಿರ ಹುಲ್ಲಹಾಸು. ಬೆಟ್ಟವನ್ನು ಪ್ರಕೃತಿಮಾತೆ ಹಸಿರ ಹಾಸಿನಿಂದ ಅಲಂಕರಿಸಿದ್ದಾಳೇನೋ ಎಂದೆನಿಸುತ್ತದೆ. ಆ ಸುಂದರ ದೃಶ್ಯದಿಂದ ಕಣ್ಣ ದೃಷ್ಟಿ ನಾವು ನಿಂತ ನೆಲದೆಡೆಗೆ ಸಾಗಿದರೆ, ಕೊಚ್ಚೆ, ಕುದುರೆಗಳ ಲದ್ದಿ, ಯಾತ್ರಿಕರು ಪ್ರಸಾದಿಸಿದ ಪ್ಲಾಸ್ಟಿಕ್ ಕವರ್, ಬಾಟಲ್, ರಾಪರುಗಳು ಹುಣ್ಣಿನಂತೆ ಕಣ್ಣಿಗೆ ರಾಚುತ್ತದೆ.

ಅಲ್ಲಿಂದ ಹೊರಟು ಸುಮಾರು ಎರಡು ಗಂಟೆಗಳ ಕಾಲ ವಾಹನ ದಟ್ಟಣೆಯಲ್ಲಿ ಸಿಲುಕಿ ಅಲುಗಾಡದೆ ನಿಂತ ನಂತರ ನಮ್ಮ ಬಸ್ಸು ತೆವಳುತ್ತಾ ಸಾಗಿ ಡ್ರಾಸ್ ಎಂಬ ಸ್ಥಳವನ್ನು ತಲುಪಿದಾಗ ರಾತ್ರಿ ಸುಮಾರು 11.30ರ ಸಮಯ. ಚಿಕ್ಕ ಹೊಟೆಲಿನಲ್ಲಿ 15 ಜನರನ್ನು ಇಳಿಸಿ ಬಸ್ ಮುಂದುವರೆಯಿತು. ಅಲ್ಲಿ ಬಿಸಿಬಿಸಿ ಊಟ ಮಾಡಿ ಮಲಗಿದಾಗ ರಾತ್ರಿ 12.30. ಈ ಡ್ರಾಸ್ ಎಂಬುದು ಜಗತ್ತಿನ ಅತ್ಯಂತ ಶೀತಲ ಜನಾವೃತ ಪ್ರದೇಶಗಳಲ್ಲಿ ಎರಡನೆಯದು. ಚಳಿ ತಡೆಯಲಾಗದೆ ಥರ್ಮಲ್ ವೇರ್‌ಗಳನ್ನು ಧರಿಸಿದ್ದರೂ ಕೈಬೆರಳುಗಳು ಥಂಡಿಗೆ ಥರಗುಟ್ಟುತ್ತಾ ನಿದ್ದೆಯಿಂದ ಎಬ್ಬಿಸುತ್ತಿದ್ದವು.

ಬೆಳಿಗ್ಗೆ ಆಲೂಪರೋಟ ತಿಂದು ತಯಾರಾಗಿ ಕಾರ್ಗಿಲ್ ವಿಜಯ ಸ್ಮಾರಕಕ್ಕೆ ಹೋದೆವು. ದೇಶಕ್ಕಾಗಿ ಪ್ರಾಣ ತೆತ್ತ ವೀರ ಸೈನಿಕರನ್ನು ನೆನೆದು ಕಣ್ಣೀರು ಸುರಿಯುತ್ತದೆ. ಅಲ್ಲಿಯ ಪ್ರತಿಯೊಂದು ಸ್ಮಾರಕದ ಮುಂದೆ ಭಾವುಕರಾಗಿ ಗೌರವ ಸಮರ್ಪಿಸಿದೆವು. ಅಲ್ಲಿಯೇ ಇದ್ದ ಸೈನಿಕನೊಬ್ಬ ಕನ್ನಡದವನೆಂದು ಗೊತ್ತಾದಾಗ ಆದ ಆನಂದ ಅಸದಳ. ಹತ್ತು ನಿಮಿಷಗಳ ಸಾಕ್ಷ್ಯಚಿತ್ರ ನೋಡಿ ಮತ್ತೆ ನಮ್ಮ ಪಯಣ ಶುರು. ದಾರಿಯಲ್ಲಿ ಬರೇ ಬೆಟ್ಟಗುಡ್ಡ-ಪ್ರಪಾತ. ಆದರೆ ಆ ಬೆಟ್ಟಗಳ ವೈವಿಧ್ಯವಾದರೂ ಎಷ್ಟು ಭೂಶಾಸ್ತ್ರಜ್ಞರಿಗೆ ಮಹಾಗ್ರಾಸ ಆಗುವಷ್ಟು. ಕೆಲವು ಬೆಟ್ಟಗಳು ಸಂಪೂರ್ಣ ಹಸಿರಿನಿಂದಾವೃತ. ಮತ್ತೆ ಕೆಲವು ಮರಳಿನಿಂದ ಮಾಡಿದ್ದವೇನೋ ಎಂಬಂತೆ. ಬಣ್ಣಗಳೂ ಅಷ್ಟೇ ವೈವಿಧ್ಯಮಯ. ಎಲ್ಲ ಕಡೆಯೂ ಬೆಟ್ಟ ಕುಸಿದು ರಸ್ತೆಯವರೆಗೆ ಕಲ್ಲುಗಳು ಬಿದ್ದಿದ್ದರ ಗುರುತು ಹೇರಳವಾಗಿತ್ತು. ಬೋಳು ಬೆಟ್ಟಗಳ ಬೆನ್ನಿಗೇ ಒರಗಿ ನಿಂತಂತೆ ಕಾಣುತ್ತಿದ್ದ ಹಿಮಾಚ್ಛಾದಿತ ಶಿಖರಗಳು ಹೊಳೆಯುತ್ತಿದ್ದುವು.

ರಾತ್ರಿ ಹತ್ತು-ಹನ್ನೊಂದರ ಸುಮಾರಿಗೆ ಲೇಹ್ ತಲುಪಿ ವಾಹನಕ್ಕಾಗಿ ಪರದಾಡತೊಡಗಿದೆವು. ಕಾರಣ ನಮ್ಮ ಲಾಡ್ಜಿನಿಂದ ಬಲು ದೂರವೇ ನಮ್ಮ ಬಸ್ಸನ್ನು ಡ್ರೈವರ್ ನಿಲ್ಲಿಸಿಬಿಟ್ಟ, ಅಲ್ಲೆಲ್ಲ, ಅಂದರೆ ಸಣ್ಣ ಗಲ್ಲಿಗಳಲ್ಲಿ ದೊಡ್ಡ ವಾಹನ ತರಲಾಗುವುದಿಲ್ಲ ಎಂಬುದು ಅವನ ತಕರಾರು. **(ಮುಂದುವರೆಯುತ್ತದೆ)**

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ)
ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರ
ಜಾತ್ಯಾತೀತ ಜನತಾ ದಳ
ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರ
ಸದಸ್ಯತ್ವ ನೋಂದಣಿ ಅಭಿಯಾನ ಕಾರ್ಯಕ್ರಮ
ಜನರೊಂದಿಗೆ
ಜನತಾದಳ
ಸಶಕ್ತ ಜನತಾದಳ, ಸಮೃದ್ಧ ಕರ್ನಾಟಕ
ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ
ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿ ರವರಿಗೆ
ರಾಜ್ಯ ಯುವ ಜನತಾ ದಳ ಅಧ್ಯಕ್ಷರಾದ
ಹಾಗೂ
ಸನ್ಮಾನ್ಯ ಶ್ರೀ ನಿಖಿಲ್ ಕುಮಾರಸ್ವಾಮಿರವರಿಗೆ
ಹಾಗೂ ಪಕ್ಷದ ಮುಖಂಡರುಗಳಿಗೂ, ಜಿಲ್ಲೆಯ ಪದಾಧಿಕಾರಿಗಳು
ಕಾರ್ಯಕರ್ತರುಗಳಿಗೆ
ಸುಸ್ವಾಗತ
ಸುಸ್ವಾಗತ
17.05.2026 ಭಾನುವಾರ
10.30ಗಂಟೆ
ನಾಗಲಿಂಗೇಶ್ವರ-ಬೋಗೇಶ್ವರ ದೇವಸ್ಥಾನದ
ಎದುರು, ಬೋಗಾದಿ ರಿಂಗ್ ರಸ್ತೆ, ಮೈಸೂರು
ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ
ಜೆ.ಡಿ.ಎಸ್ ಪಕ್ಷದಸದಸ್ಯರಾಗಲು ಮಿಸ್ ಕಾಲ್ ಮಾಡಿ
9964002028

ಮೇ ತಿಂಗಳಲ್ಲೆ ಮೇ, ಜೂನ್ ತಿಂಗಳ ಪಡಿತರ ಆಹಾರ ಧಾನ್ಯ ವಿತರಣೆ





"ಪಡಿತರದಾರರು ತಮ್ಮ ಪಡಿತರವನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿದರೆ ಅಂತಹ ಪಡಿತರ ಚೀಟಿಯನ್ನು ರದ್ದುಪಡಿಸಲಾಗುವುದು. ಪಡಿತರ ವಿತರಣೆ ಸಂಬಂಧ ಯಾವುದೇ ದೂರುಗಳಿದ್ದರೆ ಕೇಂದ್ರ ಸಹಾಯವಾಣಿ ಸಂಖ್ಯೆ 1967 ಗೆ ಕರೆ ಮಾಡಬಹುದು. ಇಲ್ಲವೆ ಹತ್ತಿರದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಕಚೇರಿಗೆ ಕೂಡ ದೂರು ನೀಡಬಹುದು. –ಜಿ.ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ

ಮೈಸೂರು, ಮೇ16(ಬಿಎಲ್‌ಯು)– ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಮೇ ಮತ್ತು ಜೂನ್ ತಿಂಗಳ ಆಹಾರ ಧಾನ್ಯವನ್ನು ಮೇ ತಿಂಗಳಲ್ಲೆ ಉಚಿತವಾಗಿ ವಿತರಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಅಂತ್ಯೋದಯ ಅನ್ನ ಯೋಜನೆ (ಪಿಎವೈ) ಯೋಜನೆಯಲ್ಲಿ ಪಡಿತರ ಚೀಟಿ ವರ್ಗದವರಿಗೆ ಮೇ ತಿಂಗಳಲ್ಲಿ 21 ಕೆ.ಜಿ. ಹಾಗೂ ಜೂನ್ ತಿಂಗಳಲ್ಲಿ 21 ಕೆ.ಜಿ. ಸೇರಿ ಎರಡು ತಿಂಗಳ ಪಡಿತರವಾಗಿ 42 ಕೆ.ಜಿ. ಅಕ್ಕಿ ನೀಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಮೇ ತಿಂಗಳಲ್ಲಿ 14 ಕೆ.ಜಿ., ಜೂನ್ ತಿಂಗಳಲ್ಲಿ 14 ಕೆ.ಜಿ. ಸೇರಿ ಎರಡು ತಿಂಗಳ ಬಾಬ್ತಾಗಿ 28 ಕೆ.ಜಿ ರಾಗಿ ನೀಡಲಾಗುವುದು. ಆದ್ಯತಾ (ಪಿಹೆಚ್ ಹೆಚ್) ಕೇಂದ್ರ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ ಮೇ ತಿಂಗಳಲ್ಲಿ 2 ಕೆ.ಜಿ., ಜೂನ್ ತಿಂಗಳಲ್ಲಿ 2 ಕೆ.ಜಿ. ಸೇರಿ 4 ಕೆ.ಜಿ. ಅಕ್ಕಿ ವಿತರಣೆ ಮಾಡಲಾಗುವುದು. ಹಾಗೆಯೇ ಮೇ ತಿಂಗಳಲ್ಲಿ 3 ಕೆ.ಜಿ., ಜೂನ್ ತಿಂಗಳಲ್ಲಿ 3 ಕೆ.ಜಿ. ಸೇರಿ ಒಟ್ಟು 6 ಕೆ.ಜಿ. ರಾಗಿ ನೀಡಲಾಗುವುದು ಎಂದು ಹೇಳಿದ್ದಾರೆ.

ಆದ್ಯತಾ ರಾಜ್ಯ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ ಮೇ ತಿಂಗಳಲ್ಲಿ 5 ಕೆ.ಜಿ. ಹಾಗೂ ಜೂನ್ ತಿಂಗಳಲ್ಲಿ 5 ಕೆ.ಜಿ. ಸೇರಿ 10 ಕೆ.ಜಿ. ಅಕ್ಕಿ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಮೇ ತಿಂಗಳಲ್ಲೆ ಮೇ ಮತ್ತು ಜೂನ್ ತಿಂಗಳ ಪಡಿತರ ನೀಡಲಾಗುತ್ತಿದ್ದು, ಪಡಿತರ ಚೀಟಿದಾರರು ಕಡ್ಡಾಯವಾಗಿ ಎರಡು ಬಾರಿ ಬಯೋ ನೀಡಿ ಆಹಾರ ಧಾನ್ಯವನ್ನು ಪಡೆಯಬಹುದು. ಪ್ರತಿ ದಿನ ಬೆಳಿಗ್ಗೆ 6 ರಿಂದ ರಾತ್ರಿ 10 ಗಂಟೆವರೆಗೆ ಪಡಿತರ ವಿತರಣೆಗೆ ಸರ್ವರ್ ಲಭ್ಯವಿದ್ದು, ಈ ವೇಳೆ ಪಡಿತರ ಧಾನ್ಯ ಪಡೆಯಬಹುದು ಎಂದು ಸಲಹೆ ನೀಡಿದ್ದಾರೆ.

ಎರಡು ತಿಂಗಳ ಆಹಾರ ಧಾನ್ಯ ಪಡೆಯಲು ಮೇ 31 ಕೊನೆಯ ದಿನವಾಗಿದ್ದು, ತಿಂಗಳ ಅಂತ್ಯದವರೆಗೂ ಕಾಯದೆ ಶೀಘ್ರವಾಗಿ ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಪಡೆಯಬಹುದು ಎಂದು ಲಕ್ಷ್ಮೀಕಾಂತರೆಡ್ಡಿ ಸೂಚಿಸಿದ್ದಾರೆ.

2ಬಿ ಮೀಸಲಾತಿ ಮರುಸ್ಥಾಪಿಸಿ; ಗೋಹತ್ಯೆ ನಿಷೇಧ ರದ್ದು ಮಾಡಿ: ಮುಸ್ಲಿಂ ಸಮಾವೇಶದಲ್ಲಿ ರಾಜ್ಯ ಸರ್ಕಾರದ ಮುಂದೆ 10 ಬೇಡಿಕೆಗಳ ಪ್ರಸ್ತಾಪ



ಬೆಂಗಳೂರಿನ ಟೌನ್ ಹಾಲ್‌ನಲ್ಲಿ ನಡೆದ ಮುಸ್ಲಿಂ ಸಮಾವೇಶ

ಬೆಂಗಳೂರು: 2 ಬಿ ಮೀಸಲಾತಿ ಜಾರಿಗೆ ತರಬೇಕು, ಗೋಹತ್ಯೆ ನಿಷೇಧ ಕಾನೂನು ರದ್ದು ಮಾಡಬೇಕು ಎಂಬ ಬೇಡಿಕೆ ಒಳಗೊಂಡು ರಾಜ್ಯ ಸರ್ಕಾರದ ಮುಂದೆ ಮುಸ್ಲಿಂ ಸಮಾವೇಶದಲ್ಲಿ 10 ಬೇಡಿಕೆಗಳ ಪಟ್ಟಿಯನ್ನು ಮುಂದಿಡಲಾಗಿದೆ. ಶನಿವಾರ ಬೆಂಗಳೂರಿನ ಟೌನ್ ಹಾಲ್‌ನಲ್ಲಿ ನಡೆದ ಸಮಾವೇಶದಲ್ಲಿ ವಿವಿಧ ಮುಸ್ಲಿಂ ಸಂಘಟನೆಗಳು ಭಾಗಿಯಾಗಿದ್ದವು. ಸಮಾವೇಶದ ವೇದಿಕೆಯಲ್ಲಿ ಸಮುದಾಯದ ಬೇಡಿಕೆಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಯಿತು. ಹಾಗೂ ಇದನ್ನು ಈಡೇರಿಸುವಂತೆ ಆಗ್ರಹಿಸಲಾಯಿತು.

10 ಬೇಡಿಕೆಗಳೇನು


- ಮುಸ್ಲಿಮರಿಗೆ ಸಂವಿಧಾನ ಬದ್ಧವಾಗಿ ನೀಡಲಾಗಿದ್ದ 2 ಬಿ ಮೀಸಲಾತಿ ಕೂಡಲೇ ಜಾರಿಗೊಳಿಸಬೇಕು.
- ರಾಜ್ಯದಲ್ಲಿ ಮುಸ್ಲಿಮರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡಬೇಕು.
- ಸರ್ಕಾರದ ವಿವಿಧ ನಿಗಮ ಮಂಡಳಿಯಲ್ಲಿ ಮುಸ್ಲಿಮರಿಗೆ ಪ್ರಾತಿನಿಧ್ಯ ನೀಡಬೇಕು.
- ಗೋ ಹತ್ಯೆ ಪ್ರತಿಬಂಧಕ ಕಾಯ್ದೆಯನ್ನು ಕೂಡಲೇ ವಾಪಸ್ ಪಡೆದುಕೊಳ್ಳಬೇಕು.
- ಮುಸ್ಲಿಮರಿಗೆ ಸಾವಿರ ಕೋಟಿ ಅನುದಾನ ವಾಗ್ದಾನ ಈಡೇರಿಸಿ
- ವಕ್ಫ್ ಆಸ್ತಿಗಳ ಅತಿಕ್ರಮಣ, ಅಸಮರ್ಪಕ ಬಳಕೆ, ವಕ್ಫ್ ಅಭಿವೃದ್ಧಿ ವಿಚಾರವಾಗಿ ಸೂಕ್ತಕ್ರಮ.
- ರಾಜ್ಯ ಸರ್ಕಾರ ಕೂಡಲೇ ಜಾತಿ ಗಣತಿಯನ್ನು ಜಾರಿಗೊಳಿಸಬೇಕು.
- ಮುಸ್ಲಿಂ ವಿದ್ಯಾರ್ಥಿಗಳಿಗೆ ಶಿಕ್ಷಣದ ಅನುಕೂಲಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು.
- ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ರದ್ದು ಮಾಡಬೇಕು.
- ಎಸ್‌ಐಆರ್ ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯ ಕೈಗೊಳ್ಳಬೇಕು.

ಈ ಸಮಾವೇಶವನ್ನು ಉದ್ದೇಶಿಸಿ ನಿವೃತ್ತ ಪೊಲೀಸ್ ಅಧಿಕಾರಿ ಸುಹೈಲ್ ಅಹ್ಮದ್ ಮಾತನಾಡಿ, ಮುಸ್ಲಿಂ ಸಮುದಾಯದ ಹಕ್ಕುಗಳಿಗಾಗಿ ಮತ್ತು ಅಸ್ಮಿತೆಗಾಗಿ ನಡೆಯುತ್ತಿರುವ ಹೋರಾಟ ಇದಾಗಿದೆ. ಆದರೆ ಇಂತಹ ಹೋರಾಟವನ್ನು ತಡೆಯುವ ಪ್ರಯತ್ನ ನಡೆಸಲಾಗಿತ್ತು. ತಮ್ಮ ಬೇಡಿಕೆಗಳಲ್ಲಿ ಒಂದಾದ ಹಿಜಾಬ್ ನಿಷೇಧ ರದ್ದತಿಯನ್ನು ವಾಪಸ್ ಪಡೆಯಲಾಗಿದೆ. ಇದಕ್ಕೆ ನಮ್ಮ ಸಂಘಟನೆಯ ಒತ್ತಡವೇ ಕಾರಣ. ಹೀಗಾಗಿ ಸರ್ಕಾರಕ್ಕೆ ಧನ್ಯವಾದ ಸಲ್ಲಿಸುತ್ತೇವೆ ಎಂದರು.

ಮುಸ್ಲಿಂ ಸಮಾವೇಶ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ವಿರುದ್ಧ ಅಲ್ಲ. ಆದರೆ ಮುಸ್ಲಿಂ ಸಮುದಾಯಕ್ಕೆ ಕೊಟ್ಟ ಆಶ್ವಾಸನೆ ಈಡೇರಿಸಿದ್ಯಾ ಎಂಬುವುದನ್ನು ಜನರ ಮುಂದಿಡುವ ಉದ್ದೇಶ ಇದಾಗಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಸಮುದಾಯದ ಆಶೋತ್ತರಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಸಾಮಾಜಿಕ ಹೋರಾಟಗಾರ ಮಹಮ್ಮದ್ ಯಾಸೀನ್ ಮಲ್ಪೆ ಮಾತನಾಡಿ, ಚುನಾವಣೆಗೂ ಮೊದಲು ದ್ವೇಷ ಹರಡುವವರನ್ನು ನಿಯಂತ್ರಣ ಮಾಡುತ್ತೇವೆ ಎಂದು ಕಾಂಗ್ರೆಸ್ ಪಕ್ಷ ಭರವಸೆ ಕೊಟ್ಟಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ದ್ವೇಷ ಹರಡುವ ಸಂಘಟನೆಗಳ ವಿರುದ್ಧ ಕ್ರಮ ಏಕಿಲ್ಲ. ಹಿಜಾಬ್ ನಿಷೇಧ ವಾಪಸ್ ಪಡೆಯಲು ಇಷ್ಟು ದಿನ ಬೇಕಾಗಿತ್ತಾ. ಮುಸ್ಲಿಮರಿಗೆ ಸಂವಿಧಾನ ಬದ್ಧವಾಗಿ ನೀಡಲಾಗಿದ್ದ 2ಬಿ ಮೀಸಲಾತಿ ರದ್ದು ಮಾಡಲಾಗಿದೆ. ಆದರೆ, ಈವರೆಗೆ ಮೀಸಲಾತಿ ಮರುಸ್ಥಾಪಿಸಿಲ್ಲ ಕೂಡಲೇ 2 ಬಿ ಜಾರಿಗೊಳಿಸಬೇಕು. ಗೋಹತ್ಯೆ ನಿಷೇಧ ಕಾಯ್ದೆಯನ್ನು ರದ್ದು ಮಾಡಬೇಕು ಎಂದು ಒತ್ತಾಯಿಸಿದರು.

ಭಗವಂತನ ನಾಮ ಸ್ಮರಣೆಯಿಂದ ಅನಂತ ಫಲ



ಅಧಿಕ ಜ್ಯೇಷ್ಠ ಮಾಸದ ಅಂಗವಾಗಿ ಶ್ರೀಮನ್ ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಉತ್ತರಾದಿ ಮಠದ ವತಿಯಿಂದ ಅಗ್ರಹಾರದಲ್ಲಿ ಹಮ್ಮಿಕೊಂಡಿರುವ ಮೈಸೂರು ದಿಗ್ವಿಜಯ ವಿಶೇಷ ಕಾರ್ಯಕ್ರಮದ ಧರ್ಮ ಸಭೆಯಲ್ಲಿ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹಿರಿಯ ಪಂಡಿತ ಆದ್ಯ ಗೋವಿಂದಾಚಾರ್ಯರನ್ನು ಸನ್ಮಾನಿಸಲಾಯಿತು.

ಮೈಸೂರು, ಮೇ 16– ಭಗವಂತನ ನಾಮ ಸ್ಮರಣೆಯಿಂದ ಮಾತ್ರವೇ ಮಹಾನ್ ಯೋಗಿಗಳಿಗೂ ದೊರಕದ ಫಲವನ್ನು ಸಾಮಾನ್ಯ ಭಕ್ತರು ಗಳಿಸಬಹುದು ಎಂದು ಶ್ರೀ ಉತ್ತರಾದಿ ಮಠದ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ಹೇಳಿದರು.

ಅಧಿಕ ಜ್ಯೇಷ್ಠ ಮಾಸದ ಅಂಗವಾಗಿ ಶ್ರೀಮನ್ ಮಧ್ವಾ ಚಾರ್ಯ ಮೂಲ ಮಹಾ ಸಂಸ್ಥಾನ ಉತ್ತರಾದಿ ಮಠದಲ್ಲಿ ಹಮ್ಮಿಕೊಂಡಿರುವ ಮೈಸೂರು ದಿಗ್ವಿಜಯ ವಿಶೇಷ ಕಾರ್ಯಕ್ರಮ ಸರಣಿ ಭಾಗವಾಗಿ ಶನಿವಾರ ಸಂಜೆ ನಡೆದ ಧರ್ಮ ಸಭೆಯಲ್ಲಿ ಅವರು ಅನುಗ್ರಹ ಸಂದೇಶ ನೀಡಿದರು.

ಭಾಗವತವು ಪರಮ ಪಾವನ ಗ್ರಂಥ. ಇಲ್ಲಿ ಬರುವ ಕತೆಗಳು ಕೇವಲ ರಂಜನೆಗಾಗಿ ಅಥವಾ ಸಮಯ ಕಳೆಯುವುದಕ್ಕಾಗಿ ಅಲ್ಲ. ಇಲ್ಲಿ ಜೀವನದ ಸಂದೇಶವೇ ಅಡಕವಾಗಿದೆ. ಮೌಲ್ಯಗಳು ತುಂಬಿವೆ. ಅಧ್ಯಾತ್ಮ ಮಾರ್ಗದಲ್ಲಿ ಸಾಗಿಸುವ ಸೂತ್ರಗಳಿವೆ. ಒಟ್ಟಾರೆ ಬದುಕನ್ನು ಪಾವನವಾಗಿಸಲು ಬೇಕಾದ ಎಲ್ಲ ಅಂಶಗಳೂ ಇವೆ ಎಂದರು.

ನಿತ್ಯವೂ ದೇವರ, ಗುರುಗಳ ಸೇವೆ ಮಾಡಿ. ಭಗವಂತನಿಗೆ ನೈವೇದ್ಯ ಮಾಡಿದ ಆಹಾರವನ್ನೇ ಸೇವಿಸಿ. ಪುಣ್ಯ ನದಿಗಳಲ್ಲಿ ಸ್ನಾನ ಮಾಡಿ. ಯಾರನ್ನೂ ನಿಂದಿಸಬೇಡಿ. ಜ್ಞಾನಿಗಳು, ಪಂಡಿತರ ದರ್ಶನ ಮಾಡಿ, ಆಶೀರ್ವಾದ ಪಡೆಯಿರಿ. ಇದರಿಂದ ಮಾನವ ಜನ್ಮ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಇದೇ ವೇಳೆ ಪಂಡಿತ ಪ್ರಭಂಜನಾಚಾರ್ಯ ವಿದ್ಯಾಪತಿ ಅವರು ಪ್ರವಚನ ನೀಡಿದರು. ವಿದ್ವಾನ್ ಪ್ರಣವ ಶ್ರೀಪಾದ ಅವರ ದಾಸ ಲಹರಿ ಗಾಯನ ನೆರೆದಿದ್ದವರನ್ನು ಭಕ್ತಿಸಾಗರದಲ್ಲಿ ತೇಲಿಸಿತು.

ಮಹಾಭಾರತ ತಾತ್ಪರ್ಯ ನಿರ್ಣಯ ಉಪನ್ಯಾಸ ನೀಡಿದ ಹಿರಿಯ ಪಂಡಿತ ಆದ್ಯ ಗೋವಿಂದಾಚಾರ್ಯ ಮತ್ತು ರಂಗನಾಥಾಚಾರ್ಯ ಕಟ್ಟಿ ಅವರನ್ನು ಗೌರವಿಸಲಾಯಿತು. ಬೆಳಗ್ಗೆ ಧನ್ವಂತರಿ ಸನ್ನಿಧಿಯಲ್ಲಿ ಶ್ರೀಗಳಿಂದ ಸಂಸ್ಥಾನ ಪೂಜೆ, ಭಕ್ತರಿಗೆ ಮುದ್ರಾ ಧಾರಣೆ ನಡೆಯಿತು.

ಇಂದು ಅಧಿಕ ಮಾಸದ ಕಾರ್ಯಕ್ರಮ ಉದ್ಘಾಟನೆ

ಅಧಿಕ ಮಾಸದ ಅಂಗವಾಗಿ ಅಗ್ರಹಾರ ಮುಖ್ಯ ರಸ್ತೆಯಲ್ಲಿರುವ ಶ್ರೀ ರುದ್ರ ದೇವರ ಸನ್ನಿಧಿ ಆವರಣದ ಬೃಹತ್ ವೇದಿಕೆಯಲ್ಲಿ ಭಾನುವಾರ(ಮೇ 17) ಸಂಜೆ 6ಕ್ಕೆ ಅಧಿಕ ಮಾಸೋತ್ಸವ 33 ದಿನಗಳ ಸರಣಿ ವಿಧ್ಯುಕ್ತವಾಗಿ ಉದ್ಘಾಟನೆಗೊಳ್ಳಲಿದೆ. ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ನಗರದ ಗಣ್ಯರು, ಪಂಡಿತರು ಭಾಗವಹಿಸಲಿದ್ದಾರೆ.

ರಾಜೀವ್‌ಗಾಂಧಿ ಸದ್ಭಾವನ ಜ್ಯೋತಿ ಯಾತ್ರೆ ಆಗಮನ

ಗಾಂಧಿ ವೃತ್ತದಲ್ಲಿ ಸ್ವಾಗತ, ರಾಜೀವ್‌ಗಾಂಧಿ ಸೇವೆ ಸ್ಮರಿಸಿದ ನಾಯಕರು



ಮಾಜಿ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಅವರ 35ನೇ ವರ್ಷದ ಸದ್ಭಾವನ ಜ್ಯೋತಿ ಯಾತ್ರೆಯನ್ನು ಮೈಸೂರಿನ ಗಾಂಧಿ ವೃತ್ತದ ಬಳಿ ಬರಮಾಡಿಕೊಳ್ಳಲಾಯಿತು.

ಮೈಸೂರು,ಮೇ 16(ಜಿಎ)–ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಮಾಜಿ ಪ್ರಧಾನಮಂತ್ರಿ ರಾಜೀವ್ ಗಾಂಧಿ ಅವರ 35ನೇ ವರ್ಷದ ಸದ್ಭಾವನ ಜ್ಯೋತಿ ಯಾತ್ರೆಯನ್ನು ಮೈಸೂರಿನ ಗಾಂಧಿ ವೃತ್ತದ ಬಳಿ ಬರಮಾಡಿಕೊಳ್ಳಲಾಯಿತು.

ರಾಜೀವ್ ಗಾಂಧಿ ಜ್ಯೋತಿ ಸ್ವಾಗತಿಸಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ನವ ಯುಗದ ಕನಸುಗಾರನಾಗಿ ರಾಜೀವ್ ಹೊಸ ಆಲೋಚನೆಗಳ ಮುಖಾಂತರ ಭಾರತದಲ್ಲಿ ಸಮರ್ಪಕ ಕ್ರಾಂತಿಯನ್ನು ತಂದರು. ಭಾರತದಲ್ಲಿ ಕಂಡು ಬಂದ ಬಹುಮತ ಆಧಾರಿತ ಪ್ರಜಾತಂತ್ರ ಬಿಕ್ಕಟ್ಟು ಹಾಗೂ ರಾಜಕೀಯ ಪಕ್ಷಗಳ ಆಂತರಿಕ ಕಲಹಗಳನ್ನು ನಿಗ್ರಹಿಸಲು 1985 ರಲ್ಲಿ ಪಕ್ಷಾಂತರ ನಿಷೇಧ ಕಾಯ್ದೆ ಜಾರಿಗೆ ತಂದ ಮುಂದಾಲೋಚನೆಯ ರಾಜಕೀಯ ನಾಯಕ. 80ರ ದಶಕದಲ್ಲೇ ಮೇಕ್ ಇನ್ ಇಂಡಿಯಾ ಜಾರಿಗೆ ತಂದು ಹೊಸ ಯುಗಕ್ಕೆ ನಾಂದಿ ಹಾಡಿದರು ಎಂದರು.

ಭಾರತದಲ್ಲಿ ಆಂತರಿಕ ಭದ್ರತೆಯಲ್ಲಿ ಅಶಾಂತಿ ಉಂಟಾದಾಗ ಆಂತರಿಕ ಶಾಂತಿ ಒಪ್ಪಂದಗಳನ್ನು ಮಾಡಿ ದೇಶದಲ್ಲಿ ದಂಗೆಗಳನ್ನು ಶಮನ ಮಾಡಿದರು. ಅದರಲ್ಲಿ ಪಂಜಾಬ್, ಅಸ್ಸಾಂ ಹಿಂಸಾಚಾರವನ್ನು ಮರೆಯುವಂತಿಲ್ಲ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಯೋತ್ಪಾದನೆ ಉಂಟಾದಾಗ ಭಯೋತ್ಪಾದನಾ ನಿಗ್ರಹಕ್ಕಾಗಿ ಶಾಂತಿಯ ಸೇನೆ ಕಟ್ಟಬೇಕು ಎಂಬ ಸಲಹೆಯನ್ನು ವಿಶ್ವಸಂಸ್ಥೆಗೆ ನೀಡಿದರು. ಸಂವಿಧಾನಕ್ಕೆ 61ನೇ ತಿದ್ದುಪಡಿ ತಂದು ಮತದಾನದ ವಯಸ್ಸನ್ನು 18 ವರ್ಷಕ್ಕೆ ಇಳಿಸಿದರು ಎಂದು ಸ್ಮರಿಸಿದರು.

ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್ ಮಾತನಾಡಿ, ಶ್ರೀಲಂಕಾದಲ್ಲಿ ಅಂದು ಆರಂಭವಾದ ಆಂತರಿಕ ದಂಗೆಯನ್ನು ಶಮನಗೊಳಿಸಲು ರಾಜೀವ್ ಗಾಂಧಿ ಅವರು ಭಾರತದಿಂದ ಶಾಂತಿ ಪಡೆಯನ್ನು ಶ್ರೀಲಂಕಾಕ್ಕೆ ಕಳಿಸಿದ ಕಾರಣದಿಂದಾಗಿ ಎಲ್‌ಟಿಟಿಇ ಉಗ್ರಗಾಮಿಗಳು ರಾಜೀವ್ ಗಾಂಧಿಯನ್ನು ಹತ್ಯೆ ಮಾಡಿದ್ದು ಇದೊಂದು ಐತಿಹಾಸಿಕ ದುರಂತ ಎಂದರು.

ಈ ಸಂದರ್ಭದಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ ಮಾತನಾಡಿ, ರಾಜೀವ್ ಗಾಂಧಿ ಜ್ಯೋತಿ ಯಾತ್ರೆಯನ್ನು ಆರಂಭಿಸಿದ ದಿವಂಗತ ಪ್ರಕಾಶಮ್ ಅವರನ್ನು ನೆನೆದರು, ಹಾಗೆಯೇ ಜ್ಯೋತಿಯಾತ್ರೆಯ ದೊರೆರಾಜ್ ಮತ್ತು ತಂಡಕ್ಕೆ ಅಭಿನಂದನೆ ಸಲ್ಲಿಸಿ, ರಾಜೀವ್ ಗಾಂಧಿ ಅವರ ಆಲೋಚನೆಯಂತೆ ಹೊಸ ಯುವ ನಾಯಕತ್ವ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಹುಟ್ಟಿ ಬರಲಿ ಎಂದು ಆಶಿಸಿದರು. ಈ ಸಂದರ್ಭದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಹಿಳಾ ಕಾಂಗ್ರೆಸ್ ನಗರ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಜಿಲ್ಲಾ ಅಧ್ಯಕ್ಷೆ ಪ್ರೇಮಾಶಂಕರ್, ಮುಖಂಡರಾದ ಎಂ.ಶಿವಣ್ಣ ಶಿವಪ್ರಸಾದ್, ಗಿರೀಶ್, ನಾಗೇಶ್, ಭಾಸ್ಕರ್ ಗೌಡ, ರವಿ ಮಂಚೇಗೌಡನಕೊಪ್ಪಲು, ರಮೇಶ್, ಸಕ್ಕಳ್ಳಿ ಬಸವರಾಜ್, ಮಹದೇವ್, ಶಾಮ ಯೋಗೇಶ್, ಎಂ.ಕೆ.ಅಶೋಕ್, ಮೋಹನ್, ರಾಹುಲ್ ಕುಂಬರಹಳ್ಳಿ, ಸಿದ್ದಲಿಂಗಪುರ ಪ್ರವೀಣ್, ತನುಜಾ ಮಹೇಶ್, ಆಶಾ, ಭವ್ಯ, ಸುನಿಲ್, ನಾರಾಯಣ್, ರಾಜಶೇಖರ್, ಮಾದಾಪುರ ಲೋಕೇಶ್, ವಕೀಲರಾದ ಮಂಜುನಾಥ್, ಮುರುಡೇಶ್, ಮಾಯಮ್ಮ ಇತರರು ಉಪಸ್ಥಿತರಿದ್ದರು.

ಪ್ರಶಸ್ತಿ ಪ್ರದಾನ



ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ 'ಮೈಸೂರು ಮಿತ್ರ' ಅಂಕಣಕಾರರೂ ಆದ ಸಂಗೀತ ವಿಮರ್ಶಕಿ ಡಾ.ರಮಾ ವಿ.ಬೆಣ್ಣೂರ್ ಅವರಿಗೆ ಅನನ್ಯ ಸಾಂಸ್ಕೃತಿಕ ಅಕಾಡೆಮಿ ವತಿಯಿಂದ 'ಅನನ್ಯ ಶಾಸ್ತ್ರ ಕೌಸ್ತುಭ' ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಲಾಯಿತು.

ಇಸ್ರೇಲ್ ದಾಳಿಯಲ್ಲಿ ಹಮಾಸ್ ಸೇನಾ ಮುಖ್ಯಸ್ಥ ಹದ್ದಾದ್ ಸಾವು

ಕೈರೊ: ಇಸ್ರೇಲ್ ಸೇನೆಯು ತಮ್ಮನ್ನು ಗುರಿಯಾಗಿಸಿಕೊಂಡು ವೈಮಾನಿಕ ದಾಳಿ ನಡೆಸಿದೆ ಎಂದು ಘೋಷಿಸಿದ್ದ ಹಮಾಸ್ ಮಿಲಿಟರಿ ವಿಭಾಗದ ಮುಖ್ಯಸ್ಥ ಅಲ್–ದಿನ್ ಅಲ್–ಹದ್ದಾದ್, ಮರುದಿನವೇ ಮೃತಪಟ್ಟಿದ್ದಾರೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇದಕ್ಕೂ ಮುನ್ನ, ಗಾಜಾ ನಗರದ ಮಸೀದಿಗಳು ಇಜ್ ಹದ್ದಾದ್ ಅವರು ಸಾವಿಗೀಡಾಗಿರುವುದಾಗಿ ಘೋಷಿಸಿವೆ ಎಂದು ವರದಿಯಾಗಿದೆ.

ಗಾಜಾದಲ್ಲಿನ ಯುದ್ಧವನ್ನು ನಿಲ್ಲಿಸುವ ಉದ್ದೇಶದಿಂದ ಅಕ್ಟೋಬರ್‌ನಲ್ಲಿ ಅಮೆರಿಕ ಬೆಂಬಲಿತ ಕದನ ವಿರಾಮ ಒಪ್ಪಂದ ಏರ್ಪಟ್ಟ ನಂತರ ಇಸ್ರೇಲ್‌ನಿಂದ ಕೊಲ್ಲಲ್ಪಟ್ಟ ಅತ್ಯಂತ ಹಿರಿಯ ಹಮಾಸ್ ಅಧಿಕಾರಿ ಇವರಾಗಿದ್ದಾರೆ. ಆದಾಗ್ಯೂ, ಹಮಾಸ್ ಸಂಘಟನೆಯು ಹದ್ದಾದ್ ಅವರ ಸಾವನ್ನು ಅಧಿಕೃತವಾಗಿ ಖಚಿತಪಡಿಸಿಲ್ಲ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಶುಕ್ರವಾರ ರಕ್ಷಣಾ ಸಚಿವರೊಂದಿಗೆ ಜಂಟಿ ಹೇಳಿಕೆ ನೀಡಿ, ಹದ್ದಾದ್ ಅವರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿತ್ತು ಎಂದು ಹೇಳಿದ್ದರಾದರೂ, ಅವರು ಮೃತಪಟ್ಟಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟಪಡಿಸಿರಲಿಲ್ಲ.

2023ರ ಅಕ್ಟೋಬರ್ 7ರಂದು ಹಮಾಸ್ ಉಗ್ರರು ಇಸ್ರೇಲ್ ಮೇಲೆ ನಡೆಸಿದ ಮತ್ತು ಪ್ರಸ್ತುತ ಗಾಜಾ ಮೇಲಿನ ಇಸ್ರೇಲ್‌ನ ನಿರಂತರ ದಾಳಿಗೆ ಕಾರಣವಾದ ಆ ಭೀಕರ ದಾಳಿಯ ಪ್ರಮುಖ ಸಂಚುಗಾರರಲ್ಲಿ ಹದ್ದಾದ್ ಕೂಡ ಒಬ್ಬರಾಗಿದ್ದರು ಎಂದು ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ.

2025ರ ಮೇನಲ್ಲಿ ಮೊಹಮ್ಮದ್ ಸಿನ್ವರ್ ಅವರನ್ನು ಇಸ್ರೇಲ್ ಕೊಂದ ನಂತರ ಹದ್ದಾದ್, ಹಮಾಸ್‌ನ ಮಿಲಿಟರಿ ಮುಖ್ಯಸ್ಥರಾಗಿದ್ದರು. ಈತ ಸಾವಿರಾರು ಇಸ್ರೇಲಿ ನಾಗರಿಕರು ಮತ್ತು ಸೈನಿಕರ ಕೊಲೆ, ಅಪಹರಣ ಮತ್ತು ಅವರಿಗೆ ಹಾನಿ ಉಂಟುಮಾಡಲು ಕಾರಣವಾಗಿದ್ದರು ಎಂದು ಕಾಟ್ಜ್ ತಿಳಿಸಿದ್ದಾರೆ.

ಅಭಿನಂದನೆ



ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಸಿದ್ದರಾಮಯ್ಯನವರ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಮಂಚೇಗೌಡನಕೊಪ್ಪಲು ರವಿ (ಡೆಲ್ಲಿ ರವಿ) ಅಭಿನಂದಿಸಿದರು. ಈ ವೇಳೆ ಡಿಕೆ ಗ್ರೂಪ್ ಕಾಂತರಾಜ್ ಗೌಡ, ಹೆಬ್ಬಾಳ್ ಹರೀಶ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.5.2026 ಭಾನುವಾರ, ಮಳೆ ನಕ್ಷತ್ರ: ಕೃತಿಕ 11.05.2026ರಿಂದ 24.05.2026ರವರೆಗೆ
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಕೃತಿಕ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್** : ಬೆಳಗ್ಗೆ 9 ರಿಂದ 10.30 ರವರೆಗೆ ಶ್ರೀ ಶ್ಯಾಮಾ ಶಾಸ್ತ್ರಿಗಳ ದಿನಾಚರಣೆ ಅಂಗವಾಗಿ ನಾದನಮನ–ವೈಯಕ್ತಿಕ ಪ್ರಸ್ತುತಿಗಳು, 10.30 ರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಕಛೇರಿ, ವಿದುಷಿ ಡಾ. ಆರ್.ಎನ್. ಶ್ರೀಲತಾ ಅವರಿಂದ ಗಾಯನ, ವಿದುಷಿ ಡಾ. ವೀಣಾ ಸುರೇಶ್–ಪಿಟೀಲು, ವಿದ್ವಾನ್ ಜಿ.ಎಸ್. ರಾಮಾನುಜನ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಸ್ಥಳ: ಶ್ರೀ ವಿದ್ಯಾಭಾರತಿ ಪ್ರಾರ್ಥನಾ ಮಂದಿರ, ಶ್ರೀ ಚಂದ್ರಮೌಳೀಶ್ವರ ದೇವಸ್ಥಾನ, ವಿ.ವಿ. ಮೊಹಲ್ಲಾ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಕಾಡಬಮ್ಸ್ ಮೆಂಟಲ್ ಹೆಲ್ತ್ ಕೇರ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್** : ಕಡಬಮ್ ಎಂ. ರಮೇಶ್ ಅವರ ಆತ್ಮಕಥನ 'ಸಾರ್ಥಕ ಬದುಕು' ಬಿಡುಗಡೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಚಿವ ಎಸ್.ಎ. ರಾಮದಾಸ್, ಅಖಿಲ ಭಾರತ ಆರ್ಯ ವೈಶ್ಯ ಮಹಾಸಭಾ ಅಧ್ಯಕ್ಷ ಆರ್.ಪಿ. ರವಿ ಶಂಕರ್, ಮಾಜಿ ಮೇಯರ್ ಎಚ್.ಎನ್. ಶ್ರೀಕಂಠಯ್ಯ, ಕರೂರ್ ವೈಶ್ಯ ಬ್ಯಾಂಕ್ ಲಿಮಿಟೆಡ್‌ನ ನಿರ್ದೇಶಕ ಎಂ.ವಿ. ಶ್ರೀನಿವಾಸಮೂರ್ತಿ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಸಭಾಂಗಣ, ಬೆಳಗ್ಗೆ 10ಕ್ಕೆ
- **ಮೈಸೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ, ಮೈಸೂರು ಜಿಲ್ಲಾ ನೀತಿ ಸಂಶೋಧನೆ ಮತ್ತು ತರಬೇತಿ ವಿಭಾಗ** : ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬ್ಲಾಕ್, ಬೂತ್ ಮಟ್ಟದ ಸಮಿತಿ ಪದಾಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಪ್ರಾಸ್ತಾವಿಕ ನುಡಿ : ಮೈಸೂರು ಜಿಲ್ಲಾ ಕಾಂಗ್ರೆಸ್ ಗ್ರಾಮಾಂತರ ವಿಭಾಗದ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಮುಖ್ಯ ಅತಿಥಿಗಳು : ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ರಘು ದೊಡ್ಡೇರಿ, ಲಕ್ಷ್ಮಣ್, ಶ್ರೀಮತಿ ಪುಷ್ಪಾ ಅಮರನಾಥ್, ಶ್ರೀಮತಿ ಪುಷ್ಪಲತಾ ಚಿಕ್ಕಣ್ಣ, ಶ್ರೀಮತಿ ಪ್ರತಿಮಾ, ಸ್ಥಳ: ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ, ಕುವೆಂಪುನಗರ, ಬೆಳಗ್ಗೆ 10.30 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಚರ್ಮ ಆರೈಕೆ ಮತ್ತು ಡಿಟಾಕ್ಸಿಫಿಕೇಶನ್ ಯೋಗ ಶಿಬಿರ, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಸಂಧಿವಾತ, ಮಂಡಿ ನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ತಾರಾ ಪ್ರಕಾಶನ ಮತ್ತು ಗಂಗೋತ್ರಿ ಜೈನ್ ಮಿಲನ್** : ಡಾ. ಎಸ್. ಅರುಣಕುಮಾರಿ ಅವರ ಮೈಸೂರು ಜಿಲ್ಲೆಯ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ ಕೃತಿ ಲೋಕಾರ್ಪಣೆ ಕಾರ್ಯಕ್ರಮ, ಸಾನ್ನಿಧ್ಯ: ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ, ಕೃತಿ ಲೋಕಾರ್ಪಣೆ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್, ಅಧ್ಯಕ್ಷತೆ : ಮೈಸೂರು ವಿವಿ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎಸ್.ಡಿ. ಶಶಿಕಲಾ, ಕೃತಿ ಕುರಿತು : ಪ್ರಿನ್ಸಿಪಾಲ್ ಡಾ. ಪಿ. ಬೆಟ್ಟೇಗೌಡ, ಮುಖ್ಯ ಅತಿಥಿಗಳು : ಭಾರತೀಯ ಜೈನ್ ಮಿಲನ್ ಗೌರವ ಅಧ್ಯಕ್ಷೆ ಶ್ರೀಮತಿ ಶೀಲಾ ಅನಂತರಾಜು, ರಾಷ್ಟ್ರೀಯ ಉಪಾಧ್ಯಕ್ಷ ಎನ್. ಪ್ರಸನ್ನಕುಮಾರ್, ಉಪಾಧ್ಯಕ್ಷ ಸಿ.ಎಸ್. ನಾಗರಾಜು, ಗಂಗೋತ್ರಿ ಜೈನ್ ಮಿಲನ್ ಅಧ್ಯಕ್ಷ ಹೆಚ್.ಎನ್. ಅನಿಲ್ ಕುಮಾರ್, ದಿಗಂಬರ ಜೈನ ಸಮಾಜದ ಅಧ್ಯಕ್ಷ ಸುನಿಲ್ ಕುಮಾರ್, ಪದ್ಮಶ್ರೀ ಜೈನ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ನಂದಿನಿ, ಶ್ರೀ ಶಾಂತಿನಾಥ ಸೇವಾ ಸಮಿತಿ ಅಧ್ಯಕ್ಷ ಎಸ್.ಬಿ. ಸುರೇಶ್ ಜೈನ್, ಎಂ.ಎನ್. ಶಶಿಕುಮಾರ್, ಸ್ಥಳ: ಶ್ರೀ ಶಾಂತಿನಾಥ ಸ್ವಾಮಿ ಬಸದಿ (ಕೋಟೆ ಬಸದಿ), ಮಧ್ಯಾಹ್ನ 3.30ಕ್ಕೆ
- **ರಂಗಾಯಣ** : ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ನಾಟಕ ಪ್ರದರ್ಶನ, ಭೂಮಿಗೀತ –ಹ್ಯಾಮ್ಲೆಟ್, ನಿರ್ದೇಶನ : ರವಿ ಕೆ.ಎಂ., ಶ್ರೀರಂಗ–ಪೊಲೀಸರಿದ್ದಾರೆ ಎಚ್ಚರಿಕೆ, ನಿರ್ದೇಶನ : ಎಂ. ಮದನ್‌ರಾಜ್, ಬಿ.ವಿ. ಕಾರಂತ ರಂಗಚಾವಡಿ–ಅಂತಿಗೊನೆ, ನಿರ್ದೇಶನ : ಸರ್ವೇಶ, ಸಂಜೆ 5 ರಿಂದ
- **ಮೈಸೂರಿನ ಗಾನ ಲಹರಿ ಸಂಸ್ಥೆ** : 'ಚಿತ್ರಮಂಜರಿ' ಸಂಗೀತ ಕಾರ್ಯಕ್ರಮ, ಸ್ಥಳ: ಎಂಬಿಸಿಟಿ ಆಡಿಟೋರಿಯಂ, ವಿಶ್ವೇಶ್ವರ ನಗರ, ವಿದ್ಯಾರಣ್ಯಪುರಂ, ಸಂಜೆ 5.30ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ರಂಗವಲ್ಲಿ** : ರಂಗವಲ್ಲಿ ಕಲಾವಿದರಿಂದ ಪರಮೇಶಿ ಪ್ರೇಮ ಪ್ರಸಂಗ ಹಾಸ್ಯ ನಾಟಕ ಪ್ರದರ್ಶನ, ರಂಗ ನಿರ್ದೇಶಕ : ಶ್ರೀನಿವಾಸ ಪ್ರಭು, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.
- **ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್** : ವರ್ಲ್ಡ್ ಟೆಲಿಕಮ್ಯೂನಿಕೇಷನ್ ಅಂಡ್ ಇನ್‌ಫಾರ್ಮೇಷನ್ ಸೊಸೈಟಿ ಡೇ, ಗ್ಲೋಬಲ್ ಲ್ಯಾಬ್ ಸೆಲ್ಯೂಷನ್ಸ್ ನಿರ್ದೇಶಕ ಡಾ. ರಾಮಚಂದ್ರ ಗಂಭೀರ್ ಅವರಿಂದ ದಿ ರೋಲ್ ಆಫ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಇನ್ ಮಾಡರ್ನ್ ಟೆಲಿಕಮ್ಯೂನಿಕೇಷನ್ ಕುರಿತು ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಹೆಚ್.ಎಸ್. ಸುರೇಶ್ ಬಾಬು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ– ಪೂವಪ್ಪ ಕಾಣಿಯೂರು, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ ಶಾಂತಕುಮಾರ್, 8.30 ನಾ ಕಸ್ತೂರಿ ಅವರ ಪಾತಾಳದಲ್ಲಿ ಪಾಪಚ್ಚಿ ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್. ಎಸ್., 8.35 ಚಿತ್ರಗೀತೆಗಳು, 9.25 ನಮ್ಮ ಆರೋಗ್ಯ–ವಿಶ್ವ ರಕ್ತದೊತ್ತಡ ಜಾಗೃತಿ ದಿನದ ಸಂದರ್ಭದಲ್ಲಿ ರಕ್ತದೊತ್ತಡ ಮತ್ತು ಹೃದಯದ ಆರೋಗ್ಯ ಈ ಕುರಿತು ಮೈಸೂರಿನ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ನಿರ್ದೇಶಕರು ಹಾಗೂ ಹೃದ್ರೋಗ ವಿಭಾಗದ ಮುಖ್ಯಸ್ಥರಾದ ಡಾ. ವಿ. ಕೇಶವಮೂರ್ತಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಡಾ. ಕುಲದೀಪ್ .ಎನ್., 10.00 ಕೇಳಿಗಿಳಿಗಳೇ, ಕಥೆ ಹೇಳ್ತೀಯೋ ಹಾಡು ಹೇಳ್ತೀಯೊ – ನೇರ ಫೋನ್–ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ–ಚೈತನ್ಯ ಚಿಲುಮೆ ಮಾಲಿಕೆಯಲ್ಲಿ ಉದಯೋನ್ಮುಖ ಈಜುಗಾರ್ತಿ ಐ. ಸಿ. ಭುವೈನಿಕಾ ಹಾಗೂ ಅವರ ತಂದೆ ಡಾ. ಚೇತನ್ ಐ.ಎ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ –ದಿಗ್ವಿಜಯ್ .ಬಿ., 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ – ಕುಂಭಕಲೆಯಿಂದ ದಾಖಲೆಗಳವರೆಗೆ– ಜ್ಯೋತಿ ನಾಗರಾಜು ಅವರೊಂದಿಗೆ ಸಂದರ್ಶನ, ಸಂದರ್ಶಕರು : ಆಶಾ, 12.35 ಭಕ್ತಿಗೀತೆಗಳು, 12.45 ಜನಪದ ಸಂಗೀತ : ಟಿ. ನರಸೀಪುರ ತಾಲ್ಲೂಕು ಕಯ್ಯಂಬಳ್ಳಿಯ ಇಂದಿರಮ್ಮ ಮತ್ತು ಸಂಗಡಿಗರಿಂದ ಮನೆಯಮ್ಮನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನ ಮಂತ್ರಿ ಗ್ರಾಮೀಣ ಅಂಚೆ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು–ಆರ್. ವಿ. ಅನುಪಮಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿಸಿ – ಪ್ರತಿಧ್ವನಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ: ಅಕ್ರೂರನ ಕೃಷ್ಣ ದರ್ಶನ, ಪ್ರಸ್ತುತಿ–ದಿವಾಕರ ಹೆಗಡೆ ಕೆರೆ ಹೊಂಡ, ಭಾಗವತರು–ಅನಂತ ಹೆಗಡೆ ದಂತಳಿಗೆ, ಮದ್ದಲೆ ವಾದಕರು–ಅನಂತ ಪದ್ಮನಾಭ ಫಾಟಕ್, 4.45 ಚಿತ್ರಗೀತೆಗಳು, 6.50 ಕೃಷಿರಂಗ : ಹಟ್ಟಿಹರಟೆ ವಾರದ ಗ್ರಾಮೀಣ ಚರ್ಚೆ, ಪ್ರಸ್ತುತಿ: ಎನ್. ಕೇಶವಮೂರ್ತಿ, ಬಿ.ಜಿ. ಕವಿತಾ, ಡಾ. ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ –ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಜಿ. ಎನ್. ಮಂಜುನಾಥ್, 7.45 ಕನ್ನಡದಲ್ಲಿ ಭಾಷಣ, 8.00 ಮಣಿಪಾಲದ 'ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಒಂಊಇ) ಸಂಸ್ಥೆಯ 33ನೇ ಘಟಿಕೋತ್ಸವದ ಬಾನುಲಿ ವರದಿ, ಪ್ರಾಯೋಜಕರು– 'ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಮಣಿಪಾಲ, 8.15 ಫಸ್ಟ್ ಫಿಲ್ಮ್, ಪ್ರಸ್ತುತಿ –ಎಸ್. ಶ್ರೀಮಾನ್, 9.30 ರಾಷ್ಟ್ರೀಯ ನಾಟಕ 'ಕೆಲವು ಕ್ಷಣದ ಸಿಂಧೂರ', ಮೂಲ : ಪ್ರಭಾತಸಿಂಹ ಪಾಲಿ, ಬಾನುಲಿಗೆ ಅಳವಡಿಸಿದವರು : ವಿನೋದ್ ಕುಮಾರ್, ಕನ್ನಡಕ್ಕೆ : ಶ್ರೀನಿವಾಸ ಪ್ರಸಾದ್, ನಿರ್ಮಾಣ : ಎಸ್. ಆರ್. ಭಟ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ – ವಿವೇಕ್ ಸೋನಾರ್ – ಬಾನ್ಸುರಿ ವಾದನ

10ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ವೈ.ಎನ್ ಕಮಲಮ್ಮ

ದಿ.ಡಾ.ಎಸ್.ಸುಬ್ರಮಣ್ಯಂ ಚರ್ಮರೋಗ ತಜ್ಞರು ಇವರ ಧರ್ಮಪತ್ನಿ, ಬೃಂದಾವನ ಬಡಾವಣೆ, ಮೈಸೂರು ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಮಗ, ಹೆಣ್ಣು ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಬಂಧುಗಳು, ಅಪಾರ ಮಿತ್ರ ಬಳಗ,





ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ







ಅನಧಿಕೃತ ಚರ್ಚ್ ಉದ್ಘಾಟನೆಗೆ ಗ್ರಾಮಸ್ಥರ ತಡೆ

ಮಡಿಕೇರಿ, ಮೇ 16–ಸುಂಟಿಕೊಪ್ಪ ಸಮೀಪದ ಹೇರೂರು ಹಾಡಿಯಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ಚರ್ಚ್ ಉದ್ಘಾಟಿಸಲು ಗ್ರಾಮಸ್ಥರು ತಡೆ ಒಡ್ಡಿದ ಘಟನೆ ಸುಂಟಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ನಾಕೂರು ಶಿರಂಗಾಲ ಗ್ರಾಮದಲ್ಲಿ ನಡೆದಿದೆ.


ಅನಧಿಕೃತ ಚರ್ಚ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಗ್ರಾಮಸ್ಥರು ಪೊಲೀಸರಿಗೆ ದೂರು ನೀಡಿದರು.

ಸುಂಟಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ನಾಕೂರು ಶಿರಂಗಾಲ ಗ್ರಾಪಂಗೆ ಒಳಪಡುವ ಹೇರೂರು ಗಿರಿಜನ ಹಾಡಿಯಲ್ಲಿ ಅನಧಿಕೃತವಾಗಿ ನಿರ್ಮಾಣಗೊಂಡ ಚರ್ಚ್ ಉದ್ಘಾಟನೆ ಸಂದರ್ಭ ಸ್ಥಳೀಯ ನಿವಾಸಿಗಳು ಆಗಮಿಸಿ ಕಾರ್ಯಕ್ರಮ ಸ್ಥಗಿತಗೊಳಿಸಿದರು.

ಚರ್ಚ್ ಉದ್ಘಾಟಿಸಲೆಂದು ತಮಿಳುನಾಡಿನಿಂದ ಐದಾರು ವಾಹನಗಳಲ್ಲಿ ಆಗಮಿಸಿದವರಿಗೆ ತಡೆಯೊಡ್ಡಿದ ಗ್ರಾಮಸ್ಥರು, ಪೊಲೀಸ್ ಮತ್ತು ಗ್ರಾ.ಪಂ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಘಟನಾ ಸ್ಥಳಕ್ಕೆ ಕುಶಾಲನಗರ ವೃತ್ತ ನಿರೀಕ್ಷಕ ಪ್ರದೀಪ್, ಕುಶಾಲನಗರ ಮತ್ತು ಸುಂಟಿಕೊಪ್ಪ ಠಾಣಾಧಿಕಾರಿಗಳಾದ ಮೋಹನ್ ರಾಜ್, ರಾಮಚಂದ್ರ, ನಾಕೂರು ಶಿರಂಗಾಲ ಗ್ರಾ.ಪಂ ಆಡಳಿತಾಧಿಕಾರಿ ಶ್ರೀಕಾಂತ್, ಪಿಡಿಒ ಅಸ್ಮಾ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದರು. ಅಧಿಕಾರಿಗಳ ಮುಂದೆಯೇ ಸ್ಥಳೀಯರು ಮತ್ತು ಹಾಡಿ ನಿವಾಸಿಗಳ ನಡುವೆ ಮಾತಿನ ಚಕಮಕಿ ನಡೆಯಿತು. ನಮ್ಮ ಇಷ್ಟದಂತೆ ನಾವು ಇಲ್ಲಿ ಪ್ರಾರ್ಥನೆಯಲ್ಲಿ ತೊಡಗಿರುವುದಾಗಿ ಹಾಡಿ ನಿವಾಸಿಗಳು ಸಮರ್ಥಿಸಿಕೊಂಡ ಘಟನೆಯೂ ನಡೆಯಿತು.

ಗ್ರಾಪಂ ಮೂಲಕ ಯಾವುದೇ ಅನುಮತಿ ಪಡೆಯದೆ ಕಟ್ಟಡ ನಿರ್ಮಿಸಿರುವುದು ಕಂಡುಬಂತು. ಈ ಕುರಿತು ನಾಕೂರು ಶಿರಂಗಾಲ ಗ್ರಾಪಂ ಮಾಜಿ ಅಧ್ಯಕ್ಷ ಮಂದೋಡಿ ಜಗನ್ನಾಥ್, ಚಂದ್ರಶೇಖರ್ ಹೇರೂರು ಸೇರಿದಂತೆ ಗ್ರಾಮದ ಮುಖಂಡರು ಕುಶಾಲನಗರ ಡಿವೈಎಸ್‌ಪಿ ಚಂದ್ರಶೇಖರ್ ಅವರಿಗೆ ಲಿಖಿತ ದೂರು ಸಲ್ಲಿಸಿದ್ದಾರೆ. ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಈ ಅನಧಿಕೃತ ಕಟ್ಟಡದಲ್ಲಿ ಯಾವುದೇ ಕಾರ್ಯಕ್ರಮ ನಡೆಸದಂತೆ ಗ್ರಾಮಸ್ಥರು ಹಾಡಿ ನಿವಾಸಿಗಳನ್ನು ಆಗ್ರಹಿಸಿದರು.

ಬಿಜೆಪಿ ಮುಖಂಡ ಹೇರೂರು ಚಂದ್ರಶೇಖರ್, ಗ್ರಾ.ಪಂ ಮಾಜಿ ಅಧ್ಯಕ್ಷ ಜಗನ್ನಾಥ್ ಮಾತನಾಡಿ ಸಮಾಜ ಕಲ್ಯಾಣ ಇಲಾಖೆ ಕಟ್ಟುನಿಟ್ಟಿನ ಕ್ರಮವಹಿಸಬೇಕಿದೆ ಎಂದು ಆಗ್ರಹಿಸಿದರು. ಸ್ಥಳೀಯ ಗ್ರಾಮಸ್ಥರಾದ ಅರುಣ್ ಚೆಂಗಪ್ಪ, ಗಣೇಶ್, ಚರಣ್, ಸಂಜು, ಹೇಮಚಂದ್ರ, ಗಗನ್, ಚಂದ್ರಶೇಖರ್, ಡಯಾನ್, ರಾಜೇಶ್, ದಿಶಾಂತ್ ಮತ್ತಿತರರು ಹಾಜರಿದ್ದರು.

ಗ್ರಾಮದ ರಸ್ತೆ ಅಭಿವೃದ್ಧಿಗೆ 35 ಲಕ್ಷ ರೂ. ಅನುದಾನ

ಮಡಿಕೇರಿ, ಮೇ 16–ಗಾಳಿಬೀಡು ಪಂಚಾಯತ್ ವ್ಯಾಪ್ತಿಯ ಪ್ರಕೃತಿ ವಿಕೋಪ ಪೀಡಿತ 2ನೇ ಮೊಣ್ಣಂಗೇರಿ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿಗೆ ಶಾಸಕ ಡಾ.ಮಂತರ್ ಗೌಡ 35 ಲಕ್ಷ ರೂ. ಅನುದಾನ ಒದಗಿಸಿದ್ದಾರೆ.


2ನೇ ಮೊಣ್ಣಂಗೇರಿಯಲ್ಲಿ ಕಾಮಗಾರಿಗೆ ಶಾಸಕ ಡಾ.ಮಂಥರ್‌ಗೌಡ ಭೂಮಿ ಪೂಜೆ ಸಲ್ಲಿಸಿದರು.

ಅತ್ಯಂತ ದುರ್ಗಮವಾದ ಹಾದಿಗಳನ್ನು ಹೊಂದಿರುವ 2ನೇ ಮೊಣ್ಣಂಗೇರಿ ಗ್ರಾಮ ಪ್ರಕೃತಿ ವಿಕೋಪದಲ್ಲಿ ಬಹು ಸಂಕಷ್ಟಕ್ಕೆ ಒಳಗಾದ ಪ್ರದೇಶವಾಗಿದ್ದು ಅಲ್ಲಿನ ಜನರ ಕೋರಿಕೆ ಮೇರೆಗೆ ಶಾಸಕರು 35 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿದರು.

ಕ್ಷೇತ್ರದ ಪ್ರತಿಯೊಬ್ಬ ಪ್ರಜೆಯು ಸರ್ಕಾರದ ಸೌಲಭ್ಯ ಪಡೆಯಲು ಅರ್ಹನಾಗಿದ್ದು ಅದನ್ನು ಒದಗಿಸುವ ಕರ್ತವ್ಯ ಜನಪ್ರತಿನಿಧಿಯ ಜವಾಬ್ದಾರಿ ಎಂದು ಹೇಳಿದರು. ಕುಗ್ರಾಮ ಎಂದು ಅಪಖ್ಯಾತಿ ಹೊಂದಿರುವ 2ನೇ ಮೊಣ್ಣಂಗೇರಿ ಗ್ರಾಮವನ್ನು ಸುಗ್ರಾಮವಾಗಿಸಲು ಬದ್ಧನಾಗಿದ್ದೇನೆ ಎಂದು ಗ್ರಾಮಸ್ಥರಿಗೆ ಭರವಸೆ ನೀಡಿದರು. ಕಾಮಗಾರಿಯನ್ನು ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸುವಂತೆ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ನಿರ್ದೇಶನ ನೀಡಿ, ಸದ್ಯದಲ್ಲಿಯೇ ಜಿಲ್ಲಾಧಿಕಾರಿಗಳು ಸೇರಿದಂತೆ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಗ್ರಾಮಕ್ಕೆ ಕರೆಸಿ ಜನಸ್ಪಂದನ ಸಭೆ ನಡೆಸುವುದಾಗಿ ಮಾಹಿತಿ ನೀಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ.ಹಂಸ, ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆ ಜಿಲ್ಲಾಧ್ಯಕ್ಷ ತೆನ್ನಿರ ಮೈನಾ ಮಾತನಾಡಿದರು. ಸ್ಥಳೀಯರಾದ ಮುದಿಯಾರ್ ಗಣೇಶ್, ಬೂತ್ ಮುಖ್ಯಸ್ಥ ಬಷೀರ್ ಮತ್ತು ಗ್ರಾಮಸ್ಥರು ವಿವಿಧ ಬೇಡಿಕೆಗಳ ಪತ್ರವನ್ನು ಶಾಸಕರಿಗೆ ಸಲ್ಲಿಸಿದರು. ಗಾಳೀಬೀಡು ವಲಯ ಕಾಂಗ್ರೆಸ್ ಅಧ್ಯಕ್ಷ ಸುಭಾಶ್ ಆಳ್ವ, ಗ್ರಾ.ಪಂ. ಮಾಜಿ ಅಧ್ಯಕ್ಷೆ ಪುಷ್ಪ, ಪ್ರಮುಖರಾದ ಕೋಚನ ಹರಿಪ್ರಸಾದ್, ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಜೀಪು ಮಗುಚಿ ಚಾಲಕನ ಸಾವು

ವಿರಾಜಪೇಟೆ, ಮೇ 16– ನಿಯಂತ್ರಣ ತಪ್ಪಿ ಜೀಪು ಮಗುಚಿದ ಪರಿಣಾಮ ಚಾಲಕ ಸ್ಥಳದಲ್ಲೆ ಮೃತಪಟ್ಟ ಘಟನೆ ಸಮೀಪದ ಕುಕ್ಲೂರು ಗ್ರಾಮದಲ್ಲಿ ಇಂದು ನಡೆದಿದೆ.



ಚೆಂಬೆಬೆಳ್ಳೂರು ನಿವಾಸಿ ವಸಂತ (58) ಎಂಬುವವರೆ ಅಪಘಾತದಲ್ಲಿ ತಲೆಗೆ ತೀವ್ರ ಗಾಯಗೊಂಡು ಮೃತಪಟ್ಟ ವ್ಯಕ್ತಿ.

ಸಮೀಪದ ಚೆಂಬೆಬೆಳ್ಳೂರು ನಿವಾಸಿ ದೇವಯ್ಯ ಎಂಬವರಿಗೆ ಸೇರಿದ ಜೀಪಿನಲ್ಲಿ ತೋಟದ ಕಾರ್ಮಿಕರನ್ನು ವಿರಾಜಪೇಟೆಗೆ ಬಿಟ್ಟು ಮತ್ತೆ ಹಿಂದಿರುಗುತ್ತಿದ್ದಾಗ ಚೆಂಬೆಬೆಳ್ಳೂರು ಗ್ರಾಪಂ ವ್ಯಾಪ್ತಿಯ ಕುಕ್ಲೂರು ಗ್ರಾಮದಲ್ಲಿ ಜೀಪು ಚಾಲಕನ ನಿಯಂತ್ರಣ ಕಳೆದುಕೊಂಡು ಮಗುಚಿಕೊಂಡಿದೆ. ಶವವನ್ನು ವಿರಾಜಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿಟ್ಟಿದ್ದು, ನಾಳೆ ಮರಣೋತ್ತರ ಪರೀಕ್ಷೆ ನಡೆಯಲಿದೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಶ್ರದ್ಧಾ ಭಕ್ತಿಯಿಂದ ಜರುಗಿದ ಕಡವಡಿ ದೈವಕೋಲ

ನಾಪೋಕ್ಲು, ಮೇ 16–ಸಮೀಪದ ಸಣ್ಣಪುಲಿ ಕೋಟು ಗ್ರಾಮದ ಕುಯ್ಯಮುಡಿ ಕಡವಡಿ ಕುಟುಂಬಸ್ಥರಿಂದ ಎರಡು ವರ್ಷಕ್ಕೆ ಒಮ್ಮೆ ನಡೆಯುವ ವಿಷ್ಣುಮೂರ್ತಿ ಹಾಗೂ ಸಹ ಪರಿವಾರಗಳ ದೈವಕೋಲ ಮಹೋತ್ಸವ ಶ್ರದ್ಧಾ ಭಕ್ತಿಯಿಂದ ಸಂಪನ್ನಗೊಂಡಿತು.



ಗುರುವಾರ ಬೆಳಿಗ್ಗೆ 6 ಗಂಟೆಗೆ ಕುಯ್ಯಮುಡಿ ದೊಡ್ಡ ಮನೆಯಿಂದ ಸಂಪ್ರದಾಯದಂತೆ ಭಂಡಾರ ತರಲಾಯಿತು. ಬಳಿಕ ವಿಷ್ಣುಮೂರ್ತಿ ದೈವದ ಬೊಳ್ಳಾಟಂ, ರಾತ್ರಿ ಕುಟ್ಟಿಚಾತನ್, ಕಾಲಭೈರವ, ಮಂದನ ಮೂರ್ತಿ ಹಾಗೂ ಸಹ ಪರಿವಾರಗಳ ಕೋಲ ಜರುಗಿತು. ಶುಕ್ರವಾರ, ಭೂಮಿ ಗುಳಿಗ, ರಾವು ಗುಳಿಗ ಕೋಲ, ಹಾಗೂ ವಿಷ್ಣುಮೂರ್ತಿ ಮೇಲೇರಿ ಜರುಗಿದವು. ಈ ಸಂದರ್ಭ ಭಕ್ತರಿಗೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಸಂಜೆ ವಿಷ್ಣುಮೂರ್ತಿ ಬಾರಣೆ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಕಡವಡಿ ಕುಟುಂಬದ ಅಧ್ಯಕ್ಷ ಚರಣ್ ಕುಮಾರ್ (ಲವ) ಗೌರವಾಧ್ಯಕ್ಷ ಪೂಣಚ್ಚ, ಪ್ರಧಾನ ಅರ್ಚಕ ಶ್ರೀನಿವಾಸ್ (ಪುಟ್ಟು) ಆಡಳಿತ ಮಂಡಳಿ ಸದಸ್ಯರು ಭಕ್ತರು, ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ತಮ್ಮ ಇಷ್ಟಾರ್ಥ ಹರಕೆ ಸೇವೆ ನೆರವೇರಿಸಿ ಪ್ರಸಾದ ಸ್ವೀಕರಿಸಿದರು.

ಸಣ್ಣಪುಲಿ ಕೋಟು ಗ್ರಾಮದ ಕುಯ್ಯಮುಡಿ ಕಡವಡಿ ಕುಟುಂಬಸ್ಥರಿಂದ ಎರಡು ವರ್ಷಕ್ಕೆ ಒಮ್ಮೆ ನಡೆಯುವ ವಿಷ್ಣುಮೂರ್ತಿ ಕೋಲ ಮಹೋತ್ಸವ ಶ್ರದ್ಧಾ ಭಕ್ತಿಯಿಂದ ಜರುಗಿತು.

ಕಾರ್ಡ್ ಸಂಸ್ಥೆಯ ರಾಯ್ ಡೇವಿಡ್ ನಿಧನ



ಕುಶಾಲನಗರ, ಮೇ 16–ಆದಿವಾಸಿಗಳ ಹಕ್ಕು ಶ್ರೇಯೋಭಿವೃದ್ಧಿಗಾಗಿ ಕಾರ್ಡ್ ಸಂಸ್ಥೆಯ ಮೂಲಕ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ನಿರಂತರ ಹೋರಾಟ ನಡೆಸಿದ ಗಿರಿಜನರ ಕಣ್ಮಣಿ ರಾಯ್ ಡೇವಿಡ್ (71) ಇಂದು ಬೆಳಗ್ಗೆ ಹೃದಯಾಘಾತದಿಂದ ಬೆಂಗಳೂರಿನಲ್ಲಿ ನಿಧನರಾದರು.

ಮೃತರು ಪತ್ನಿ ಶಮಂತಕ, ಇಬ್ಬರು ಪುತ್ರರು ಸೊಸೆಯರು, ಪುತ್ರಿ ಅಳಿಯ, ಹಾಗೂ ಅಪಾರ ಅಭಿಮಾನಿಗಳು, ಬಂಧು ಮಿತ್ರರನ್ನು ಅಗಲಿದ್ದಾರೆ.

ಜಿಲ್ಲೆಯಲ್ಲಿ ಕಾರ್ಡ್ ಸಂಸ್ಥೆ (ಗಿರಿಜನರ ಅಭಿವೃದ್ಧಿ ಸಂಸ್ಥೆ) ಸ್ಥಾಪಿಸಿ ಗಿರಿಜನರ ಹಕ್ಕು ಹಾಗೂ ಸೌಲಭ್ಯಗಳಿಗಾಗಿ ನಿರಂತರ ಹೋರಾಟ ನಡೆಸುವ ಮೂಲಕ ಸರ್ಕಾರದ ಗಮನ ಸೆಳೆದಿದ್ದ ರಾಯ್, ಡೇವಿಡ್ ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನಕ್ಕಾಗಿ ಹಾಗೂ ಗಿರಿಜನರಿಗೆ ಅರಣ್ಯ ಭೂಮಿಯ ಹಕ್ಕುಪತ್ರಕ್ಕಾಗಿ, ಅವರ ಕಲ್ಯಾಣಕ್ಕಾಗಿ ತಮ್ಮ ಜೀವನ ಮುಡಿಪಾಗಿಟ್ಟ ವ್ಯಕ್ತಿ. ಗಿರಿಜನರ ಶಿಕ್ಷಣ, ವಸತಿ, ಭೂಮಿ, ಗ್ರಾಮ ಅರಣ್ಯ ಸಮಿತಿ ರಚನೆ ಸೇರಿದಂತೆ ಇನ್ನಿತರ ಹಕ್ಕುಗಳಿಗಾಗಿ ಹೋರಾಟ ನಡೆಸಿ ಗಿರಿಜನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಅವಿರತವಾಗಿ ಶ್ರಮಿಸಿದರು.

ಸಂತಾಪ: ರಾಯ್ ಡೇವಿಡ್ ಅವರ ಅಗಲಿಕೆ ಗಿರಿಜನರ ಪಾಲಿಗೆ ತುಂಬಲಾರದ ನಷ್ಟವಾಗಿದೆ ಎಂದು ಸೋಮವಾರ ಪೇಟೆ ತಾಲೂಕಿನ ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಆರ್.ಕೆ.ಚಂದ್ರು ಹಾಗೂ ಗಿರಿಜನ ಮುಖಂಡ ಜೆ.ಪಿ.ರಾಜು ಸಂತಾಪ ವ್ಯಕ್ತಪಡಿಸಿದ್ದಾರೆ.

ಮಾದಾಪುರ ಗೇಟ್‌ನಲ್ಲಿ ನಿಲ್ಲದ ಬಸ್: ಹತ್ತೂರು ಹಳ್ಳಿಗರ ಪರದಾಟ

ಕಿಕ್ಕೇರಿ, ಮೇ 16–ಕಿಕ್ಕೇರಿಗೆ ಹತ್ತಾರು ಗ್ರಾಮಗಳ ಬೆಸೆಯುವ ಸ್ಥಳ ಮಾದಾಪುರ ಗೇಟ್‌ನಲ್ಲಿ ಸಾರಿಗೆ ಬಸ್‌ಗಳು ನಿಲ್ಲಿಸದಿರುವುದನ್ನು ವಿರೋಧಿಸಿ ವಿದ್ಯಾರ್ಥಿಗಳು ಗ್ರಾಮಸ್ಥರು ಇಂದು ಪ್ರತಿಭಟನೆ ನಡೆಸಿದರು.

ರಾಜ್ಯ ಹೆದ್ದಾರಿಯಲ್ಲಿರುವ ಈ ಕೂಡು(ತಿರುವು)ವಿನ ಮಾರ್ಗವಾಗಿ ಹಲವಾರು ಗ್ರಾಮದ ಜನತೆಗೆ ಓಡಾಟದ ರಸ್ತೆಯಾಗಿದೆ. ಕೆ.ಆರ್. ಪೇಟೆ–ಚನ್ನರಾಯಪಟ್ಟಣದ ಮಾರ್ಗವಾಗಿ ಚಲಿಸುವ ಎಲ್ಲ ವೇಗದೂತ ವಾಹನಗಳು ಈ ಮಾದಾಪುರ ಗೇಟ್ ಬಳಿ ನಿಲ್ಲಿಸುವಂತೆ ಕೇಂದ್ರ ಕಚೇರಿಯ ಮುಖ್ಯ ಸಂಚಾರಿ ವ್ಯವಸ್ಥಾಪಕರು ಆದೇಶ ಮಾಡಿದ್ದಲ್ಲದೆ, ನಿಲುಗಡೆಗಾಗಿ ನಾಮಫಲಕ ಕೂಡ ಅಳವಡಿಸಿದ್ದರೂ ಯಾವುದೇ ಸಾರಿಗೆ ಬಸ್‌ಗಳು ನಿಲ್ಲದೆ ಹತ್ತಾರು ಗ್ರಾಮಗಳ ನಾಗರೀಕರಿಗೆ ಓಡಾಡಲು ತೀವ್ರ ಸಮಸ್ಯೆಯಾಗಿ ಕಾಡುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಉದ್ದಿನಮಲ್ಲನ ಹೊಸೂರು, ಉದ್ದಿನಮಲ್ಲನ ಹೊಸೂರು ಕೊಪ್ಪಲು, ಊಗಿನಹಳ್ಳಿ, ಊಗಿನಹಳ್ಳಿ ಕೊಪ್ಪಲು, ಈಚಲುಗುಡ್ಡೆಕಾವಲು, ಗಾಣದಹಳ್ಳಿ, ಗಾಣದಹಳ್ಳಿ ಕೊಪ್ಪಲು, ತುಳಸಿ, ಮಂಡಲೀಕನಹಳ್ಳಿ, ಐಕನಹಳ್ಳಿ, ಬಸವನಹಳ್ಳಿ, ಕಾಂತರಾಜಪುರ, ಕಡಹೆಮ್ಮಿಗೆ, ಮಾದಾಪುರ, ಮಾದಾಪುರ ಕೊಪ್ಪಲು, ಹಳೆಮಾದಾಪುರದಂತಹ ಹಲವು ಗ್ರಾಮಗಳನ್ನು ಸಂಪರ್ಕಿಸುವ ರಸ್ತೆ ಸಂಪರ್ಕದ ಕೇಂದ್ರ ಬಿಂದುವಾಗಿದೆ. ನಿತ್ಯ ವಿದ್ಯಾರ್ಥಿಗಳು ಕಿಕ್ಕೇರಿ ಹೋಬಳಿ ಕೇಂದ್ರಕ್ಕೆ 5ಕಿ.ಮೀ. ಕಾಲ್ನಡಿಗೆಯಲ್ಲಿ ಅಥವಾ ಖಾಸಗಿ ವಾಹನಗಳನ್ನು ಆಶ್ರಯಿಸಬೇಕಿದೆ ಎಂದರು.

ಆಗಸ್ಟ್ ಅಂತ್ಯದೊಳಗೆ ಸಂಸ್ಕರಣಾ ಘಟಕಗಳ ಉನ್ನತೀಕರಣ ಪೂರ್ಣಗೊಳಿಸಿ

ಅಧಿಕಾರಿಗಳಿಗೆ ಡಿಸಿ ನಿರ್ದೇಶನ

ಮಂಡ್ಯ, ಮೇ 16–ನಗರದ ಗುತ್ತಲು–ಯತ್ತಗದಹಳ್ಳಿ ಕೆರೆಗೆ ತ್ಯಾಜ್ಯ ನೀರು ಸೇರುವುದನ್ನು ತಡೆಗಟ್ಟಲು ನಿರ್ಮಿಸುತ್ತಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಉನ್ನತೀಕರಣ ಕಾಮಗಾರಿಗಳನ್ನು ಆಗಸ್ಟ್ ಅಂತ್ಯದೊಳಗೆ ಪೂರ್ಣಗೊಳಿಸಬೇಕೆಂದು ಜಿಲ್ಲಾಧಿಕಾರಿ ಡಾ.ಕುಮಾರ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.


ಜಿಲ್ಲಾಧಿಕಾರಿ ಡಾ.ಕುಮಾರ್ ಸಂಸ್ಕರಣಾ ಘಟಕಗಳ ಬಗ್ಗೆ ಸಭೆ ನಡೆಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಗುತ್ತಲು ಮತ್ತು ಚಿಕ್ಕೇಗೌಡನದೊಡ್ಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಉನ್ನತೀಕರಣ ಕಾಮಗಾರಿ, ನಗರದಲ್ಲಿ ಬಿಟ್ಟು ಹೋಗಿರುವ ಒಳಚರಂಡಿ ಪೈಪ್ ಲೈನ್ ಕಾಮಗಾರಿಗಳ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಕೆರೆಗಳಿಗೆ ನಗರದ ತ್ಯಾಜ್ಯ ನೀರು ಸೇರುತ್ತಿದ್ದ ಹಿನ್ನೆಲೆಯಲ್ಲಿ ಉಪ ಲೋಕಾಯುಕ್ತರು ಸ್ಥಳ ಪರಿಶೀಲನೆ ನಡೆಸುವ ಜತೆಗೆ ಲೋಕಾಯುಕ್ತದಲ್ಲೂ ಸ್ವಯಂ ಪ್ರೇರಿತ ದೂರು ದಾಖಲಿಸಿ ಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಕೆರೆ ಅಭಿವೃದ್ಧಿಯ ಜತೆಗೆ ಕೆರೆಗೆ ತ್ಯಾಜ್ಯ ನೀರು ಸೇರುವುದನ್ನು ತಡೆಯಲು ಗುತ್ತಲು, ಚಿಕ್ಕೇಗೌಡನದೊಡ್ಡಿ ಬಳಿ ನಿರ್ಮಿಸಿರುವ 8.90 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು 30 ಕೋಟಿ ರೂ.ವೆಚ್ಚದಲ್ಲಿ ಉನ್ನತೀಕರಣ ನಡೆಯುತ್ತಿದೆ ಎಂದು ವಿವರಿಸಿದರು.

ಮದ್ದೂರು ನಗರಸಭೆ ವ್ಯಾಪ್ತಿಯ ಚಾಮನಹಳ್ಳಿ ಆಶ್ರಯ ಬಡಾವಣೆಗೆ ತ್ಯಾಜ್ಯ ನೀರು ಸಂಸ್ಕರಣಾ ವಿಕೇಂದ್ರಿಕೃತ ಘಟಕವನ್ನು ಸ್ಥಾಪಿಸಲು ಬಳಸಿದ ನೀರು ನಿರ್ವಹಣೆ ಯೋಜನೆಯಡಿ ರೂ.115 ಲಕ್ಷಗಳ ಅನುದಾನ ನಿಗಧಿಯಾಗಿ, ವಿನ್ಯಾಸ ಮತ್ತು ಡಿಪಿಆರ್ ತಯಾರಿಸಿದೆ. ನಾಗಮಂಗಲ ಪುರಸಭೆ ವ್ಯಾಪ್ತಿಯ ಪ್ರಸ್ತುತ ಇರುವ ಒಳಚರಂಡಿ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು, ಕೈಬಿಟ್ಟಿರುವ ಒಳಚರಂಡಿ ಮಾರ್ಗಗಳನ್ನು ಪುನರ್ ಸ್ಥಾಪಿಸುವ ಹಾಗೂ ವೆಟ್‌ವೆಲ್ ಮತ್ತು ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಪುನಶ್ಚೇತನ ಕಾಮಗಾರಿಯನ್ನು ಬಳಸಿದ ನೀರು ನಿರ್ವಹಣೆ ಯೋಜನೆಯಡಿ ಕೈಗೊಳ್ಳಲು 25.00ಕೋಟಿ ರೂ.ಗಳ ಡಿಪಿಆರ್ ತಯಾರಿಸಿ ಕೆಯುಐಡಿಎಫ್‌ಸಿ ರವರಿಗೆ ಸಲ್ಲಿಸಿರುವುದಾಗಿ ತಿಳಿಸಿದರು

ಪಾಂಡವಪುರ ಪುರಸಭೆ ವ್ಯಾಪ್ತಿಯಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ನಿರ್ಮಾಣ ಮಾಡಲು ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಕಾಮಗಾರಿ ಪ್ರಾರಂಭವಾಗಬೇಕಿದೆ ಎಂದರು. ಶ್ರೀರಂಗಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ ಬಳಸಿದ ನೀರು ನಿರ್ವಹಣೆ ಯೋಜನೆಯಡಿ ಒಳಚರಂಡಿ ಮತ್ತು 4 ವೆಟ್‌ವೆಲ್‌ಗಳ ನಿರ್ಮಾಣಕ್ಕಾಗಿ ಕೆ.ಯುಐ.ಡಿ.ಎಫ್.ಸಿ. ವತಿಯಿಂದ ಟೆಂಡರ್ ಕರೆದು ಕಾಮಗಾರಿ ವಹಿಸಲಾಗಿರುತ್ತದೆ. ಎಂದು ತಿಳಿಸಿದರು. ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ಟಿ.ಎನ್. ನರಸಿಂಹಮೂರ್ತಿ, ಕಾರ್ಯಪಾಲಕ ಎಂಜಿನಿಯರ್ ಪ್ರತಾಪ್, ನಗರಸಭೆ ಪೌರಾಯುಕ್ತ ಯು.ಪಿ. ಪಂಪಶ್ರೀ ಹಾಗೂ ಇತರ ಅಧಿಕಾರಿಗಳು ಭಾಗವಹಿಸಿದ್ದರು.

ಖ್ಯಾತ ನರರೋಗ ತಜ್ಞ ಡಾ.ಸುಬ್ಬೇಗೌಡ ನಿಧನ



ಕಿಕ್ಕೇರಿ, ಮೇ 16–ಹೋಬಳಿಯ ಸೊಳ್ಳೇಪುರ ಗ್ರಾಮದ ಖ್ಯಾತ ನರರೋಗ ತಜ್ಞ ಡಾ.ಸುಬ್ಬೇಗೌಡ(83) ಅನಾರೋಗ್ಯದಿಂದ ಶುಕ್ರವಾರ ಮೃತ ರಾದರು. ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆ ಮತ್ತಿತರೆ ಪ್ರಖ್ಯಾತ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿ ನೂರಾರು ಜೀವಗಳ ಉಳಿವಿಗೆ ಕಾರಣಕರ್ತರಾಗಿ ಚಿರ ಪರಿಚಿತರಾಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮೈಸೂರಿನ ಯರಗನಹಳ್ಳಿ ರುದ್ರಭೂಮಿಯಲ್ಲಿ ನೆರವೇರಿತು.

ಎಸ್.ಮಂಜುನಾಥ್ ನಿಧನ

ಕೆ.ಆರ್.ಪೇಟೆ, ಮೇ 16– ಬಿಸಿಎಂ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಎಸ್ ಮಂಜುನಾಥ್ (58) ಅನಾರೋಗ್ಯದಿಂದ ನಿಧನರಾದರು.



ಪಟ್ಟಣದ ಹೇಮಾವತಿ ಬಡಾವಣೆಯ ನಿವಾಸಿಯಾಗಿದ್ದ ಎಸ್. ಮಂಜುನಾಥ್, ತಾಯಿ, ಪತ್ನಿ, ಪುತ್ರಿ, ಸಹೋದರಿ, ಸಹೋದರ ವೈದ್ಯಾಧಿಕಾರಿ ಡಾ. ಶಿವಕುಮಾರ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಪಟ್ಟಣದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ಪಕ್ಕದಲ್ಲಿರುವ ಮೃತರ ತೋಟದಲ್ಲಿ ಅಂತ್ಯ ಸಂಸ್ಕಾರ ನಡೆಯಿತು. ಸರ್ಕಾರಿ ಸೇವೆಗೆ ಸೇರುವುದಕ್ಕೂ ಮುನ್ನ ಹಲವು ಪತ್ರಿಕೆಗಳಲ್ಲಿ ತಾಲೂಕು ವರದಿಗಾರರಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದರು.

ಕೆಂಪಮ್ಮ ನಿಧನ

ಭಾರತೀನಗರ, ಮೇ 16– ಭಾರತೀನಗರದ ಸಂಕ್ರಾಂತಿ ಬಾರ್ ಅಂಡ್ ರೆಸ್ಟೋರೆಂಟ್ ಮಾಲೀಕ ನಾಗರಾಜು ತಾಯಿ ಕೆಂಪಮ್ಮ (95) ವಯೋಸಹಜದಿಂದ ನಿಧನಹೊಂದಿದರು. ಮೃತರಿಗೆ ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯ ಸಂಸ್ಕಾರ ಕೆ.ಎಂ.ದೊಡ್ಡಿಯ ಸ್ವಗ್ರಾಮದ ರುದ್ರಭೂಮಿಯಲ್ಲಿ ಜರುಗಿತು.



ಚಾಲಕನಿಗೆ ಮಾರಕಾಸ್ತ್ರದಿಂದ ಬೆದರಿಸಿ 27 ಲಕ್ಷ ರೂ. ಸುಲಿಗೆ

ಮದ್ದೂರು, ಮೇ 16–ಕೇಂದ್ರ ಕಚೇರಿಗೆ ಕಟ್ಟಲೆಂದು ಹಣ ಕೊಂಡೊಯ್ಯುತ್ತಿದ್ದ ಕಾರು ಚಾಲಕನನ್ನು ಅಡ್ಡ ಗಟ್ಟಿ 27 ಲಕ್ಷ ರೂ ಹಣವನ್ನು ಸುಲಿಗೆ ಮಾಡಿ ಪರಾರಿಯಾಗಿರುವ ಘಟನೆ ನಿನ್ನೆ ರಾತ್ರಿ ಮದ್ದೂರು ನಗರದಲ್ಲಿ ನಡೆದಿದೆ.

ಮೈಸೂರಿನ ಹಿಟಾಚಿ ಎಂಬ ಸಂಸ್ಥೆಗೆ ಸೇರಿದ 27 ಲಕ್ಷ ರೂ ಹಣವನ್ನು ಗೋವಿಂದರಾಜು ಎಂಬವರು ಐ–20 ಕಾರಿನಲ್ಲಿ ಬೆಂಗಳೂರಿನ ಕೇಂದ್ರ ಕಚೇರಿಗೆ ತೆಗೆದುಕೊಂಡು ಹೋಗುವಾಗ ಮೈಸೂರಿನಿಂದ ಫಾಲೋ ಮಾಡಿಕೊಂಡು ಹೋಗಿರುವ ಮೂರ್ನಾಲ್ಕು ಮಂದಿಯಿದ್ದ ದುಷ್ಕರ್ಮಿಗಳ ಗುಂಪು ಮದ್ದೂರು ನಗರದ ಐಶ್ವರ್ಯ ಇಂಟರ್ ನ್ಯಾಷನಲ್ ಸ್ಕೂಲ್ ಬಳಿ ಶುಕ್ರವಾರ ರಾತ್ರಿ 8 ಗಂಟೆ ವೇಳೆಯಲ್ಲಿ ಅಡ್ಡಗಟ್ಟಿ, ಮಾರಕಾಸ್ತ್ರಗಳನ್ನು ತೋರಿಸಿ ಚಾಲಕನನ್ನು ಬೆದರಿಸಿ ಹಣವನ್ನು ಕಿತ್ತುಕೊಂಡು ಕ್ಷಣಾರ್ಧದಲ್ಲಿ ಪರಾರಿಯಾಗಿದ್ದಾರೆ. ಕೂಡಲೇ ಕಾರು ಚಾಲಕ ಮದ್ದೂರು ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾನೆ.

ತಕ್ಷಣವೇ ಕಾರ್ಯಪ್ರವೃತ್ತವಾದ ಮದ್ದೂರು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ನವೀನ್ ಹಾಗೂ ಸಿಬ್ಬಂದಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಇನ್ನು ಆರೋಪಿಗಳ ಪತ್ತೆಗೆ ಈಗಾಗಲೇ ತಂಡ ರಚನೆ ಮಾಡಲಾಗಿದ್ದು, ಈ ಸಂಬಂಧ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಂಡಿದ್ದಾರೆ.

ಇನ್ನು ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಕಷ್ಟು ದರೋಡೆ ಪ್ರಕರಣಗಳು ನಡೆಯುತ್ತಿದ್ದವು, ಹೀಗಾಗಿ ಸಂಚಾರ ವಿಭಾಗದ ಎಡಿಜಿಪಿ ಆಗಿದ್ದ ಅಲೋಕ್ ಕುಮಾರ್ ಅಮು ಹೆದ್ದಾರಿ ಪ್ರಾಧಿಕಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಹೆದ್ದಾರಿ ಪರಿಶೀಲನೆ ನಡೆಸಿ ಎಲ್ಲೆಲ್ಲಿ ದರೋಡೆ ಪ್ರಕರಣಗಳು ನಡೆಯುತ್ತಿದ್ದವು. ಅಲ್ಲಿ ಸಿಸಿ ಕ್ಯಾಮೆರಾ, ಪೊಲೀಸ್ ಗಸ್ತು ವಾಹನ ವ್ಯವಸ್ಥೆ ಮಾಡಿದ ಪರಿಣಾಮ ದರೋಡೆ ಪ್ರಕರಣಗಳಿಗೆ ಕಡಿವಾಣ ಹಾಕಲಾಗಿತ್ತು. ಆದರೆ, ಶುಕ್ರವಾರ ರಾತ್ರಿ 8 ಗಂಟೆ ವೇಳೆಯಲ್ಲೇ ದರೋಡೆ ಪ್ರಕರಣ ನಡೆದಿರುವುದು ಸಾಕಷ್ಟು ಅನು ಮಾನಗಳಿಗೆ ಎಡೆಮಾಡಿಕೊಟ್ಟಿದ್ದು, ರಾಷ್ಟ್ರೀಯ ಹೆದ್ದಾರಿಯ ವಾಹನ ಸವಾರರಿಗೆ ಮಾತ್ರ ಆತಂಕ ಸೃಷ್ಟಿಸಿದೆ.

ಹಾಸ್ಯನಟ ಮಲ್ಲರಾಜುಗೆ ಅಭಿನಂದನೆ


ಭಾರತೀನಗರದ ಸುಮ ಚಿತ್ರಮಂದಿರದಲ್ಲಿ ಪ್ರೇಕ್ಷಕರು ಮತ್ತು ಅಭಿಮಾನಿಗಳು ಹಾಸ್ಯನಟ ಮರಸಿಂಗನಹಳ್ಳಿ ಮಲ್ಲರಾಜು ಅವರನ್ನು ಅಭಿನಂದಿಸಿದರು. ಇದೇ ವೇಳೆ ಪರಿಸರ ಜಾಗೃತಿ ವೇದಿಕೆಯ ತಾಲೂಕು ಅಧ್ಯಕ್ಷ ಅಣ್ಣೂರು ಸತೀಶ್, ಕ್ಯಾತಘಟ್ಟ ಬೋರೇಗೌಡ, ಮಾರಸಿಂಗನಹಳ್ಳಿ ಶಿವನಂಜಪ್ಪ, ಮುಟ್ಟನಹಳ್ಳಿ ರಮೇಶ್, ರಘು, ಬೋರೇಗೌಡ, ತೋಟಶೆಟ್ಟಿ ಸೇರಿದಂತೆ ಹಲವರಿದ್ದರು.

ಮೇ 21, ಮಧ್ಯರಂಗನಾಥಸ್ವಾಮಿ ದೇವಸ್ಥಾನ ಉದ್ಘಾಟನೆ

ಡಿಸಿಎಂ ಆಗಮನ, ಜಿಲ್ಲಾಧಿಕಾರಿಗಳಿಂದ ಸ್ಥಳ ಪರಿಶೀಲನೆ

ಕೊಳ್ಳೇಗಾಲ, ಮೇ 16– 3.68 ಕೋಟಿ ರೂ. ವೆಚ್ಚದಲ್ಲಿ ಜೀರ್ಣೋದ್ಧಾರಗೊಂಡಿರುವ ತಾಲೂಕಿನ ಮಧ್ಯರಂಗನಾಥಸ್ವಾಮಿ ದೇವಾಲಯವು ಮೇ 21ರಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗಣ್ಯರ ಸಮ್ಮುಖದಲ್ಲಿ ಲೋಕಾರ್ಪಣೆಗೊಳ್ಳಲಿದೆ.


ಜೀರ್ಣೋದ್ಧಾರಗೊಂಡ ಮಧ್ಯರಂಗನಾಥಸ್ವಾಮಿ ದೇವಸ್ಥಾನ ಉದ್ಘಾಟನೆ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಪರಿಶೀಲನೆ ನಡೆಸಿದರು.

ಹನೂರು ಶಾಸಕ ಮಂಜುನಾಥ್ ಅವರು ದೇವಾಲಯ ಉದ್ಘಾಟನೆಯ ನೇತೃತ್ವ ವಹಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ವೆಂಕಟೇಶ್, ಸಂಸದ ಸುನೀಲ್ ಬೋಸ್ ಸೇರಿದಂತೆ ಅನೇಕ ಗಣ್ಯರು, ಜಿಲ್ಲೆಯ ಶಾಸಕರು ಪಾಲ್ಗೊಳ್ಳಲಿದ್ದಾರೆ. ಈ ಹಿನ್ನೆಲೆ ಅಗತ್ಯ ಸಿದ್ದತೆಗಳ ಕುರಿತು ಜಿಲ್ಲಾಧಿಕಾರಿಗಳಾದ ರೂಪ ಅವರು ದೇಗುಲಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು

ಗಣ್ಯರಿಗೆ ಕೂರಲು ವೇದಿಕೆ, ಸಮಾರಂಭ ನಡೆಸುವ ಸ್ಥಳ ಸಂಬಂಧ ಜಿಲ್ಲಾಧಿಕಾರಿಗಳು ಪರಿಶೀಲಿಸಿದರಲ್ಲದೆ ಈ ಸಂಬಂಧ ತಹಸೀಲ್ದಾರ್ ಬಸವರಾಜು, ಕಾರ್ಯನಿರ್ವಾಹಣಾಧಿಕಾರಿ ಸುರೇಶ್ ಅವರಿಂದ ಮಾಹಿತಿ ಪಡೆದುಕೊಂಡರು. ಗಣ್ಯರು ಆಗಮಿಸುತ್ತಿರುವ ಹಿನ್ನೆಲೆ ಲೋಪವಾಗದಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ಸೂಚಿಸಿದರು

ಈಗಾಗಲೇ ಪ್ರವಾಸೋದ್ಯಮ ಇಲಾಖೆಯಿಂದ ದೇಗುಲ ಅಭಿವೃದ್ದಿಗೆ 2.58 ಕೋಟಿ, ದೇಗುಲದ ಹಣದಿಂದ 1.10ಕೋಟಿ ಸೇರಿದಂತೆ ಒಟ್ಟಾರೆ ಅಭಿವೃದ್ಧಿಗಾಗಿ 3.68 ಕೋಟಿ ಬಳಕೆ ಮಾಡಿಕೊಳ್ಳಲಾಗಿದ್ದು ವಿಮಾನ ಗೋಪುರ, ರಾಜಗೋಪುರ, ಕಾಂಪೌಂಡ್, ಕ್ಯೂಲೆನ್ ಕಾಮಗಾರಿ, ದೇವಸ್ಥಾನದ ನೆಲ ಹಾಸು ಸೇರಿದಂತೆ ಇನ್ನಿತರೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಉದ್ಘಾಟನೆಗೆ ಅಗತ್ಯ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದು ಇದೆ ವೇಳೆ ಸಮೂಹದ ದೇವಾಲಯದ ಇಓ ಸುರೇಶ್ ಕುಮಾರ್ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಕೊಳ್ಳೇಗಾಲದಲ್ಲಿ ಇಂದು ವಿದ್ಯುತ್ ಸ್ಥಗಿತ

ಕೊಳ್ಳೇಗಾಲ, ಮೇ 16– ತ್ರೈಮಾಸಿಕ ದುರಸ್ಥಿ ಕಾರ್ಯ ಹಿನ್ನೆಲೆಯಲ್ಲಿ ಮೇ 17ರಂದು ಬೆಳಗ್ಗೆ 10ರಿಂದ 6ರವರೆಗೆ ಕೊಳ್ಳೇಗಾಲದ ಬೀಮ ನಗರ, ಆದರ್ಶ ನಗರ, ಆಶ್ರಯ ಬಡಾವಣೆ, ದೇವಾಂಗ ಪೇಟೆ, ನೂರ್ ಮೊಹಲ್ಲಾ, ಕೊಳ್ಳೇಗಾಲ ಮೋಳೆ, ದಾಸನಪುರ, ಹರಳೆ, ಹಳೇ ಅಣಗಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಾದ ಉತ್ತಂಬಳ್ಳಿ, ತೇರಂಬಳ್ಳಿ, ಗೊಬ್ಬಳಿಪುರ, ಕುಣಗಳ್ಳಿ, ಮುಳ್ಳೂರು, ಸುರಾಪುರ, ಹೊಸ ಹಂಪಾಪುರ, ಹಳೇ ಹಂಪಾಪುರ ಗ್ರಾಮಗಳಿಗೆ ಮೇ17ರಂದು ಸಂಜೆ 6ರತನಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.



ಚಾ.ನಗರದಲ್ಲಿ ಗಾಳಿ–ಮಳೆಗೆ ಬಾಳೆ ಬೆಳೆ ನಾಶ


ಚಾಮರಾಜನಗರ ತಾಲೂಕಿನ ಉಮ್ಮತ್ತೂರು ಗ್ರಾಮದಲ್ಲಿ ಬಿರುಗಾಳಿ ಸಹಿತ ಸುರಿದ ಮಳೆಗೆ ಬಾಳೆ ಫಸಲು ನಾಶವಾಗಿದೆ. ಗ್ರಾಮದ ಶಿವಣ್ಣ ಎಂಬುವವರಿಗೆ ಸೇರಿದ ಬಾಳೆ ಫಸಲು ಸಂಪೂರ್ಣವಾಗಿ ನೆಲಕ್ಕುರುಳಿ ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಒಂದೂವರೆ ಎಕರೆ ಜಮೀನಿನಲ್ಲಿ ಹಾಕಲಾಗಿದ್ದ ಒಂದೂವರೆ ಸಾವಿರ ಬಾಳೆಕಟ್ಟೆಯಲ್ಲಿ ಕಟಾವಿಗೆ ಬಂದಿದ್ದ ಸುಮಾರು 900 ಬಾಳೆ ಮುರಿದು ಮಣ್ಣು ಪಾಲಾಗಿದೆ. ಇದರಿಂದಾಗಿ ಲಕ್ಷಾಂತರ ರೂಪಾಯಿ ಸಾಲ ಮಾಡಿ ಬೆಳೆದಿದ್ದ ಫಸಲು ನಾಶವಾಗಿದ್ದು, ರೈತ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಮೇ 31ರಂದು ವಿಶ್ವಕರ್ಮ ಮಕ್ಕಳ ಪ್ರತಿಭಾ ಪುರಸ್ಕಾರ

ಚಾಮರಾಜನಗರ: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾವು ಬೆಂಗಳೂರಿನಲ್ಲಿ ರಾಜ್ಯಮಟ್ಟದ ವಿಶ್ವಕರ್ಮ ಮಕ್ಕಳ ಪ್ರತಿಭಾ ಪುರಸ್ಕಾರವನ್ನು ಮೇ 31ರಂದು ಹಮ್ಮಿಕೊಳ್ಳಲಾಗಿದೆ ಎಂದು ಮಹಾಸಭಾದ ಜಿಲ್ಲಾಧ್ಯಕ್ಷ ಮಂಜುನಾಥಚಾರಿ ತಿಳಿಸಿದರು.

ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷ ಕೆ.ಪಿ. ನಂಜುಂಡಿ ವಿಶ್ವಕರ್ಮ ಅವರ ಸಾರಥ್ಯದಲ್ಲಿ ವಿಶ್ವಕರ್ಮ ಮಠಾಧೀಶರ ಮತ್ತು ಸ್ವಾಮಿಜೀಗಳ ದಿವ್ಯಸಾನಿಧ್ಯದಲ್ಲಿ ಅಂದು ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ಟೌನ್ ಹಾಲ್‌ನಲ್ಲಿರುವ ಪುಟ್ಟಣ್ಣ ಚೆಟ್ಟಿ ಭವನದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ ಎಂದರು.

ವಿದ್ಯಾರ್ಥಿಗಳು ಅಂಕಪಟ್ಟಿ, ಟಿ.ಸಿ ಅಥವಾ ಜಾತಿ ಪ್ರಮಾಣ ಪತ್ರದ ದಾಖಲಾತಿ ಜೊತೆಗೆ ನೋಂದಣಿ ಅರ್ಜಿಯನ್ನು ಸುಂದರ್ ಜಿ. ಬೆಂಗಳೂರು ಅವರ ಮೊ 9886423935ಗೆ ಕಳಿಹಿಸಿಕೊಡಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ನಾಗೇಂದ್ರ ವಿಶ್ವಕರ್ಮ, ಯುವ ಘಟಕದ ತಾಲೂಕು ಅಧ್ಯಕ್ಷ ವೈ.ಬಿ.ಸ್ವಾಮಿ, ಎ.ಎನ್.ನಾಗರಾಜು, ಕೆಂಪರಾಜು ಹಾಜರಿದ್ದರು.

ಅಂಬೇಡ್ಕರ್ ವಿಚಾರಗಳನ್ನು ಅನುಸರಿಸಲು ಸಲಹೆ

ಚಾಮರಾಜನಗರ: ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳನ್ನು ಅನುಸರಿಸುವ ಮೂಲಕ ಅವರಿಗೆ ಎಲ್ಲರೂ ಕೃತಜ್ಞತೆ ಸಲ್ಲಿಸಬೇಕು ಎಂದು ಮಹಾರಾಜ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಬಿಪಿನ್ ನಾಗರಾಜ್ ತಿಳಿಸಿದರು.



ನಗರದ ಸತ್ಯಮಂಗಲ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಬಸ್ ಘಟಕ ಆವರಣದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ನಡೆದ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಆಚರಣೆ, ನಿವೃತ್ತ ನೌಕರರಿಗೆ ಸನ್ಮಾನ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಾತಿ ಆಧಾರಿತ ತಾರತಮ್ಯದ ವಿರುದ್ಧ ಅಂಬೇಡ್ಕರ್‌ರವರು ಜೀವನ ಪೂರ್ತಿ ಹೋರಾಡಿದರು. ಅದಕ್ಕೆ ಅವರ ಜನ್ಮದಿನವನ್ನು 'ಸಮಾನತೆ ದಿನ' ಎಂದು ಆಚರಿಸುತ್ತೇವೆ ಎಂದು ಹೇಳಿದರು. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಓದಿ, ಮೂಕನಾಯಕ ಪತ್ರಿಕೆ ಆರಂಭಿಸಿ ದಮನಿತರ ಧ್ವನಿಯಾದರು. ಶಿಕ್ಷಣ, ಸಂಘಟನೆ, ಹೋರಾಟ ಎಂಬ ಮೂರು ಮಂತ್ರನೀಡಿದರು ಎಂದು ತಿಳಿಸಿದರು.

ನಂತರ ಟಿ.ನರಸೀಪುರ ನಳಂದ ಬುದ್ಧ ವಿಹಾರದ ಬಿಕ್ಕು ಬಂತೆ ಬೋಧಿರತ್ನ ಮಾತನಾಡಿ, 1956ರಲ್ಲಿ ಬೌದ್ಧ ಧರ್ಮ ಸ್ವೀಕರಿಸಿ ಲಕ್ಷಾಂತರ ಜನರಿಗೆ ದಾರಿ ತೋರಿದರು. ಸ್ವಾಭಿಮಾನದಿಂದ ಬದುಕಿ ಎಂದು ಕಲಿಸಿದರು. ಜಯಂತಿ ಅಂದರೆ ಆ ಆಶಯಗಳನ್ನು ಹೊಸ ತಲೆಮಾರಿಗೆ ತಲುಪಿಸುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಭಾಗೀಯ ನಿಯಂತ್ರಣಾಧಿಕಾರಿ ಎಸ್.ಪಿ.ನಾಗರಾಜು, ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಉಮೇಶ್, ರಘೋತ್ತಮ, ಗೌರಾಂಬ, ಸ್ನೇಹರಾಜು ಇದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 17-05-2026

ಪುಟ 9

'ಮೈಸೂರು ಮಿತ್ರ' ವಾರ್ಷಿಕ ಕಥಾ ಸ್ಪರ್ಧೆ-2026

ಸಮಾಧಾನಕರ ಬಹುಮಾನಿತ ಕಥೆ

ಮರಳಿ ಗೂಡಿಗೆ



ರಾಧಿಕಾ ತವರು ಮನೆ, ಗಂಡನ ಮನೆಯನ್ನು ಬಿಟ್ಟು ಅದೆಷ್ಟೋ ವರ್ಷಗಳೇ ಉರುಳಿ ಹೋಗಿತ್ತು. ಎಲ್ಲರನ್ನೂ ಒಮ್ಮೆ ನೋಡುವ ಮನಸ್ಸಾದರೂ ಯಾಕೋ ಎಲ್ಲರಿಂದಲೂ ದೂರಾದ ಮೇಲೆ ಮತ್ತೆ ಹೋಗಿ ಅವರೆದುರಿಗೆ ಧುತ್ತೆಂದು ನಿಲ್ಲುವುದು ಸರಿಯಲ್ಲವೆಂದು ತಾನು ಕೆಲಸ ಮಾಡುತ್ತಿದ್ದ ಕಚೇರಿಯಲ್ಲಿ ತನಗೆ ನೀಡಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಳು. ಮಗಳು ಚಿಕ್ಕವಳಿರುವಾಗ ತನ್ನ ಜೊತೆಯಲ್ಲಿಯೇ ಕರೆದೊಯ್ಯುತ್ತಿದ್ದ ರಾಧಿಕಾ ಮಗಳು ದೊಡ್ಡವಳಾದಂತೆ ಅವಳನ್ನು ಉತ್ತಮ ಶಾಲೆಗೆ ಸೇರಿಸಿ ಶಿಕ್ಷಣ ಕೊಡಿಸುತ್ತಿದ್ದಳು. ಮಗಳು ತನ್ನಂತೆ ಆಗಬಾರದು. ಅವಳು ಒಳ್ಳೆಯ ಹುದ್ದೆಯನ್ನು ಅಲಂಕರಿಸಬೇಕು ಎಂಬ ಮಹದಾಸೆ ಅವಳಲ್ಲಿ ಮೂಡಿತ್ತು.



ಲೇಖಕರು

ಸುಹಾಸಿನಿ ಗಣಪತಿ ಹೆಗಡೆ
ನೃಪತುಂಗ ರಸ್ತೆ, ಡಿಪೋ ಸರ್ಕಲ್ ಹತ್ತಿರ, ಕುವೆಂಪು ನಗರ, ಮೈಸೂರು-23.
ಮೊ : 7338350525

ರಾಗಿಣಿ ಎದ್ದೇಳು ಮಗು, ಸ್ಕೂಲಿಗೆ ಲೇಟ್ ಆಯ್ತು. ನನಗೆ ಇವತ್ತು ಆಫೀಸಿನಲ್ಲಿ ಮೀಟಿಂಗ್ ಇದೆ, ನಿನ್ನನ್ನು ದಾರಿಯಲ್ಲೇ ಬಿಟ್ಟು ಹೋಗ್ತೀನಿ, ಬೇಗ ಏಳಮ್ಮ, ಎನ್ನುತ್ತ ಮಗಳನ್ನು ಎಬ್ಬಿಸಿದಳು ರಾಧಿಕಾ.

ಆದರೆ ರಾಗಿಣಿ ಕಮಕ್ ಕಿಮಕ್ ಎನ್ನದೆ ಹೊದಿಕೆಯನ್ನು ಮತ್ತಷ್ಟು ಎಳೆದುಕೊಂಡು, "ಇನ್ನೊಂದು ಐದು ನಿಮಿಷ ಪ್ಲೀಸ್ ಅಮ್ಮ, ತುಂಬಾ ಚಳಿಯಿದೆ," ಎಂದು ಮುರುಟಿ ಕೊಂಡಳು. ಮಗಳ ಮೈದಡವಿ ಹೊದಿಕೆ ಸರಿಸುತ್ತಾ ರಾಧಿಕಾ ಪುಸಲಾಯಿಸಿದಳು, "ಏಳು ಜಾಣಮರಿ, ಅಮ್ಮನಿಗೆ ಲೇಟ್ ಆಗ್ತಿದೆ. ನಿನಗೆ ಇಷ್ಟ ಅಂತ ಅವರೆಕಾಳು ಉಪ್ಪಿಟ್ಟು ಮಾಡಿಸಿದ್ದೀನಿ ನೋಡು." ತಕ್ಷಣ ಎದ್ದ ರಾಗಿಣಿ, "ಲವ್ ಯು ಮುದ್ದು ಅಮ್ಮ" ಎನ್ನುತ್ತಾ ಅಮ್ಮನ ಕೊರಳಿಗೆ ಜೋತುಬಿದ್ದಳು. ಮಗಳ ಹಣೆಗೆ ಮುತ್ತಿಟ್ಟು ರಾಧಿಕಾ ಅಡುಗೆಮನೆಯತ್ತ ನಡೆದಳು.

ಅಡುಗೆ ಮನೆಯಲ್ಲಿ ಟಿಫನ್ ಬಾಕ್ಸ್ ತುಂಬಿಸುತ್ತಿದ್ದಾಗ ರೇಡಿಯೋದಲ್ಲಿ ಗಣೇಶ್ ದೇಸಾಯಿಯವರ ಕಂಠದ ಭಾವಗೀತೆ ಮೊಳಗಿತ್ತು "ನೂರು ನೋವಿನ ನಡುವೆ ಒಂದು ನಗೆಯೂ ಕಾಡಿ, ನೆಪವು ಸಿಕ್ಕಿದೆ ಬದುಕಿಗೆ..." ಆ ಸಾಲುಗಳು ರಾಧಿಕಾಳನ್ನು ಹಳೆಯ ನೆನಪಿಗೆ ದೂಡಿತ್ತು.

ರಾಧಿಕಾ ತುಮಕೂರಿನ ಗ್ರಂಥಪಾಲಕ ಶ್ಯಾಮರಾಯರು ಮತ್ತು ಶಾರದಮ್ಮನವರ ಏಕೈಕ ಪುತ್ರಿ. ಅತಿಯಾದ ಪ್ರೀತಿಯಲ್ಲಿ ಬೆಳೆದ ಅವಳು ಅಪ್ಪಟ ಭಾವನಾಜೀವಿ. ಯಾರನ್ನೇ ಆಗಲಿ ಅತೀ ಬೇಗ ನಂಬಿ ಮೋಸ ಹೋಗುವ ಸ್ವಭಾವ ಅವಳದು. ಓದಿನಲ್ಲಿ ಆಸಕ್ತಿ ಕಡಿಮೆ ಇದ್ದರೂ, ತಂದೆಯ ಒತ್ತಾಸೆಯಿಂದ ಎಂ.ಎ ಪದವಿ ಮುಗಿಸಿದ್ದಳು. ಸುಶ್ರಾವ್ಯವಾಗಿ ಹಾಡುತ್ತಿದ್ದಳು, ದೇವರ ಮೇಲೆ ಅಪಾರ ಭಕ್ತಿ ಇತ್ತು.

* * * * *

ಅವಳ ಜೀವನದ ದಿಕ್ಕನ್ನೇ ಬದಲಿಸಿದ್ದು ಆ ಒಂದು ಸೋಮವಾರ. ಅಂದು ಕಾಲೇಜಿಗೆ ಹೊರಡುವಾಗ ಅವಳ ಪರ್ಸ್ ದಾರಿಯಲ್ಲಿ ಅವಳ ಕೈಯಿಂದ ಜಾರಿ ರಸ್ತೆಯಲ್ಲಿ ಬಿದ್ದಿತ್ತು.

ಹಲೋ ಮಿಸ್.. ಹಲೋ ಮಿಸ್ ನಿಮ್ ಪರ್ಸ್ ಬಿದ್ದಿದೆ ತಗೊಳ್ಳಿ ಎಂದು ಯುವಕನೊಬ್ಬ ಹಿಂದಿನಿಂದ ಕರೆಯುತ್ತಿದ್ದ. ಬೇರೆ ಯಾರನ್ನೋ ಕರೆದಿರಬಹುದೆಂದು ರಾಧಿಕಾ ಹೆಜ್ಜೆ ಮುಂದೆ ಕಿತ್ತಿಡುವಷ್ಟರಲ್ಲಿ ಮತ್ತೆ ಹಲೋ ಮಿಸ್ ಎಂಬ ಕರೆ ಕೇಳಿ ತನ್ನ ಕೈಯ್ಯಲ್ಲಿ ಪರ್ಸ್ ಇದೆಯೇ, ಇಲ್ಲವೇ ಎಂಬುದನ್ನೊಮ್ಮೆ ಚೆಕ್ ಮಾಡಿದಳು. ಆದರೆ ಟೀಚಿಂಗ್ ಏಡ್‌ಗಳು, ನೋಟ್ ಬುಕ್‌ಗಳ ಮಧ್ಯದಿಂದ ಪರ್ಸ್ ಜಾರಿ ಬಿದ್ದಿರುವುದು ಆಕೆಯ ಗಮನಕ್ಕೆ ಬಂದೇ ಇರಲಿಲ್ಲ. ಹೌದು ಆ ಯುವಕ ನನ್ನನ್ನೇ ಕರೆಯುತ್ತಿದ್ದಾನೆ ಎಂದು ಹಿಂದಿರುಗಿದಳು. ಯುವಕನನ್ನು ನೋಡುತ್ತಲೇ ಆಕೆಗೆ ಲವ್ ಎಟ್ ಫಸ್ಟ್ ಸೈಟ್ ಎಂಬಂತಾಗಿತ್ತು. ಗುಂಗುರು ಕೂದಲು, ಗುಳಿಬೀಳುವ ಕೆನ್ನೆ, ಸ್ಫುರದ್ರೂಪಿ ಯುವಕ ಆಕೆಯ ಎದುರಿಗೆ ನಿಂತಿದ್ದ. ಆ ಕ್ಷಣದಲ್ಲೇ ರಾಧಿಕಾ ಅವನಿಗೆ ಮನ ಸೋತಿದ್ದಳು.

ಇಂದೂ ಕೂಡ ಆತನೆಲ್ಲಿಯಾದರೂ ಕಾಣಬಹುದೇನೋ ಎಂಬ ಆಸೆ ಸಣ್ಣದಾಗಿ ಆಕೆಯ ಮನದಲ್ಲಿ ಕಾಡಿತ್ತು. ಅವಳು ಮಕ್ಕಳಿಗೆ ಪಾಠ ಮಾಡಲೆಂದು ಕಾಲೇಜಿಗೆ ತೆರಳಿದಾಗ ಅದೇ ಮುಖ ಮತ್ತೆ ದುತ್ತೆಂದು ಆಕೆಯ ಮುಂದೆ ಪ್ರತ್ಯಕ್ಷವಾಗಿತ್ತು. ರಾಧಿಕಾ ಗೆಳತಿ ಸಹನಾ ನಿನಗೇನೆ ಆಗಿದೆ, ಗರಬಡಿದವರ ಹಾಗೆ ನಿಂತಿದ್ದೀಯಲ್ಲ, ಬಾ ಎನ್ನುತ್ತ ಒಳಗಡೆ ಎಳೆದೊಯ್ದಳು. ಆಂ, ಹೂಂ ಎನ್ನುತ್ತ ಒಳಗಡೆ ನಡೆದಳು ರಾಧಿಕಾ.

ಕಾಲೇಜಿನ ಪ್ರಿನ್ಸಿಪಾಲ್ ಲಕ್ಷ್ಮಿಬಾಯಿ ನೋಡಿ ಸುಧೀರ್ ಮಕ್ಕಳನ್ನು ಟ್ರಿಪ್‌ಗೆ ಕರೆದುಕೊಂಡು ಹೋಗೋ ಜವಾಬ್ದಾರಿ ನಿಮ್ಮದು. ಎಷ್ಟು ಸುರಕ್ಷಿತವಾಗಿ ಕರೆದುಕೊಂಡು ಹೋಗಿದ್ದೀರೋ ಅಷ್ಟೇ ಸುರಕ್ಷಿತವಾಗಿ ಕರೆದುಕೊಂಡು ಬರಬೇಕು ತಿಳೀತಾ? ಎಂದು ದೊಡ್ಡ ಸ್ವರದಲ್ಲಿಯೇ ಯಾರಿಗೋ ಗದರಿದಂತೆ ಕೇಳಿಸಿತ್ತು. ಅಲ್ಲೇ ಪಕ್ಕದ ಕೋಣೆಯೊಳಗೆ ಕುಳಿತಿದ್ದ ರಾಧಿಕಾ ಯಾರಿಗೆ ಇಷ್ಟು ಜೋರಾಗಿ ಹೇಳುತ್ತಿದ್ದಾರೆಂದು ಇಣುಕಿ ನೋಡಿದಾಗ ಪ್ರಿನ್ಸಿಪಾಲ್ ಎದುರಿಗೆ ಆಕೆಯ ನಿದ್ದೆ ಕದ್ದವ ನಿಂತಿದ್ದ.

ಓಹ್ ! ಇವನ ಹೆಸರು ಸುಧೀರ್, ಟ್ರಿಪ್ ಎಲ್ಲಿಗೆ ಇಟ್ಟಿರಬಹುದು? ತಾನೂ ಇವನ ಜೊತೆ ಹೊರಟಿದ್ದರೆ ಸ್ವಲ್ಪ ತಿಳಿದುಕೊಳ್ಳಬಹುದಿತ್ತು. ನಮಗೆ ಅದಕ್ಕೆಲ್ಲ ಅವಕಾಶವೆಲ್ಲಿದೆ? ನಾವು ಇಲ್ಲಿಗೆ ಬಂದಿದ್ದು ಕೇವಲ ಪ್ರಶಿಕ್ಷಣಾರ್ಥಿಗಳಾಗಿ. ನಮಗೆಲ್ಲ ಅವಕಾಶವಿರಲ್ಲ ಎಂದು ಮನದಲ್ಲೆ ಗೊಣಗಿಕೊಳ್ಳುತ್ತಿರುವಾಗಲೇ ಸಹನಾ ಫೋನ್‌ಗೆ ಕರೆಯೊಂದು ಬಂದಿತ್ತು. ಸಹನಾ-ರಾಧಿಕಾ ಮಾಸ್ಟರ್ಸ್ ಮಾಡುತ್ತಿದ್ದ ಕಾಲೇಜಿನ ಪ್ರಾಂಶುಪಾಲರು ಸಹನಾಗೆ ಕರೆ ಮಾಡಿ ನೀವು ಈಗ ಟ್ರೈನಿಗಳಾಗಿ ಕಲಿಸೋಕೆ ಹೋಗುತ್ತಿರುವ ಕಾಲೇಜಿನ ಮಕ್ಕಳಿಗೆ ಬಾದಾಮಿ, ಐಹೊಳೆ ಟ್ರಿಪ್ ಇಟ್ಟಿದ್ದಾರಂತೆ, ನಮ್ಮ ಮಕ್ಕಳನ್ನು ಕರೆದುಕೊಂಡು ಹೋಗಿ ಅವರಿಗೂ ಅಭ್ಯಾಸವಾಗಲಿದೆ ಎಂದು ಅಲ್ಲಿನ ಪ್ರಿನ್ಸಿಗೆ ಹೇಳಿದ್ದೆ, ಅವರು ನನಗೆ ತೀರಾ ಪರಿಚಿತರು. ಅವರು ನಿಮ್ಮನ್ನು ಕರೆದುಕೊಂಡು ಹೋಗಲು ಒಪ್ಪಿದ್ದಾರೆ ನೀವು ನಾಳೆ ಅಲ್ಲಿಗೆ ಹೋಗಲು ರೆಡಿಯಾಗಿ ಬನ್ನಿ, ಮಕ್ಕಳ ಕುರಿತು ನಿಮಗೂ ಜಾಗೃತಿ ಇರಬೇಕು. ಅಲ್ಲಿ ನೀವು ಏನೆಲ್ಲ ಮಾಡಿದ್ದೀರಿ, ಇದರ ವರದಿಯನ್ನು ಕೊಡಬೇಕು ಎಂದು ಹೇಳಿ ಕರೆಯನ್ನು ಕಟ್ ಮಾಡಿದ್ದರು.

ನಂತರ ಆತ ಅವಳ ಪರಿಚಯದ ಕಾಲೇಜಿನಲ್ಲಿಯೇ ಉಪನ್ಯಾಸಕನಾಗಿರುವುದು ತಿಳಿಯಿತು. ಕಾಲೇಜಿನ ಪ್ರವಾಸದ ಸಮಯದಲ್ಲಿ ಅವರ ಪರಿಚಯ ಪ್ರೇಮಕ್ಕೆ ತಿರುಗಿತು. ಸುಧೀರ್‌ನ ನಡವಳಿಕೆಯ ಬಗ್ಗೆ ತಂದೆ ಶ್ಯಾಮರಾಯರು ಎಚ್ಚರಿಸಿದ್ದರೂ, ಪ್ರೇಮಾಂಧಳಾಗಿದ್ದ ರಾಧಿಕಾ ಕೇಳಲಿಲ್ಲ. ಹಠ ಮಾಡಿ ಸುಧೀರ್‌ನನ್ನೇ ಮದುವೆಯಾಗಿ ಅವನ ಮನೆಗೆ ಬಂದಳು.

ಸುಧೀರ್‌ನ ಮನೆಗೆ ಬಂದ ಮೇಲೆ ರಾಧಿಕಾಳಿಗೆ ವಾಸ್ತವದ ದರ್ಶನವಾಯಿತು. ಆತ ಚೈನ್ ಸ್ಮೋಕರ್ ಮತ್ತು ಮದ್ಯವ್ಯಸನಿ ಎಂಬುದು ಅರಿವಿಗೆ ಬಂದಾಗ ಭೂಮಿ ಕುಸಿದಂತಾಯಿತು. ಮಾವ ವೆಂಕಟಾಚಲ ಒಳ್ಳೆಯವರಾಗಿದ್ದರೂ, ಅತ್ತೆ ಪದ್ಮಮ್ಮ ಸದಾ ಗೊಣಗುವ ಸ್ವಭಾವದವರು. "ಬೆಳ್ಳಗಿರುವುದೆಲ್ಲ ಹಾಲಲ್ಲಮ್ಮ," ಎಂದು ಮಾವ ಅಂದೇ ಎಚ್ಚರಿಸಿದ್ದರು.

* * * * *

ಗರ್ಭಿಣಿಯಾಗಿದ್ದಾಗಲೂ ಸುಧೀರ್ ಬದಲಾಗಲಿಲ್ಲ. ಕುಡಿತದ ಅಮಲಿನಲಿ ಕೆಲಸವನ್ನೂ ಕಳೆದುಕೊಂಡ. ಪರಿಸ್ಥಿತಿ ಮಿತಿಮೀರಿದಾಗ, ತನ್ನ ಹಾಗೂ ಮಗಳ ಭವಿಷ್ಯಕ್ಕಾಗಿ ರಾಧಿಕಾ ಗಂಡನ ಮನೆಯನ್ನು ತೊರೆದು ಹೊರಬಂದಳು. ಪರಿಚಯದವರ ಸಹಾಯದಿಂದ ಕೆಲಸ ಹುಡುಕಿಕೊಂಡು, ಮಗಳು ರಾಗಿಣಿಯನ್ನು ಒಬ್ಬಳೇ ಸಾಕಿ ಬೆಳೆಸಿದಳು. ತಂದೆ-ತಾಯಿಯ ಸಂಪರ್ಕವಿಲ್ಲದೆ, ನೋವನ್ನೆಲ್ಲ ನುಂಗಿ ಬದುಕನ್ನು ಕಟ್ಟಿಕೊಂಡಳು.

ರಾಧಿಕಾ ತವರು ಮನೆ, ಗಂಡನ ಮನೆಯನ್ನು ಬಿಟ್ಟು ಅದೆಷ್ಟೋ ವರ್ಷಗಳೇ ಉರುಳಿ ಹೋಗಿತ್ತು. ಎಲ್ಲರನ್ನೂ ಒಮ್ಮೆ ನೋಡುವ ಮನಸ್ಸಾದರೂ ಯಾಕೋ ಎಲ್ಲರಿಂದಲೂ ದೂರಾದ ಮೇಲೆ ಮತ್ತೆ ಹೋಗಿ ಅವರೆದುರಿಗೆ ಧುತ್ತೆಂದು ನಿಲ್ಲುವುದು ಸರಿಯಲ್ಲವೆಂದು ತಾನು ಕೆಲಸ ಮಾಡುತ್ತಿದ್ದ ಕಚೇರಿಯಲ್ಲಿ ತನಗೆ ನೀಡಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಳು. ಮಗಳು ಚಿಕ್ಕವಳಿರುವಾಗ ತನ್ನ ಜೊತೆಯಲ್ಲಿಯೇ ಕರೆದೊಯ್ಯುತ್ತಿದ್ದ ರಾಧಿಕಾ ಮಗಳು ದೊಡ್ಡವಳಾದಂತೆ ಅವಳನ್ನು ಉತ್ತಮ ಶಾಲೆಗೆ ಸೇರಿಸಿ ಶಿಕ್ಷಣ ಕೊಡಿಸುತ್ತಿದ್ದಳು. ಮಗಳು ತನ್ನಂತೆ ಆಗಬಾರದು. ಅವಳು ಒಳ್ಳೆಯ ಹುದ್ದೆಯನ್ನು ಅಲಂಕರಿಸಬೇಕು ಎಂಬ ಮಹದಾಸೆ ಅವಳಲ್ಲಿ ಮೂಡಿತ್ತು.

ಇತ್ತ ರಾಯರಿಗೆ ಮಗಳು ತನ್ನ ಗಂಡನ ಮನೆಯನ್ನೂ ತೊರೆದಿರುವ ವಿಷಯ ಯಾರದ್ದೋ ಮೂಲಕ ಬಂದು ತಲುಪಿತ್ತು. ರಾಧಿಕಾನ ನಾವು ಇಲ್ಲಿಗೆ ಕರೆದುಕೊಂಡು ಬಂದು ಇಟ್ಟುಕೊಳ್ಳೋಣವೇನೆ? ಎಂದು ಪತ್ನಿಯಲ್ಲಿ ಪ್ರಶ್ನಿಸಿದ್ದರು. ನಿಮಗೇನು ತಲೆ ಕೆಟ್ಟಿದೆಯಾ? ಅವಳೇ ಬೇಡವೆಂದು ತಿರಸ್ಕರಿಸಿ ಬಿಟ್ಟು ಹೋದಮೇಲೆ ಅವಳ ಹಿಂದೆ ನಾವು ಯಾಕೆ ಹೋಗಬೇಕು? ಎಂದು ಬೈದು ಸುಮ್ಮನಾಗಿಸಿದ್ದರು. ಆದರೂ ಹೆತ್ತ ಕರುಳು ಮಗಳಿಗಾಗಿ ಮಿಡಿಯುತ್ತಿತ್ತು.

ರಾಧಿಕಾಗೆ ಅವಳು ಕೆಲಸ ಮಾಡುವ ಕಾಲೇಜು ಅವಳಿದ್ದಲ್ಲಿಂದ ಎರಡು ಕಿಲೋಮೀಟರ್ ದೂರವಿದ್ದ ಕಾರಣ ಬಸ್ ಹಿಡಿದು ಹೋಗಬೇಕಾಗಿತ್ತು. ರಶ್ ಇರೋ ಬಸ್ ನಲ್ಲಿ ತೂರಿಸಿಕೊಂಡು ಮುದುರಿ ನಿಲ್ಲಬೇಕಾದ ಪರಿಸ್ಥಿತಿ ಆದರೆ ಕೆಲಸ ಮಾಡಲೇಬೇಕಾದ ಅನಿವಾರ್ಯತೆ ಎಲ್ಲವನ್ನೂ ಅವಳಿಗೆ ಮೈಗೂಡಿಸಿಕೊಂಡು ಹೋಗಲು ಅನುವು ಮಾಡಿಕೊಟ್ಟಿತ್ತು.

ಕಾಲ ಯಾರಿಗೂ ಕಾಯಲ್ಲ, ಮಗಳು ಬೆಳೆಯ ತೊಡಗಿದಳು. ಇನ್ನೆರಡು ವರ್ಷದಲ್ಲಿ ಹೈಸ್ಕೂಲ್ ಸೇರುವುದರಲ್ಲಿದ್ದಳು. ರಾಧಿಕಾ ಒಂದು ದಿನ ಕಾಲೇಜ್ ಕೆಲಸ ಮುಗಿಸಿ ಬಸ್‌ಗಾಗಿ ಕಾದು ಸುಸ್ತಾದಳು. ಇನ್ನು ಬಸ್‌ಗೆ ಕಾದು ಪ್ರಯೋಜನವಿಲ್ಲ, ಮಗಳು ಬರೋ ಟೈಮ್ ಬೇರೆ ಆಯ್ತು ನಡೆದುಕೊಂಡೇ ಹೋಗಿಬಿಡೋಣ ಎನ್ನುತ್ತ ಮನೆಯತ್ತ ಹೆಜ್ಜೆ ಹಾಕಿದ್ದಳು.

* * * * *

ಒಂದು ದಿನ ದಾರಿಯಲ್ಲಿ ಹೋಗುವಾಗ ರಾಧಿಕಾ ಅಚಾನಕ್ ಸುಧೀರ್‌ನನ್ನು ನೋಡಿದಳು. ಆತನನ್ನೇ ಹಿಂಬಾಲಿಸಿ ಆತನ ಮನೆಯ ವಿಳಾಸ ಸಂಗ್ರಹಿಸಿದಳು.

ಹಳೆಯ ಸುಧೀರ್ ಈಗ ಸಂಪೂರ್ಣ ಬದಲಾಗಿದ್ದ. ದೊಡ್ಡ ಜಾಹೀರಾತು ಕಂಪನಿಯ ಮಾಲೀಕನಾಗಿ ಬೆಳೆದಿದ್ದ. ತನ್ನ ತಪ್ಪಿನ ಅರಿವಾಗಿ ತನ್ನ ಹೆಂಡತಿ-ಮಗಳಿಗಾಗಿ ಆತ ಹಂಬಲಿಸುತ್ತಿದ್ದ.

ಒಂದು ದಿನ ಮಧ್ಯಾಹ್ನ ಕಾರ್ ಪೋರ್ಟಿಕೋದಲ್ಲಿ ನಿಲ್ಲಿಸಿ ಸುಧೀರ್ ಮನೆಯೊಳಗಡೆ ಹೆಜ್ಜೆಯಿಡುತ್ತಿದ್ದಂತೆ ಸಾಬ್ ನಿಮ್ಮನ್ನು ಕೇಳ್ಕೊಂಡು ಯಾರೋ ಹೆಂಗಸು ಬಂದಿದ್ದಾರೆ. ಕೆಲವು ಸಮಯದಿಂದ ನಿಮಗಾಗಿ ಕಾಯುತ್ತಿದ್ದಾರೆ ಎಂದು ಹೇಳಿದ. ಹೌದಾ? ಯಾರು? ಹೆಸರೇನಂತೆ ವಿಚಾರಿಸಿಲ್ವಾ? ಯಾರಾದರೂ ಸಹಾಯ ಕೇಳ್ಕೊಂಡು ಬಂದು ಬಿಡ್ತಾರೆ. ಈಗ ಪುರುಸೊತ್ತಿಲ್ಲ, ಆಮೇಲೆ ಬರೋದಕ್ಕೆ ಹೇಳು ಎಂದು ಸೆಕ್ಯೂರಿಟಿಗೆ ಗದರಿದ.

ಸಾಬ್ ರಾಧಿಕಾ ಅಂತ ಅವಳ ಹೆಸರು ಹೇಳುತ್ತಿದ್ದಂತಯೇ ಶರೀರದಲ್ಲಿ 200ವೋಲ್ಟ್ ವಿದ್ಯುತ್ ಪ್ರವಹಿಸಿದಂತಾಯ್ತು ಸುಧೀರ್‌ಗೆ. ರಾಧಿಕಾ, ನನ್ನ ರಾಧಿಕಾ ನನ್ನ ಹುಡುಕಿ ಬಂದಿದ್ದಾಳಾ? ಅವಳಿಗೆ ನಾನೆಷ್ಟು ಹಿಂಸೆ ಕೊಟ್ಟುಬಿಟ್ಟೆ, ಬೇಜಾವ್ದಾರಿಯಿಂದ ವರ್ತಿಸಿ ಅವಳ ಮಾನ, ಮರ್ಯಾದೆಗಳನ್ನು ಕಳೆದೆ. ಅವಳು ನನ್ನನ್ನು ಕ್ಷಮಿಸಿ ನನ್ನನ್ನು ಒಪ್ಕೋಬಹುದಾ? ಸಾವಿರಾರು ಪ್ರಶ್ನೆಗಳು ಒಮ್ಮೆಲೆ ಹುಟ್ಟಿಕೊಂಡು ತಲೆ ಧೀಂ ಎನ್ನತೊಡಗಿತ್ತು ಸುಧೀರ್‌ಗೆ, ತಲೆ ಹಿಡಿದು ಕುಳಿತು ಆಕೆಗೆ ಬರಲು ಹೇಳು ಎಂದು ಸೆಕ್ಯೂರಿಟಿಯನ್ನು ಹೊರಗಡೆ ಕಳುಹಿಸಿ ಮನೆ ಕೆಲಸದಾಕೆ ಶಾಂತಮ್ಮನಿಗೆ ಎರಡು ಸ್ಟ್ರಾಂಗ್ ಕಾಫಿ ಮಾಡಿ ತರಲು ಹೇಳಿದ.

ಸೆಕ್ಯೂರಿಟಿ ರಾಧಿಕಾ ಬಳಿ ಬಂದು ಹೋಗ್ರಮ್ಮ, ಸಾಬ್ ಕರಿತಿದ್ದಾರ ಎಂದ, ರಾಧಿಕಾ ಸೀರೆಯ ನೆರಿಗೆಯನ್ನು ಸರಿಪಡಿಸಿಕೊಂಡು ಒಳಗಡಿಯಿಟ್ಟಳು. ಸುಧೀರ್, ರಾಧಿಕಾ ಇಬ್ಬರಿಗೂ ಜೋರಾಗಿಯೇ ಹೃದಯ ಬಡಿದುಕೊಳ್ಳುತ್ತಿತ್ತು. ಅವಳು ಸುಧೀರ್ ಮನೆಯ ಬಾಗಿಲಿಗೆ ಬಂದು, ಮೆ ಐ ಕಮಿನ್ ಸರ್? ಎಂದಳು. ಹೌದು ಇದು ನನ್ನ ರಾಧಿಕಾನೆ, ಗಡಬಡಿಸಿ ಖುರ್ಚಿಯಿಂದ ಎದ್ದ ಸುಧೀರ್, ತಾನೇ ಆಕೆಯನ್ನು ಸ್ವಾಗತಿಸಲು ಹೋದ. ರಾಧಿಕಾ ಸುಧೀರ್ ಸ್ವರ ಸಂತೋಷದಿಂದ ಕಂಪಿಸುತ್ತಿತ್ತು. ಕಣ್ಣಿಂದ ಆನಂದಭಾಷ್ಪ ಸುರಿಯುತ್ತಿತ್ತು. ನನ್ನ ರಾಧಿಕಾ ನನಗೆ ಸಿಕ್ಕಿದಳು ಮನಸ್ಸು ಸಂಭ್ರಮಿಸಿತು. ಬಾ ರಾಧಿಕಾ ಒಳಗೆ ಕೈಹಿಡಿದು ಕರೆದೊಯ್ದ. ಇಷ್ಟು ದೊಡ್ಡ ಮನೆ, ಸುತ್ತಲೂ ಕಣ್ಣಾಡಿಸಿದಳು ರಾಧಿಕಾ. ಅತ್ತೆ ಪದ್ಮಮ್ಮನ ಫೋಟೋಕ್ಕೆ ಹಾರ ಬಿದ್ದಿತ್ತು. ಓಹ್! ಇದು ಇವನದೇ ಮನೆ, ಈ ಮನೆ ಯಾರದಿರಬಹುದು ಎಂಬಿತ್ಯಾದಿ ಯೋಚನೆಗಳು, ಪ್ರಶ್ನೆಗಳು ಆಕೆಯ ಮನದಲ್ಲಿ ಮೂಡಿದವು ಎಲ್ಲವೂ ಗೋಜಲು ಗೋಜಲಾಗಿ ಕಂಡಿತು.

ಕೂತ್ಕೋ ಬಾ ಯಾಕ್ ನಿಂತೆ ಇದ್ದೀಯಾ? ರಾಧಿಕಾ ಏನ್ ಯೋಚನೆ ಮಾಡ್ತಾ ಇದ್ದೀಯಾ, ಬಾ ಕುತ್ಕೋ, ನಾನೇ, ನೀನು ತುಂಬಾನೇ ಇಷ್ಟಪಟ್ಟ ಸುಧೀರ್, ನನ್ನನ್ನು ಕ್ಷಮಿಸು ರಾಧಿಕಾ, ನಿನ್ನನ್ನು ಹುಡುಕದ ಜಾಗವಿಲ್ಲ. ಕೊನೆಗೂ ನೀನು ನನ್ನ ಕೈಗೆ ಸಿಕ್ಕಿದ್ದೀಯಲ್ಲ ನನಗೆ ಅಷ್ಟೇ ಸಾಕು ಎನ್ನುತ್ತ ರಾಧಿಕಾಳನ್ನು ಎದೆಗಾನಿಸಿಕೊಳ್ಳಲು ಹೋದ ಸುಧೀರ್ ಕ್ಷಣ ತಡೆದ. ನಾನು ಅವಳ ಪ್ರೀತಿಗೆ ಅರ್ಹನಾ? ಅವಳು ನನ್ನನ್ನೇ ನಂಬಿ ಎಲ್ಲರನ್ನೂ ತೊರೆದು ಬಂದಿದ್ದಳು. ಆದರೆ ನಾನವಳಿಗೆ ತುಂಬಾ ನೋವುಕೊಟ್ಟೆ, ಅವಳು ನನ್ನನ್ನು ಕ್ಷಮಿಸಬಹುದಾ? ಎನ್ನುವಷ್ಟರಲ್ಲಿ ರಾಧಿಕಾಳೆ ಓಡಿ ಬಂದು ಅವನ ಎದೆಗೊರಗಿದಳು. ಸುಧೀ ನಿನ್ನಿಂದ ದೂರವಾದ ದಿನಗಳಿಂದ ನಾನೆಷ್ಟು ಕಷ್ಟಪಟ್ಟೆ ಗೊತ್ತೇನೋ, ನಿನಗೆ ಒಂದು ಕ್ಷಣವೂ ನನ್ನ ನೆನಪೆ ಆಗಿಲ್ಲವಾ? ಯಾಕೆ ಹೀಗೆ ಮಾಡಿದೆ ಸುಧೀ?, ಕಣ್ಣೀರಾದಳು. ಕ್ಷಮಿಸು ಅಂತ ಹೇಳಿದ್ನಲ್ಲ, ನಾನು ಈಗ ಮೊದಲಿನ ಸುಧೀ ಅಲ್ಲ. ಬದಲಾಗಿದ್ದೀನಿ ಕಣೇ, ಬಾ ನಿನಗೇನೋ ತೋರಿಸಬೇಕು? ಎಂದು ಮಹಡಿಯ ಮೇಲೆ ಕೈಹಿಡಿದು ಪತ್ನಿಯನ್ನು ಕರೆದೊಯ್ದ. ಅಲ್ಲಿ ಅವಳಿಗೆ ಸಖೇದಾಶ್ಚರ್ಯವಾಯಿತು. ಅಪ್ಪ, ಅಮ್ಮ, ಮಾವ ಕುಳಿತು ಹರಟುತ್ತಿದ್ದರು. ಅಮ್ಮಾ, ಅಪ್ಪಾ ನೀವಿಲ್ಲಿ? ಎಂದು ಕೇಳಿದಾಗ ಹೌದಮ್ಮ, ನಮಗೆ ಯಾರೂ ದಿಕ್ಕಿಲ್ಲ ಎಂದು ಕೈಚೆಲ್ಲಿ ಕುಳಿತಿದ್ದೆವು. ನಿನ್ನನ್ನು ಹುಡುಕಿ ಸುಧೀರ್ ನಮ್ಮ ಮನೆಗೆ ಬಂದಿದ್ದ. ಆಗ ಅವನೇ ನಿಮ್ಮನ್ನು ನೋಡಿಕೊಳ್ಳುವುದು ನನ್ನ ಕರ್ತವ್ಯ. ನನ್ನ ಜೊತೆಗೆ ಬನ್ನಿ ಎಂದು ಒತ್ತಾಯದಿಂದ ಇಲ್ಲಿಗೆ ಕರೆ ತಂದ. ಮಗಳೇ ಜೊತೆಗೆ ಇಲ್ಲದ ಮೇಲೆ ಎಂದು ನಾವು ಅಲವತ್ತುಕೊಂಡಾಗ ಇವತ್ತಲ್ಲ ನಾಳೆ ಖಂಡಿತ ನಮಗೆ ಆಕೆ ಸಿಗುತ್ತಾಳೆ. ನನ್ನ ಮೇಲೆ ನಂಬಿಕೆ ಇಡಿ ಮಾವ ಅಂದಿದ್ದ. ಅವನ ಮಾತು ನಿಜವಾಯ್ತು. ಏನೋ ಕೆಟ್ಟ ಘಳಿಗೆ ಹಳೆಯದನ್ನೆಲ್ಲ ಮರೆತು ಮತ್ತೆ ನೀವಿಬ್ಬರೂ ಜೊತೆಯಾಗಿದ್ದರೆ ನಮ್ಮಷ್ಟು ಅದೃಷ್ಟವಂತರು ಮತ್ಯಾರು ಇಲ್ಲ ಕಣೆ ಶಾರದಮ್ಮ ದನಿಗೂಡಿಸಿದರು. ರಾಧಿಕಾ ಹೇಗಿದ್ದೀಯಾ ನಿನ್ನನ್ನು ದೂರ ಮಾಡಿಕೊಂಡ ನಾವು ಅಕ್ಷರಶಃ ಅನಾಥರಾಗಿದ್ದೆವಮ್ಮ, ಇಂದು ನೀನು ಮರಳಿ ಬಂದು ನಮಗೆ ಜೀವದಾನ ನೀಡಿದೆ. ಇನ್ನು ಎಲ್ಲಿಯೂ ಹೋಗಬೇಡ ತಾಯಿ, ಇದು ನಿನ್ನ ಮನೆ. ನಿನ್ನ ಗಂಡ ಕಷ್ಟಪಟ್ಟು ಸಂಪಾದನೆ ಮಾಡಿದ್ದು, ಇದಕ್ಕೆ ನೀನು ನಿಜವಾದ ವಾರಸುದಾರಳು. ತಡಮಾಡದೆ ಮರಳಿ ಗೂಡನ್ನು ಸೇರಮ್ಮ ಎಂದರು ರಾಧಿಕಾ ಮಾವ. ಮಾವನ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದಳು ರಾಧಿಕಾ. ನನ್ನ ಪ್ರತಿಯೊಂದು ಸಂಕಷ್ಟದಲ್ಲಿಯೂ ನೀವು ನನ್ನ ಜೊತೆಯಾಗಿ ನಿಂತಿದ್ದೀರಿ ಮಾವ, ನಿಮ್ಮ ಮಾತನ್ನು ಮೀರಲುಂಟೆ. ಖಂಡಿತ ಇಲ್ಲಿಗೆ ಬಂದು ನಿಮ್ಮಗಳ ಸೇವೆ ಮಾಡಿಕೊಂಡಿರುತ್ತೇನೆ ಎಂದು ಸುಧೀರ್ ಮುಖ ನೋಡಿದಳು. ಅವನು ನಿಂತಲ್ಲೇ ಕಣ್ಣು ಮಿಟುಕಿಸಿದ. ಎಲ್ಲಿ ನನ್ನ ಮಗಳು ನಡಿ ಅವಳನ್ನು ಕರ್ಕೊಂಡು ಬರೋಣ ನೀನು ಇನ್ಮುಂದೆ ಕೆಲಸ ಬಿಟ್ಟುಬಿಡು, ನನ್ನ ಮನೆಯಲ್ಲಿ, ನನ್ನ ಮನದಲ್ಲಿ ಸದಾ ರಾಣಿಯಾಗಿರು ಎಂದು ಕಣ್ಣು ಮಿಟುಕಿಸಿದ. ಹಾಲು ಜೇನು ಒಂದಾದ ಹಾಗೆ ನನ್ನ ನಿನ್ನ ಜೀವನ ನೀ ನಗುತಲಿ ಸುಖವಾಗಿರೆ ಎಂದು ಗುನುಗುತ್ತ ಹೋದವನು ಕಾರಿನೊಳಗಿಂದ ಬಾ ರಾಧಿಕಾ ಮಗಳನ್ನು ಕರೆತರೋಣ ಎಂದ. ರಾಧಿಕಾ ಸುಧೀರ್ ಪಕ್ಕ ಹೋಗಿ ಕುಳಿತಳು. ಸೆಕ್ಯೂರಿಟಿ ಸಾಬ್ ಎನ್ನುತ್ತ ಸುಧೀರ್‌ನನ್ನು ಕರೆದಾಗ ಮ್ಯಾಮ್ ಸಾಬ್ ಎಂದು ಪಕಪಕನೆ ನಕ್ಕ. ಓ ಅರ್ಥವಾಯಿತು ಬಿಡಿ ಸಾಬ್, ಸುಖಾಂತ್ಯವಾಯಿತಲ್ಲ ಎನ್ನುವಷ್ಟರಲ್ಲಿ ಇಲ್ಲ, ಇಲ್ಲ, ಇನ್ನು ಈ ಮನೆಯ ಯುವರಾಣಿಯ ಪ್ರವೇಶವಾಗಬೇಕಲ್ಲ, ಎಲ್ಲರೂ ಸಿದ್ಧತೆ ಮಾಡಿಕೊಳ್ಳಿ ಈಗಲೇ ಕರೆದುಕೊಂಡು ಬರುತ್ತೇವೆ ಎಂದ್ಹೇಳಿ ಇಬ್ಬರೂ ಶಾಲೆಯತ್ತ ಹೊರಟರು. ರಾಗಿಣಿ ನಿಮ್ಮಮ್ಮ ಬಂದಿದ್ದಾರೆ ಮನೆಗೆ ಕರ್ಕೊಂಡು ಹೋಗುತ್ತಾರಂತೆ ಹೊರಡು ಎಂದು ರಾಗಿಣಿಯ ಕ್ಲಾಸ್ ಟೀಚರ್ ಬಂದು ಕರೆದ ವೇಳೆ ರಾಗಿಣಿ ಜಿಂಕೆಯಂತೆ ನೆಗೆಯುತ್ತ ಗೇಟ್ ಬಳಿ ಹಾರಿ ಬಂದಳು. ಅಮ್ಮನ ಪಕ್ಕದಲ್ಲಿ ನಿಂತಿದ್ದ ವ್ಯಕ್ತಿಯನ್ನು ನೋಡಿದ ತಕ್ಷಣ ಇವರನ್ನು ಎಲ್ಲೋ ನೋಡಿದ್ದೀನಲ್ಲ ನೆನಪುಮಾಡಿಕೊಳ್ಳತೊಡಗಿದಳು. ಹಾಂ ಅಮ್ಮನ ಸೂಟ್ ಕೇಸ್ ನಲ್ಲಿದ್ದ ಫೋಟೋದಲ್ಲಿರುವವರು ಅಂದರೆ ಪಪ್ಪ, ಅಪ್ಪಾ ಎನ್ನುತ್ತ ಅಪ್ಪನ ಕೊರಳಿಗೆ ಜೋತುಬಿದ್ದಳು. ಹೌದು ಕಂದಮ್ಮ ನಿನ್ನನ್ನು ಇಷ್ಟುದಿನ ದೂರವಿಟ್ಟ ನತದೃಷ್ಟ ತಂದೆ. ಇನ್ನೇಲೆ ಎಲ್ಲರೂ ಜೊತೆಯಾಗಿರೋಣ ಈಗ ಸದ್ಯಕ್ಕೆ ಮನೆಗೆ ಹೋಗೋಣ, ರಾಧಿಕಾ ನೀನು ಎಲ್ಲಿ ಬಾಡಿಗೆ ಮನೆಯಲ್ಲಿದ್ದೆ ಅಂತ ವಿಳಾಸ ಕೊಡು, ಆ ಮನೆಗೆ ನಮ್ಮ ಕೆಲಸದವರು ಹೋಗಿ ಎಲ್ಲ ಸೆಟ್ಲಮೆಂಟ್ ಮಾಡಿ ಸಾಮಾನು ತಗೊಂಡು ಬರುತ್ತಾರೆ. ಈಗ ಸದ್ಯಕ್ಕೆ ನೀನು ನನ್ನ ಜೊತೆ ಹೊರಡು ಸಾಕು. ನಿನ್ನ ಜೊತೆ ತುಂಬಾ ಮಾತಾಡುವುದಿದೆ ಎನ್ನುತ್ತ ಮನೆಯತ್ತ ಕಾರನ್ನು ಓಡಿಸಿದ. ನಂತರ ಅವನು ಜಾಹೀರಾತು ಕಂಪನಿ ಸೇರಿದ್ದು, ಅಲ್ಲಿಂದ ಅವನು ಒಂದೊಂದೆ ಮೆಟ್ಟಿಲು ಏರುತ್ತ ತಾನೇ ಖುದ್ದು ಜಾಹೀರಾತು ಕಂಪನಿ ಮಾಲೀಕನಾದದ್ದು, ಎಲ್ಲವನ್ನೂ ಅವಳಿಗೆ ವಿವರಿಸಿದ್ದ. ಗಂಡನ ಸಾಹಸದ ಕಥೆಯನ್ನು ಕುತೂಹಲದಿಂದ ಕಣ್ಣರಳಿಸಿ ಕೇಳಿಸಿಕೊಂಡಳು ರಾಧಿಕಾ. ನಿಮ್ಮ ಕಥೆ ಮುಗಿದಿದ್ದರೆ ಎಲ್ಲರೂ ಊಟಕ್ಕೆ ಬರಬಹುದು. ಅಡಿಗೆ ಮನೆಯಿಂದಲೇ ಕೂಗಿದರು ಶಾಂತಮ್ಮ, ಮನೆಗೆ ಸೊಸೆ, ಮೊಮ್ಮಗಳು ಬಂದ ಖುಷಿಗೆ ಹಬ್ಬದಡುಗೆ ಮಾಡಿಸಿದ್ದರು ವೆಂಕಟಾಚಲ. ರಾಯರೇ ನಾಳೆ ಒಳ್ಳೆಯದಿನ ಇದೆಯಾ ನೋಡಿ ದಂಪತಿ ಒಂದಾಗಿದ್ದಾರೆ. ಸತ್ಯನಾರಾಯಣ ಪೂಜೆ ಮಾಡಿಸಿಬಿಡೋಣ ಎಂದರು. ಒಳ್ಳೆಯ ದಿನವೇ ಬೀಗರೆ ಎನ್ನುವಷ್ಟರಲ್ಲಿ ಪುರೋಹಿತರಿಗೆ ಹೇಳಿ, ಸತ್ಯನಾರಾಯಣ ಪೂಜೆಗೆ ಸಿದ್ಧತೆ ಮಾಡಿಕೊಂಡು ನೆಂಟರಿಷ್ಟರನ್ನು ಕರೆದು ಸಂಭ್ರಮಿಸಿದ್ದಾಗಿತ್ತು. ಈಗ ಸುಧೀರ್ ನಿರ್ಮಿಸಿದ ಜಾಹೀರಾತು ಕಂಪನಿಗೆ ಎಂಡಿಯಾಗಿದ್ದಳು ರಾಧಿಕಾ. ಪುಟ್ಟಿ ಎಲ್ಲಿ, ಇದ್ಯಾಕೆ ಹಾಲು ಈ ರೀತಿ ಚೆಲ್ಲಿದೆ? ಸುಧೀರ್ ಜೋರಾಗಿ ಕರೆದಾಗ ವಾಸ್ತವಕ್ಕೆ ಮರಳಿದ್ದಳು ರಾಧಿಕಾ. ತನ್ನನ್ನು ಮರಳಿ ಗೂಡು ಸೇರಿಸಿದ್ದಕ್ಕೆ ಮನದಲ್ಲೇ ದೇವರಿಗೆ ಧನ್ಯವಾದ ಹೇಳಿದ್ದಳು.

ವಾರಭವಿಷ್ಯ

17.05.2026 ರಿಂದ 23.05.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:-ರವಿ-ವೃಷಭ, ಚಂದ್ರ- ವೃಷಭ, ಮಿಥುನ, ಕಟಕ, ಸಿಂಹ, ಕುಜ-ಮೇಷ, ಬುಧ-ವೃಷಭ, ಗುರು-ಮಿಥುನ, ಶುಕ್ರ-ಮಿಥುನ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೊ,ಅ)

ವಾರದಾರಂಭಕ್ಕೆ ನಿರೀಕ್ಷೆಯಂತೆ ಹಣ ಕೈಗೆ ಬಂದರೂ ಬರಿಗೈ ಆಗಲು ಕ್ಷಣ ಮಾತ್ರ. ಮನೆಯಲ್ಲಿ ಕಲಹಗಳು ಉಂಟಾಗುವುದರಿಂದ ಚಿತ್ತಕ್ಷೋಭೆಗೆ ಒಳಗಾಗುವಿರಿ. ದಂಪತಿಗಳು ಸಂಯಮ ಕಾಯ್ದುಕೊಂಡು ಗೃಹ ಶಾಂತಿಯನ್ನು ಕಾಪಾಡಿಕೊಳ್ಳಿ. ವಾರಮಧ್ಯೆ ಫರ್ನಿಚರ್ ವ್ಯಾಪಾರಿಗಳಿಗೆ ಅಧಿಕ ವ್ಯಾಪಾರ ಹಾಗೂ ಲಾಭಗಳಿಕೆ. ಕ್ಷೀರಜನ್ಯ ವಸ್ತು, ಐಸ್ ಕ್ರೀಂ ವ್ಯಾಪಾರಿಗಳಿಗೂ ಅತಿಶಯವಾದ ಧನಲಾಭ.

ಶ್ರೀ ಗಣೇಶ ಆರಾಧನೆ, ಶುಭ ಸಂಖ್ಯೆ-5

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ವಾರದಾರಂಭಕ್ಕೆ ಮನೆಯಲ್ಲಿ ಪ್ರೀತಿ-ವಾತ್ಸಲ್ಯದ ವಾತಾವರಣ, ಮಾತೃ ಪ್ರೇಮ. ಐಹಿಕ ಸುಖ ಭೋಗಗಳನ್ನು ಅನುಭವಿಸುವಿರಿ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿ ದಾರ್ಶನಿಕರ ದರ್ಶನ ಮಾಡುವುದರಿಂದ ಧನ್ಯತಾಭಾವ. ವ್ಯಾಪಾರ-ವ್ಯವಹಾರಗಳು ಚೆನ್ನಾಗಿ ನಡೆದು ಹೆಚ್ಚಿನ ಧನಲಾಭವಾಗುವುದು. ಹಿಂದಾದುದನ್ನು ಮರೆತು ಮುನ್ನಡೆಯ ಸಮಯ ಇದು. ನಿಮ್ಮ ಆರೋಗ್ಯದ ಬಗ್ಗೆ ಉದಾಸೀನ ಬೇಡ.

ಶ್ರೀ ಲಕ್ಷ್ಮೀ ಉಪಾಸನೆ. ಶುಭ ಸಂಖ್ಯೆ-7

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ಸಪ್ತಾಹದ ಪ್ರಾರಂಭಕ್ಕೆ ಮಾನಸಿಕ ದುಗುಡಗಳು ನಿವಾರಣೆಗೊಂಡು ನವಚೈತನ್ಯದೊಂದಿಗೆ ವಾರಕ್ಕೆ ಸ್ವಾಗತ. ಸತ್ಕರ್ಮಾಚರಣೆಯಿಂದ ಮನಃಶಾಂತಿ. ಕೈಗೊಂಡ ಮಹತ್ವದ ಕೆಲಸಗಳಲ್ಲಿ ಯಶಸ್ಸು ಲಭಿಸಲಿದೆ. ವಾರ ಮಧ್ಯೆ ಸತಿ-ಸುತರ ಬೇಡಿಕೆಗಳು ಹೆಚ್ಚಾಗಿ ಮನೆಯ ಸೌಹಾರ್ದತೆ ಕೆಡಬಹುದು. ಅನಾವಶ್ಯಕ ಸಂಚಾರಗಳಿಂದ ದೇಹಕ್ಕೆ ದಣಿವು ಹಾಗೂ ಆರೋಗ್ಯದಲ್ಲಿ ಸಣ್ಣ ಪುಟ್ಟ ಏರಿಳಿತಗಳನ್ನು ಕಾಣುವಿರಿ.

ಶ್ರೀ ಮನ್ನರಾಯಣ ಸ್ತುತಿ. ಶುಭ ಸಂಖ್ಯೆ-6

ಕಟಕ (ಹಿ,ಹು,ಹೆ,ಹೊ,ಡ,ಡಿ,ಡು)

ಗೃಹದಲ್ಲಿ ಹರ್ಷದ ವಾತಾವರಣ, ನಿಮ್ಮ ರಾಶ್ಯಾಧಿಪತಿ ಚಂದ್ರನ ಶುಭ ಸಂಚಾರದಿಂದ ವಸ್ತ್ರ, ಭೋಜನ, ಶಯನಾದಿ ಸುಖ, ಭೋಗ ವಿಲಾಸಗಳಿಗೆ ಮಿತಿ ಮೀರಿದ ಖರ್ಚುಗಳೂ ಕೂಡ. ವ್ಯಯಭಾವದಲ್ಲಿರುವ ಗುರುದೇವ ನಿಮ್ಮ ಪ್ರಗತಿಗೆ ಅಡಚಣೆಗಳನ್ನು ಒಡ್ಡುತ್ತಲಿದ್ದಾನೆ. ವ್ಯಾಪಾರ-ವ್ಯವಹಾರಗಳಲ್ಲಿ ಲಾಭ-ನಷ್ಟಗಳು ಸಮತ್ವ. ಸರ್ಕಾರಿ ನೌಕರರಿಗೆ ತನಿಖಾಧಿಕಾರಿಗಳ ಬಿಸಿ ಮುಟ್ಟಬಹುದು.

ಶ್ರೀ ದುರ್ಗಾಪರಮೇಶ್ವರಿ ದರ್ಶನ. ಶುಭ ಸಂಖ್ಯೆ-4

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ನಿಮ್ಮ ಪ್ರಯತ್ನಕ್ಕೆ ಗುರು ಬೆಂಬಲವೂ ದೊರೆತು ಕಾರ್ಯಸಿದ್ಧಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಜನರಾಗಲು ಪ್ರೇರಣೆಯಾಗುವುದು. ವಿಲಾಸಿ ವಸ್ತುಗಳ ಖರೀದಿಗೆ ಹಣ ವ್ಯಯವಾಗುವುದು. ನೂತನ ಮಿತ್ರರ ಪರಿಚಯ ನಿಮ್ಮ ಅಭ್ಯುದಯಕ್ಕೆ ಹೇತುವಾಗುವುದು. ಗೃಹಲಕ್ಷ್ಮಿಯ ಸಹಾಯ ಸಹಕಾರಗಳೂ ದೊರೆಯಲಿದೆ. ವಾರಾಂತ್ಯಕ್ಕೆ ಗುರಿ ಸಾಧನೆಗೆ ಅಧಿಕ ತಿರುಗಾಟಗಳಿಂದ ದೇಹಾಯಾಸ ಉಂಟಾಗುವುದು.

ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-2

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ವಾರದ ಆದಿಗೆ ಸುಖ-ಸಂತೋಷ, ಧನ-ಧಾನ್ಯ ಸಂಗ್ರಹ. ಶೇರು ವ್ಯವಹಾರದಲ್ಲಿ ಉತ್ತಮ ಗಳಿಕೆ. ಹೊಸ ಹೂಡಿಕೆಗಳಿಗೂ ಪ್ರೇರಣೆ. ವೈಯಕ್ತಿಕ, ಸಾಮಾಜಿಕ ವಿಷಯಗಳಲ್ಲಿ ಪ್ರಗತಿಪರ ಚಿಂತನೆಗಳಿಂದ ಖ್ಯಾತಿ ಗಳಿಸುವಿರಿ. ದ್ವಿದಳ ಧಾನ್ಯ ಫಸಲುಗಳಿಂದ ಧನಲಾಭ. ಹಠ ಸ್ವಭಾವದಿಂದ ನೆರೆಹೊರೆಯಲ್ಲಿ ತಕರಾರುಗಳು ಉಂಟಾಗುವುದು. ಸರ್ಕಾರಿ ನೌಕರರಿಗೆ ಬೇಡದ ಸ್ಥಳಕ್ಕೆ ವರ್ಗ ಆಗುವುದು.

ಶ್ರೀ ಮನೆದೇವರ ಉಪಾಸನೆ. ಶುಭ ಸಂಖ್ಯೆ-1

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ಗುರು ಕೃಪೆ ಚೆನ್ನಾಗಿದೆ. ಪರಿಣಾಮ ಸಕಲ ಸೌಭಾಗ್ಯ ಪ್ರಾಪ್ತಿ. ಉದ್ಯೋಗಾಕಾಂಕ್ಷಿಗಳಿಗೆ ಶುಭ ವಾರ್ತೆ ಬರುವುದು. ಶತ್ರುಗಳನ್ನು ಸಮರ್ಥವಾಗಿ ಎದುರಿಸುವಿರಿ. ಹೊಸ ವಾಹನ ಹೊಂದುವ ಕನಸು ನನಸಾಗುವುದು. ಅಷ್ಟಮ ರವಿಯ ಕಾರಣ ರಾಜಕೀಯ ವಿರೋಧಿಗಳ ದಾಳ ನಿಮಗೆ ಮುಳುವಾಗಬಹುದು. ಆಸ್ತಿ ವಿಷಯದಲ್ಲಿ ಬಂಧು ಜನರ ವಿರೋಧ ಹಿರಿಯರ ಮಧ್ಯಸ್ತಿಕೆಯಿಂದ ಬಗೆಹರಿಯುವುದು. ನಶಾ ವಸ್ತುಗಳಿಂದ ದೂರವಿರಿ.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-7

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯು)

ಶುಭ ಚಂದ್ರನ ಅನುಗ್ರಹದಿಂದ ಮನೆಯಲ್ಲಿ ಸಡಗರ, ಸಂಭ್ರಮಗಳು, ನೂತನ ಆವಿಷ್ಕಾರದಿಂದ ಧನಾದಾಯದಲ್ಲಿ ವೃದ್ಧಿ. ಪ್ರಿಯ ಜನರ ಸಾಂಗತ್ಯ ಸಹವಾಸಗಳಿಂದ ಮನಸ್ಸು ಮುದಿತವಾಗಿರುತ್ತದೆ. ಶನಿ-ಗುರುಗಳು ಅಶುಭ ಇರುವ ಕಾರಣ ಸರ್ಕಾರಿ ಅಧಿಕಾರಿಗಳಿಂದ ತೊಂದರೆ ಉಂಟಾಗುವುದು. ರೈತಾಪಿ ಜನರಿಗೆ ಬೆಳೆ ಸರಿಯಾಗಿ ಬರದೆ ನಷ್ಟ. ಬೂಟಿನ ಗಾತ್ರಕ್ಕೆ ಕಾಲನ್ನು ಸರಿ ಹೊಂದಿಸಲಾಗದು, ಕಾಲಿಗೆ ಸರಿ ಹೊಂದುವ ಬೂಟನ್ನು ಆರಿಸಿಕೊಳ್ಳಬೇಕು.

ಶ್ರೀ ಶಿರಡಿ ಸಾಯಿ ದರ್ಶನ. ಶುಭ ಸಂಖ್ಯೆ-5

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ವಾರದಾರಂಭಕ್ಕೆ ನಿಮ್ಮ ಬಹು ನಿರೀಕ್ಷಿತ ಯೋಜನೆಗಳು ಪ್ರತಿಫಲ ನೀಡುವಲ್ಲಿ ಬೃಹಸ್ಪತಿಯ ಅನುಗ್ರಹವಿದೆ. ಸಜ್ಜನರ ಸಂಘದಲ್ಲಿದ್ದರೆ ನಿಮ್ಮ ಕ್ಷೇಮಾಭ್ಯುದಯವಾಗುವುದು. ಹಣಕಾಸಿನ ಪರಿಸ್ಥಿತಿಯಲ್ಲಿ ಗಣನೀಯ ಸುಧಾರಣೆಯನ್ನು ಕಾಣುವಿರಿ. ಮನೆಯಲ್ಲಿ ಮಂಗಳ ಕಾರ್ಯ ನಡೆಯುವುದು. ವಿವಾಹಾಕಾಂಕ್ಷಿಗಳಿಗೆ ಸೂಕ್ತ ವಧು, ವರ ದೊರೆಯುವ ಸಾಧ್ಯತೆ ಇರುತ್ತದೆ. ವಾರಾಂತ್ಯಕ್ಕೆ ಪುಣ್ಯ ಕ್ಷೇತ್ರ ಭೇಟಿ.

ಶ್ರೀ ನವಗ್ರಹ ದರ್ಶನ. ಶುಭ ಸಂಖ್ಯೆ-6

ಮಕರ (ಬೊ,ಜ,ಜಿ,ಖಿ,ಖು,ಖೆ,ಖೊ,ಗ,ಗಿ)

ನಿಮ್ಮ ವೈಯಕ್ತಿಕ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸುಖ, ಸಂತೋಷ, ಧನ-ಧಾನ್ಯ ಹೊಂದುವುದರೊಂದಿಗೆ ವಾರಕ್ಕೆ ಸ್ವಾಗತ. ಸ್ಥಿರಾಸ್ತಿ ವ್ಯವಹಾರಗಳು ಪಾಸಿಟೀವ್ ಫಲಿತಾಂಶ ನೀಡಲಿದೆ. ನಂಬಿಕಸ್ಥರೊಂದಿಗೆ ಮಾತ್ರ ಡೀಲ್ ಮಾಡಿ. ದೂರ ಪ್ರಯಾಣಗಳು ಉಂಟಾಗಬಹುದು. ಜಾಗರೂಕತೆಯಿಂದ ಡ್ರೈವ್ ಮಾಡಿ. ಅಷ್ಟಮದಲ್ಲಿ ಕೇತು ಸಂಚಾರ ಇರುವ ಕಾರಣ ಕಳ್ಳ ಕಾಕರಿಂದ ಎಚ್ಚರವಾಗಿರಿ. ನರದೌರ್ಬಲ್ಯ ಕಾಡಬಹುದು.

ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-2

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಸಾಡೇಸಾತಿಯ ನಡುವೆ ಗುರುಕೃಪೆಯೂ ಇದೆ. ಹಿರಿಯ ಅನುಭವಿಗಳ ಸಂಪರ್ಕದಿಂದ ಸಮಸ್ಯೆಗಳ ನಿವಾರಣೆ. ಗೃಹದಲ್ಲಿ ಹಿತವಾದ ವಾತಾವರಣ, ಅನ್ಯೋನ್ಯತೆ ಮನೆ ಮಂದಿಯ 'ಒಗ್ಗಟ್ಟೇ ಒಬ್ಬಟ್ಟು'. ವ್ಯಾಪಾರ ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ಬೇಡಿಕೆ ಹೆಚ್ಚಾಗಿ ಆದಾಯದಲ್ಲಿ ಹೆಚ್ಚಳ. ಮನೆಯಲ್ಲಿ ದೇವತಾಕಾರ್ಯಗಳ ಆಚರಣೆಯಿಂದ ನೆಮ್ಮದಿ. ಸಂಧಿವಾತ ಕಾಡಬಹುದು.

ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ-6

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಜನ್ಮ ಸ್ಥಾನದಲ್ಲಿ ಶ್ರೀ ಶನಿದೇವರ ಸಂಚಾರವಿರುವುದರಿಂದ ಪ್ರತಿ ಹೆಜ್ಜೆಯನ್ನು ಯೋಚಿಸಿ ಮುಂದಡಿ ಇಡಿ. ನಿಮ್ಮ ಸಾಮರ್ಥ್ಯಕ್ಕೆ ಮೀರಿದ ವಿಷಯಗಳಿಂದ ದೂರವಿರಿ. ವಾರ ಮಧ್ಯೆ ಶುಭ ಚಂದ್ರನ ಕೃಪೆಯಿಂದ ವಿಲಾಸಿ ವಸ್ತುಗಳ ಖರೀದಿಗೆ ಹಣ ವಿನಿಯೋಗವಾಗುವುದು. ನೂತನ ಗೆಳತಿಯರ ಪರಿಚಯವಾಗುವುದು. ಸ್ತ್ರೀಯರು ಅಲಂಕಾರ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ವಾರಾಂತ್ಯಕ್ಕೆ ವೈದ್ಯಕೀಯ ಖರ್ಚುಗಳು ಉಂಟಾಗಲಿದೆ.

ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-4






ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಸುರಿದ ಭಾರೀ ಗಾಳಿ ಮಳೆಗೆ ಬಾಳೆ, ಹಲಸು ಬೆಳೆಗಳು ನೆಲಕ್ಕಚ್ಚಿರುವುದು. ಮನೆಗಳ ಶೀಟ್‌ಗಳು ಹಾರಿಹೋಗಿದ್ದು, ವಿದ್ಯುತ್ ಕಂಬಗಳು ಮುರಿದು ಬಿದ್ದಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಹೆಚ್.ಡಿ.ಕೋಟೆ, ಸರಗೂರು ತಾಲೂಕಲ್ಲಿ ಭಾರೀ ಗಾಳಿ, ಮಳೆ

ನೆಲಕಚ್ಚಿದ ಬಾಳೆ, ಹಲಸು ಫಸಲು, ಹಾರಿದ ಮನೆಯ ಮೇಲ್ಛಾವಣಿ, ಮುರಿದು ಬಿದ್ದ ಮರಗಳು, ವಿದ್ಯುತ್ ಕಂಬಗಳು

ಹೆಚ್.ಡಿ.ಕೋಟೆ: ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಕಳೆದ ರಾತ್ರಿ ಸುರಿದ ಭಾರೀ ಬಿರುಗಾಳಿ ಮಳೆಗೆ ಬಾಳೆ ಮತ್ತು ಹಲಸು ಫಸಲು ನೆಲಕಚ್ಚಿದ್ದು, ಮರಗಳೂ ಮತ್ತು ವಿದ್ಯುತ್ ಕಂಬಗಳು ಉರುಳಿ ಬಿದ್ದು, ಅಪಾರ ನಷ್ಟ ಸಂಭವಿಸಿದೆ.

ಹೆಚ್.ಡಿ.ಕೋಟೆ: ತಾಲೂಕಿನ ಹೆಬ್ಬಲ ಗುಪ್ಪೆ, ಗ್ರಾಮದ ಜನತಮಾಳದಲ್ಲಿ ಸೋಮೇಶ, ದೇವಲಮ್ಮ, ದಂಪತಿಗಳ ಮನೆಯ ಚಾವಣಿ ಗುಡುಗು, ಸಿಡಿಲು, ಸಹಿತ ಭಾರೀ ಗಾಳಿ ಮಳೆಗೆ ಹಾರಿ ಹೋಗಿದೆ ಗಾಬರಿಗೊಂಡು ಮನೆಯಿಂದ ಹೊರ ಬಂದು ದಂಪತಿ ಪ್ರಾಣ ಉಳಿಸಿಕೊಂಡಿದ್ದಾರೆ. ಮನೆಯಲ್ಲಿದ್ದ ದಿನಸಿ ಪದಾರ್ಥಗಳು, ಇತರೆ ದಿನಬಳಕೆ ಪದಾರ್ಥಗಳು, ಟಿವಿ, ಫ್ರಿಡ್ಜ್, ಫ್ಯಾನ್, ಇತರೆ ಪದಾರ್ಥಗಳು ಮಳೆ ನೀರಿನಿಂದ ನಾಶವಾಗಿವೆ. ಅದೇ ಗ್ರಾಮದ ಚಿಕ್ಕನಾಯ್ಕ, ಆಂಬುಲೆನ್ಸ್ ರಾಜೇಶ, ಮರಿಚಿಕ್ಕನಾಯಕ, ಎಂಬುವರ ಮನೆಗೂ ನೀರು ನುಗ್ಗಿ ಸಂಪೂರ್ಣ ಹಾನಿಯಾಗಿದೆ.

ಅಂಕನಾಥಪುರದಲ್ಲಿ ಪವಿತ್ರ ಅವರ ಮನೆಯ ಮೇಲ್ಛಾವಣಿ ಹಾರಿ ಹೋಗಿದೆ. ಹುನಗನಹಳ್ಳಿ ಗ್ರಾಮದ ವಾಸಿ ಅರಸಮ್ಮ 2 ಎಕರೆ ಬಾಳೆ ಬೆಳೆ ಗಾಳಿ ಮಳೆಗೆ ನೆಲಕ್ಕಚ್ಚಿದೆ.

ಒಟ್ಟಾರೆಯಾಗಿ ತಾಲೂಕಿನಾದ್ಯಂತ ಸುರಿದ ಭಾರೀ ಗಾಳಿ ಮಳೆಯಿಂದ ಲಕ್ಷಾಂತರ ರೂ. ನಷ್ಟವಾಗಿ ರೈತರುಗಳು ಸಂಕಷ್ಟದಲ್ಲಿ ಸಿಲುಕಿದ್ದಾರೆ.

ಅಧಿಕಾರಿಗಳು ಹಾಗೂ ಶಾಸಕ ಅನಿಲ್ ಚಿಕ್ಕಮಾದು ಅವರು ನಮಗೆ ಪರಿಹಾರ ಕೊಡಿಸಿಕೊಡಬೇಕು ಎಂದು ಮನವಿ ಮಾಡಿದ್ದಾರೆ. ಪಟ್ಟಣದಲ್ಲಿ ಸುರಿದ ಭಾರೀ ಗಾಳಿ ಮಳೆಗೆ ಸಾಕಷ್ಟು ವಿದ್ಯುತ್ ಕಂಬಗಳು, ಭಾರೀ ಗಾತ್ರದ ಮರಗಳು ನೆಲಕ್ಕಚ್ಚಿವೆ. ಅದನ್ನು ಸಂಬಂಧಪಟ್ಟ ಚೆಸ್ಕಾಂ ಇಲಾಖೆ ಸಿಬ್ಬಂದಿಗಳು ತಕ್ಷಣ ತೆರವುಗೊಳಿಸಿ, ರಾತ್ರಿ ಕಡಿತಗೊಂಡಿದ್ದ ವಿದ್ಯುತ್ ಸಂಪರ್ಕವನ್ನು ತಕ್ಷಣ ಸರಿಪಡಿಸಿದ್ದಾರೆ.

ಸರಗೂರು: ಸರಗೂರು ತಾಲೂಕಿನ ಮನುಗನಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಸುರಿದ ಭಾರಿ ಗಾಳಿ ಮಳೆಗೆ ರೈತರೊಬ್ಬರ ಬಾಳೆ ತೋಟ ಸಂಪೂರ್ಣ ನೆಲ ಕಚ್ಚಿದೆ.

ಮನುಗನಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಧಾರಾಕಾರವಾಗಿ ಸುರಿದ ಮಹಾ ಮಳೆ ಗಾಳಿಗೆ ಗ್ರಾಮದ ಶಿವಣ್ಣ ಎಂ, [ಶಿವು] ಅವರು 2ಎಕರೆ 28 ಗುಂಟೆಯಲ್ಲಿ ಬೆಳೆದಿದ್ದ ಬಾಳೆ ಸಂಪೂರ್ಣ ನೆಲಕಚ್ಚಿದೆ, ರೈತ ಶಿವು ಕೈಸಾಲ ಹಾಗೂ ಬ್ಯಾಂಕಿನಿಂದ ಸಾಲ ಪಡೆದು ನೇಂದ್ರ ಬಾಳೆ ಕೃಷಿ ಮಾಡಿದ್ದರು. ಎಲ್ಲಾ ಬಾಳೆ ಗಿಡಗಳು ಮೋತೆ ಬಂದಿದ್ದು ಬಾಳೆಗೊನೆ ಕೈಸೇರುವ ಹತ್ತಿರ ವಿತ್ತು. ರಾತ್ರಿ ಸುರಿದ ಭಾರಿ ಗಾಳಿ ಮಳೆಗೆ ಕಷ್ಟಪಟ್ಟು ಕೃಷಿ ಮಾಡಲಾಗಿದ್ದ ಬಾಳೆ ತೋಟ ಒಂದೇ ರಾತ್ರಿಯಲ್ಲಿ ಸಂಪೂರ್ಣ ನಾಶವಾಗಿದೆ

ಇದರಿಂದ 4 ಲಕ್ಷಕ್ಕೂ ಹೆಚ್ಚು ನಷ್ಟವಾಗಿದ್ದು, ಸಾಲ ತೀರಿಸುವ ಹಾಗೂ ಕುಟುಂಬ ನಿರ್ವಹಣೆ ಮಾಡುವುದು ಕಷ್ಟಕರವೆಂದು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಕಂದಾಯ ಇಲಾಖೆ ಗ್ರಾಮಾಡಳಿತಾಧಿಕಾರಿ ಚೈತ್ರ ಅವರು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದು, ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಪರಿಹಾರ ನೀಡುವ ಭರವಸೆ ನೀಡಿದ್ದಾರೆ.

ನೂರಾರು ಮಂದಿಗೆ ಆರೋಗ್ಯ ತಪಾಸಣೆ



ತಲಕಾಡು, ಮೇ 16–ಹಸ್ತಿಕೇರಿ ಮಠದ ವಿಕಾಸ ವೇದಿಕೆ ಟ್ರಸ್ಟ್ ಆಶ್ರಯದಲ್ಲಿ ಶ್ರೀ ಪತಂಜಲಿ ಇಂಟರ್‌ನ್ಯಾಷನಲ್ ಯೋಗಾಶ್ರಮ, ಮೈಸೂರು ಮತ್ತು ತಲಕಾಡು ಬ್ರಾಂಚಿನ ಸಮೃದ್ಧಿ ಪಾಲಿ ಕ್ಲಿನಿಕ್ ಡಯಾಗ್ನೋಸ್ಟಿಕ್ ಸೆಂಟರ್ ಸಂಯುಕ್ತ ಆಶ್ರಯದಲ್ಲಿ 10 ದಿನಗಳ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ನೂರಾರು ಮಂದಿಗೆ ಉಚಿತ ರೋಗ ತಪಾಸಣೆ ನಡೆಸಿ ಔಷಧಿ ವಿತರಿಸಲಾಯಿತು.

ಶ್ರೀ ಪ್ರಕಾಶ್ ಯೋಗಿಗಳ ನೇತೃತ್ವದಲ್ಲಿ ನಡೆದ ಶಿಬಿರದಲ್ಲಿ ನೇತ್ರ ತಪಾಸಣೆ, ಡಯಾಬಿಟಿಸ್, ರಕ್ತದ ಒತ್ತಡ, ಗ್ಯಾಸ್ಟ್ರಿಕ್ ಸೇರಿದಂತೆ ಇತರ ಪರೀಕ್ಷೆ ನಡೆಸಿ ಔಷಧ ನೀಡಲಾಯಿತು. ಡಾ.ನವೀನ್, ಡಾ.ಸ್ಯಾವಾಲಿನ್, ಡಾ.ನಿಂಗರಾಜು, ಡಾ.ಯೋಗೇಶ್, ಡಾ.ಕಪಿಲ್ ರಾವ್ ಅವರು ಭಾಗವಹಿಸಿ ರೋಗಿಗಳನ್ನು ಪರೀಕ್ಷಿಸಿ ಉಚಿತ ಔಷಧವನ್ನು ವಿತರಿಸಿದರು. ನೂರಾರು ಜನರು ಇದರ ಪ್ರಯೋಜನವನ್ನು ಪಡೆದುಕೊಂಡರು

ಶ್ರೀ ಪ್ರಕಾಶ್ ಯೋಗಿ ಮಾತನಾಡುತ್ತಾ ಇದುವರೆಗೆ ರಾಜ್ಯಾದ್ಯಂತ ಯೋಗ ಶಿಬಿರವನ್ನು ನಡೆಸುತ್ತಿದ್ದೇನೆ. ಹೊರರಾಜ್ಯದಲ್ಲಿ ಯೋಗ ಶಿಬಿರವನ್ನು ನಡೆಸುತ್ತಿದ್ದೇನೆ. ಸಾಕಷ್ಟು ಜನ ಇದರ ಪ್ರಯೋಜನ ಪಡೆದುಕೊಂಡು ನಿರೋಗಿಗಳಾಗಿದ್ದಾರೆ ಎಂದರು.

ತಲಕಾಡು ಹಸ್ತಿಕೇರಿ ಮಠದ ಶ್ರೀ ಡಾ.ಸಿದ್ದ ಮಲ್ಲಿಕಾರ್ಜುನ ಸ್ವಾಮಿಗಳು ಮಾತನಾಡಿದರು. ಮಲ್ಲಣ್ಣ, ಪಿಜಿ ಪಾಂಡುರಂಗ ಶೆಟ್ರು, ಮಹೇಶ್ ಮಾಹಿ, ಚನ್ನಬಸವಣ್ಣ, ಪಾಪಣ್ಣ, ಶ್ರೀ ಭಗವಾನ್ ಎಂಟರ್‌ಪ್ರೈಸಸ್ ಮಹದೇವಪ್ಪ, ನಾಗರಾಜ ಮತ್ತಿತರು ಭಾಗವಹಿಸಿದ್ದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಗೆ ಆಕ್ರೋಶ

ನಂಜನಗೂಡಿನಲ್ಲಿ ಕಾಂಗ್ರೆಸ್ ರಸ್ತೆತಡೆ

ನಂಜನಗೂಡು, ಮೇ 16– ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಗೆ ಕಾರಣರಾದ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವಂತೆ ಒತ್ತಾಯಿಸಿ ನಂಜನಗೂಡಿನಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.



ಕಾಂಗ್ರೆಸ್ ಕಾರ್ಯಕರ್ತರು ನಂಜನಗೂಡಿನಲ್ಲಿ ರಸ್ತೆ ತಡೆ ನಡೆಸಿದರು.

ನಗರದ ಹುಲ್ಲಹಳ್ಳಿ ವೃತ್ತದ ಬಳಿ ಜಮಾವಣೆಗೊಂಡ ಯುವ ಕಾಂಗ್ರೆಸ್ ಕಾರ್ಯಕರ್ತರು ಊಟಿ–ನಂಜನಗೂಡು–ಮೈಸೂರು ರಾಷ್ಟ್ರೀಯ ಹೆದ್ದಾರಿಯನ್ನು ತಡೆದು, ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ, ಅಣಕು ಪ್ರದರ್ಶನ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಯುವ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಮಾತನಾಡಿ ಕೇಂದ್ರ ಬಿಜೆಪಿ ಸರ್ಕಾರದ ಅಧೀನದಲ್ಲಿರುವ ಎನ್‌ಟಿಎ ಏಜೆನ್ಸಿ ಸಂಸ್ಥೆಯು ನೀಟ್ ಪ್ರಶ್ನೆ ಪತ್ರಿಕೆಯನ್ನುಶ್ರೀಮಂತರಿಗೆ 50 ರಿಂದ 1 ಕೋಟಿ ವರೆಗೆ ಹರಾಜು ಹಾಕಿ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿ ಬೃಹತ್ ಭ್ರಷ್ಟಾಚಾರ ನಡೆಸಿದೆ. ಇದರಿಂದ ಸುಮಾರು 22 ಲಕ್ಷ 70 ಸಾವಿರ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ, ಆದ್ದರಿಂದ ಪ್ರಶ್ನೆ ಪತ್ರಿಕೆ ಸೋರಿಕೆಯ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಗ್ರಾಮಾಂತರ ಯುವ ಕಾಂಗ್ರೆಸ್ ಅಧ್ಯಕ್ಷ ಹೆಗ್ಗಡಹಳ್ಳಿ ಮಹೇಶ್ ಮಾತನಾಡಿ, ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿ ಭ್ರಷ್ಟಾಚಾರ ನಡೆಸಿರುವ ಎನ್‌ಟಿಎ ಏಜೆನ್ಸಿಯನ್ನು ರದ್ದುಗೊಳಿಸಿ ಬೇರೆ ಸಂಸ್ಥೆಯ ಮೂಲಕ ಪರೀಕ್ಷೆ ನಡೆಸಬೇಕು, ಅಲ್ಲದೆ ಪ್ರಶ್ನೆ ಪತ್ರಿಕೆ ಸೋರಿಕೆಗೆ ಕಾರಣರಾಗಿರುವ ತಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಚಂದನ್ ಗೌಡ, ವಿನಯ್, ಸುಕುಮಾರ್, ರಫೀಕ್ ಅಲಿ, ಆದರ್ಶ್, ಹರೀಶ, ವಸಂತ, ಪ್ರಕೃತ್, ಮನೋಜ್, ಲೋಕೇಶ್, ವಿನಯ್, ವಿಶಾಂತ್, ಸುನಿಲ್, ರಾಜೇಂದ್ರ ಸೇರಿದಂತೆ ಯುವ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ತೋಪಿನಮ್ಮ ದೇವಾಲಯದಲ್ಲಿ ಅಮಾವಾಸ್ಯೆ ಪೂಜೆ



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಮರದೂರು ಗ್ರಾಮದಲ್ಲಿ ಇಂದು ಅಮಾವಾಸ್ಯೆಯ ಪ್ರಯುಕ್ತ ಗ್ರಾಮದ ತೋಪಿನಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ನಡೆಸಲಾಯಿತು. ವಿಶೇಷ ಅಲಂಕಾರ, ವಿಶೇಷ ಪೂಜೆ ಹಾಗೂ ಬಂದಂತ ಭಕ್ತಾದಿಗಳಿಗೆ ಅನ್ನದಾಸೋಹ ನೆರವೇರಿಸಲಾಯಿತು. ಗ್ರಾಮದ ಅಡುಗೆ ರಾಜಣ್ಣ ಕುಟುಂಬದವರು ಇಂದಿನ ವಿಶೇಷ ಕಾರ್ಯಕ್ರಮವನ್ನು ನೆರವೇರಿಸಿದರು.

ಕೇರಳದ ಉಸ್ತುವಾರಿಯಾಗಿ ಆರ್.ಧರ್ಮಸೇನಾ ನೇಮಕ

ತಿ. ನರಸೀಪುರ ಮೇ 16– ವಿಧಾನ ಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನಾ



ಅವರನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿಯವರು (ಸಂಘಟನೆ) ಕೇರಳದ ಉಸ್ತುವಾರಿಯಾಗಿ ನೇಮಕ ಮಾಡಲಾಗಿದೆ ಎಂದು ಎಐಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಷ್ಟ್ರೀಯ ಅಧ್ಯಕ್ಷ ರಾಜೇಂದ್ರ ಪಾಲ್ ಗೌತಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧರ್ಮಸೇನಾ ಅವರು ತಿ.ನರಸೀಪುರ ತಾಲೂಕಿನವರಾಗಿದ್ದು, ಪಕ್ಷ ಸಂಘಟನೆ ಮತ್ತು ಜನ ಸೇವೆಯನ್ನು ಪರಿಗಣಿಸಿ ಈ ಜವಾಬ್ದಾರಿ ನೀಡಲಾಗಿದೆ. ಧರ್ಮಸೇನಾ ಅವರು ಒಮ್ಮೆ ವಿಧಾನಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಧರ್ಮಸೇನಾ ಅವರನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಎಸ್.ಸಿ. ವಿಭಾಗದ ರಾಜ್ಯ ಸಂಚಾಲಕ, ವಕೀಲ ಬಿ.ಎಸ್.ರಂಗನಾಥ ಪ್ರಸಾದ್ ಅಭಿನಂದಿಸಿದ್ದಾರೆ.

ಮೂರನೇ ಪುಟದಿಂದ

ಪಕ್ಷದಲ್ಲೇ ಉಳಿದರೆ ನಮ್ಮದೇನೂ ಅಭ್ಯಂತರವಿಲ್ಲ

ಹೆಚ್.ಡಿ.ದೇವೇಗೌಡರು ರಾಷ್ಟ್ರೀಯ ನಾಯಕರು, ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ನಾಯಕರಷ್ಟೆ ನಮಗೆ ಮುಖ್ಯ ಎಂದರು. ಮೈಸೂರು ನಾಯಕರೆಂದು ಜಿ.ಟಿ. ದೇವೇಗೌಡರಿಗೆ ನಾವು ಕೊಟ್ಟ ಮಹತ್ವವನ್ನು ಅವರು ಉಳಿಸಿಕೊಳ್ಳಲಿಲ್ಲ. ಈ ವಿಚಾರವನ್ನು ಖುದ್ದು ನಾನೇ ಅವರಿಗೆ ಹೇಳಿದ್ದೇನೆ. ಆದರೆ, ಅವರು ಪಕ್ಷದ ನಾಯಕರು ಹಾಗೂ ಸಂಘಟನೆಯಿಂದ ದೂರ ಉಳಿದರು ಎಂದು ಸಾ.ರಾ.ಮಹೇಶ್ ತಿಳಿಸಿದರು.

ಕಾರ್ಯಕರ್ತರಿಗೆ ನೋವು ತಂದಿದೆ: ಉಪಚುನಾವಣೆಯಲ್ಲಿ ಒಂದು ತೀರ್ಮಾನ, ಪರಿಷತ್ ಚುನಾವಣೆಯಲ್ಲಿ ಒಂದು ನಿರ್ಧಾರ, ರಾಜ್ಯಸಭಾ ಚುನಾವಣೆಯಲ್ಲಿ ಒಂದು ನಿಲುವು, ನಗರ ಪಾಲಿಕೆ ಹಾಗೂ ಮೇಯರ್ ಚುನಾವಣೆಯಲ್ಲಿ ಇನ್ನೊಂದು ನಿಲುವು, ಡಿಸಿಸಿ ಬ್ಯಾಂಕ್ ಹಾಗೂ ಸಹಕಾರ ಯೂನಿಯನ್ ಚುನಾವಣೆಯಲ್ಲಿ ಒಂದೊಂದು ರೀತಿಯ ತೀರ್ಮಾನ ಕೈಗೊಂಡರು. ಇದು ಸಹಜವಾಗಿಯೇ ಕಾರ್ಯಕರ್ತರಿಗೆ ನೋವು ತಂದಿದೆ ಎಂದರು. ಜಿ.ಟಿ.ದೇವೇಗೌಡರಿಂದ ನಮ್ಮ ಪಕ್ಷಕ್ಕೆ ಬಹಳ ದೊಡ್ಡ ನಷ್ಟವಾಗಿದೆ. ಒಂದೊಂದು ಚುನಾವಣೆಯಲ್ಲಿ ಅವರು ಒಂದೊಂದು ರೀತಿಯ ತೀರ್ಮಾನ ಕೈಗೊಳ್ಳುತ್ತಾರೆ. ಅವರು ಈ ರೀತಿಯ ದ್ವಂದ್ವ ನಿರ್ಧಾರಗಳು ಕಾರ್ಯಕರ್ತರಿಗೆ ಆಘಾತ ಉಂಟು ಮಾಡಿದೆ. ಪಕ್ಷದ ನಾಯಕತ್ವ ಹಾಗೂ ಕಾರ್ಯಕರ್ತರಿಗೆ ಹೀಗೆ ನೋವಾಗುವಂತೆ ನಡೆದುಕೊಂಡರೆ ಸಹಿಸುವುದಿಲ್ಲ ಎಂದರು.

ನಿಷ್ಠಾವಂತ ಕಾರ್ಯಕರ್ತರ ಅಗತ್ಯವಿದೆ: ಪಕ್ಷಕ್ಕಿಂತ ನಮಗೆ ದೊಡ್ಡವರು ಯಾರೂ ಇಲ್ಲ, ಪಕ್ಷಕ್ಕೆ ನಿಷ್ಠಾವಂತ ಕಾರ್ಯಕರ್ತರ ಅನಿವಾರ್ಯತೆ ಇದೆಯೇ ಹೊರತು, ಇಂತಹ ನಾಯಕರ ಅನಿವಾರ್ಯತೆ ಇಲ್ಲ. ನಾನೊಬ್ಬ ಶಿಕ್ಷಕನ ಮಗನಾಗಿದ್ದು, ಪಕ್ಷ ಅವಕಾಶ ನೀಡಿದ್ದರಿಂದ ಶಾಸಕನಾಗಿ, ಮಂತ್ರಿಯಾಗಿ ಕೆಲಸ ಮಾಡಿದೆ. ನನಗೆ ಯಾವುದೇ ಆಸೆ, ಆಕಾಂಕ್ಷೆ ಇಲ್ಲ. ಪಕ್ಷವನ್ನು ಗಟ್ಟಿಯಾಗಿ ಉಳಿಸುವುದೇ ನನ್ನ ಹಾಗೂ ನಮ್ಮ ಪಕ್ಷದ ಕಾರ್ಯಕರ್ತರ ಗುರಿ ಎಂದು ತಿಳಿಸಿದರು.

ಮೈಸೂರಲ್ಲಿ ಸಾಮೂಹಿಕ ನಾಯಕತ್ವವಿದೆ: ಜಿ.ಟಿ.ದೇವೇಗೌಡರಿಗೆ ಪಕ್ಷ ಎಲ್ಲಾ ಅಧಿಕಾರ ನೀಡಿತ್ತು. ಆದರೆ ಅವರು ಪಕ್ಷಕ್ಕೆ ಮೋಸ ಮಾಡಿದರು. ಈ ಹಿನ್ನೆಲೆಯಲ್ಲೆ ಮೈಸೂರು ಭಾಗದಲ್ಲಿ ಸಾಮೂಹಿಕ ನಾಯಕತ್ವ ಕಟ್ಟಿಕೊಂಡಿದ್ದೇವೆ ಎಂದರು.

ಅವರ ರಾಜಕೀಯ ತಂತ್ರಗಾರಿಕೆ ಅರಿವಿದೆ

ನಾಳೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಮಾವೇಶವಿದೆ. ಈ ಕಾರಣದಿಂದ ದೊಡ್ಡ ದೇವೇಗೌಡರನ್ನು ಭೇಟಿ ಮಾಡಿ ಹುಟ್ಟು ಹಬ್ಬಕ್ಕಿಂತ ಮುಂಚಿತವಾಗಿಯೇ ಶುಭಾಶಯ ತಿಳಿಸಿದ್ದಾರೆ. ಅವರ ಈ ಎಲ್ಲಾ ರಾಜಕೀಯ ತಂತ್ರಗಾರಿಕೆ ನಮಗೆ ಅರ್ಥವಾಗುತ್ತದೆ ಎಂದು ಸಾ.ರಾ.ಮಹೇಶ್ ತಿಳಿಸಿದರು.

ಮೇ 18 ರಂದು ನಡೆಯುವ ಹುಟ್ಟುಹಬ್ಬಕ್ಕೆ ಹೆಚ್.ಡಿ.ದೇವೇಗೌಡರಿಗೆ ಈಗಲೇ ಶುಭಾಶಯ ಕೋರಲು ಹೋಗಿದ್ದಾರೆ. ಸಮಾವೇಶ ನಡೆಯುವ ಹಿಂದಿನ ದಿನದಂದೇ ಭೇಟಿ ಮಾಡುವ ಉದ್ದೇಶ ಜನರಿಗೆ ಗೊತ್ತಾಗುತ್ತದೆ ಎಂದು ಹೇಳಿದರು.

ಪಕ್ಷದ ನಾಯಕರೊಂದಿಗೆ, ಕ್ಷೇತ್ರದ ಜನರೊಂದಿಗೆ ಸಂಪರ್ಕವಿಲ್ಲ. ಇನ್ನು ಮುಖಂಡರೊಂದಿಗೆ ಚರ್ಚೆ ಅಂತೂ ಇಲ್ಲವೇ ಇಲ್ಲ. ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಲು ಹೋಗುವಾಗ ಕ್ಷೇತ್ರದ ಮುಖಂಡರು ನೆನಪಿಗೆ ಬರಲಿಲ್ಲವೆ, ಹೋಗಲಿ ಕ್ಷೇತ್ರದ ಜನರನ್ನಾದರೂ ಕರೆದುಕೊಂಡು ಹೋಗಬಹುದಿತ್ತಲ್ಲವೇ ಎಂದು ಪ್ರಶ್ನಿಸಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಾಮೂಹಿಕ ನಾಯಕತ್ವದಲ್ಲಿ ಸಮಾವೇಶ ನಡೆಯುತ್ತಿದೆ. ಪಕ್ಷ ಬಿಟ್ಟು ಹೋಗಿರುವವರನ್ನು ನಾವು ಸೇರ್ಪಡೆ ಮಾಡಿಕೊಂಡಿದ್ದೇವೆ. ಈಗ ಸಾಮಾನ್ಯ ಕಾರ್ಯಕರ್ತನಾಗಿ ಬಂದು ಕುಳಿತರೆ ನಮ್ಮ ಅಭ್ಯಂತರವಿಲ್ಲ ಎಂದರು.

ಭಾನುವಾರ ನಡೆಯುವ ಸಮಾವೇಶದಲ್ಲಿ ಜೆಡಿಎಸ್ ಸುಭದ್ರವಾಗಿದೆ ಎಂಬ ಸಂದೇಶವನ್ನು ರವಾನೆ ಮಾಡಲಾಗುವುದು. ಜಿಲ್ಲೆಯಲ್ಲಿ ಪಕ್ಷ ಗಟ್ಟಿಯಾಗಿದೆ ಎಂಬ ಸಂದೇಶವನ್ನು ಕೂಡ ಚಾಮುಂಡೇಶ್ವರಿ ಕ್ಷೇತ್ರದ ಮೂಲಕವೇ ನೀಡಲಾಗುವುದು ಎಂದು ಸಾ.ರಾ.ಮಹೇಶ್ ಹೇಳಿದರು.

ಜನರೊಂದಿಗೆ ಜನತಾದಳ ಸಮಾವೇಶ

ಹೆಚ್.ಡಿ.ಕುಮಾರಸ್ವಾಮಿ ಹಾಗೂ ನಿಖಿಲ್ ಕುಮಾರಸ್ವಾಮಿ ಅವರನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಿದ್ದು, ಈ ಸಮಾವೇಶದಲ್ಲಿ ಸಾವಿರಾರು ಮಂದಿ ಪಾಲ್ಗೊಳ್ಳಲಿದ್ದಾರೆ. ಮೈಸೂರು ಜಿಲ್ಲೆಯ ಕೆ.ಆರ್.ನಗರ, ಹೆಚ್.ಡಿ.ಕೋಟೆ, ತಿ.ನರಸೀಪುರ ಸೇರಿದಂತೆ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಜನರೊಂದಿಗೆ ಜನತಾದಳ ಸಮಾವೇಶ ನಡೆದಿದ್ದು, ನಾಳೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಡೆಯುತ್ತಿದೆ ಎಂದರು.

ಯಶಸ್ವಿ ವಿಶ್ವಾಸ: ಸಮಾವೇಶದ ಸಿದ್ಧತೆ ಪರಿಶೀಲನೆ ನಡೆಸಿ ಮಾತನಾಡಿದ ಸಾ.ರಾ.ಮಹೇಶ್, ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಜನರೊಂದಿಗೆ ಜನತಾದಳ ಸಮಾವೇಶ ಯಶಸ್ವಿಯಾಗಿ ನಡೆದಿದ್ದು, ನಾಳೆಯ ಸಮಾವೇಶ ಕೂಡ ಯಶಸ್ವಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಾಮೂಹಿಕ ನಾಯಕತ್ವದಲ್ಲಿ ಸಮಾವೇಶ ಆಯೋಜಿಸಲಾಗಿದೆ. ಈ ಕ್ಷೇತ್ರದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರು ಎರಡು ಬಾರಿ ಚುನಾವಣಾ ಉಸ್ತುವಾರಿ ವಹಿಸಿದ್ದರು. ಶಾಸಕ ಸಿ.ಎನ್.ಮಂಜೇಗೌಡರು ಈ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ಈ ಎಲ್ಲರ ಸಹಕಾರದಿಂದ ನಾಳೆಯ ಸಮಾವೇಶ ಏರ್ಪಡಿಸಲಾಗಿದೆ ಎಂದರು.

ಧರೆಗುರುಳಿದ ಮರಗಳು, ವಿದ್ಯುತ್ ಕಂಬಗಳು!!

ಆರ್‌ಐ ಪಾಂಡುರಂಗ, ವಿಎಓ ಹೆಚ್.ಎಸ್. ಸುನೀಲ್‌ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು. ಅಲ್ಲದೆ, ಸ್ಥಳಕ್ಕೆ ಪಶುವೈದ್ಯಾಧಿಕಾರಿ ಡಾ.ಸೋಮಯ್ಯ ಭೇಟಿ ನೀಡಿ, ಹಸುಗಳ ಕಳೇಬರದ ವೈದ್ಯಕೀಯ ಪರೀಕ್ಷೆ ನಡೆಸಿದರು.

ಪರಿಹಾರ: ಭಾನುವಾರ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಿನೋದ ಅವರ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಗುತ್ತದೆ. ಮರಣೋತ್ತರ ಪರೀಕ್ಷಾ ವರದಿ ಬಂದ ಬಳಿಕ ವಿನೋದ ಅವರ ವಾರಸುದಾರರಿಗೆ 5 ಲಕ್ಷ ರೂ. ಪರಿಹಾರ ಹಾಗೂ ಹಸುಗಳಿಗೆ ತಲಾ 37,500 ರೂ. ಪರಿಹಾರ ನೀಡುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಗಾಳಿ–ಮಳೆ ಆರ್ಭಟಕ್ಕೆ ಪಿರಿಯಾಪಟ್ಟಣ ತಾಲೂಕಿನ ನರಳಾಪುರದ ಮನೆಯೊಂದರ ಮೇಲ್ಛಾವಣಿ ಶೀಟ್ ಹಾಗೂ ಬೇಲೂರಿನ ಮನೆಯೊಂದರ ಹೆಂಚುಗಳು ಹಾರಿ ಹೋಗಿವೆ. ಅನೇಕ ಮನೆಗಳಿಗೆ ಸಣ್ಣ–ಪುಟ್ಟ ಹಾನಿಯಾಗಿದೆ ಎಂದು ತಿಳಿದುಬಂದಿದೆ.

ಮರ, ವಿದ್ಯುತ್ ಕಂಬಗಳು ಧರಶಾಹಿ: ಮೈಸೂರಲ್ಲಿ ಶುಕ್ರವಾರ ರಾತ್ರಿ ಹಾಗೂ ಇಂದು ಮುಂಜಾನೆ ಬಿರುಗಾಳಿ, ಗುಡುಗು–ಸಿಡಿಲಿನ ಆರ್ಭಟದೊಂದಿಗೆ ಸುರಿದ ಪೂರ್ವ ಮುಂಗಾರು ಮಳೆಗೆ ನೂರಾರು ಮರಗಳು ಹಾಗೂ 90ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿದ್ದು, ಕೆಲವೆಡೆ ಮನೆಗಳಿಗೆ ಸಣ್ಣ ಪ್ರಮಾಣದ ಹಾನಿಯುಂಟಾಗಿದೆ. ಯಾವುದೇ ಜೀವ ಹಾನಿಯಾಗದೇ ಇದ್ದರೂ, ದೊಡ್ಡ ಮಟ್ಟದ ಅವಾಂತರ ಸೃಷ್ಟಿಸಿದೆ. ಬಿರುಗಾಳಿಗೆ ಮೈಸೂರು ತಾಲೂಕು ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ನೂರಾರು ಮರ, ವಿದ್ಯುತ್ ಕಂಬಗಳು ಬುಡಮೇಲಾಗಿವೆ. ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಗ್ರಾಮಸ್ಥರು ಪರದಾಡುವಂತಾಗಿದೆ.

> “ಕಳೆದ ರಾತ್ರಿ ಸುರಿದ ಮಳೆಗೆ ಯಾವುದೇ ದೊಡ್ಡ ಪ್ರಮಾಣದ ಹಾನಿಯಾಗಿರುವ ದೂರು ಕೇಳಿ ಬಂದಿಲ್ಲ. ಆದರೂ ಎಲ್ಲಾ ಆರ್‌ಐ ಹಾಗೂ ವಿಎಓಗಳಿಗೆ ಮಳೆಯಿಂದ ಹಾನಿಯಾಗಿದ್ದರೆ ಪರಿಶೀಲಿಸಿ, ವರದಿ ನೀಡುವಂತೆ ಸೂಚಿಸಲಾಗಿದೆ.
> –ಮಹೇಶ್‌ಕುಮಾರ್, ತಹಶೀಲ್ದಾರ್, ಮೈಸೂರು.

ಬೆಚ್ಚಿ ಬೀಳಿಸಿದ ಗುಡುಗು–ಸಿಡಿಲು: ಮೈಸೂರು ತಾಲೂಕಿನ ವರುಣ ಹೋಬಳಿ, ತಿ.ನರಸೀಪುರ ತಾಲೂಕಿನ ಕೆಲವೆಡೆ ಮಧ್ಯರಾತ್ರಿ 12 ಗಂಟೆಯಿಂದ ಆರಂಭವಾದ ಮಳೆ ಜನರಲ್ಲಿ ಭಯ ಮೂಡಿಸಿದೆ. ಸತತ ಗುಡುಗು, ಸಿಡಿಲು, ಮಿಂಚು ಹಾಗೂ ಬಿರುಗಾಳಿಯೊಂದಿಗೆ ಸುರಿದ ಮಳೆ ದೊಡ್ಡ ಮಟ್ಟದ ಅವಾಂತರವನ್ನೇ ಸೃಷ್ಟಿಸಿದೆ. ಗುಡುಗು–ಸಿಡಿಲಿನಿಂದ ಯಾವುದೇ ಹಾನಿಯಾಗದೇ ಇದ್ದರೂ, ಬಿರುಗಾಳಿ ನೂರಾರು ಮರಗಳನ್ನು ಧರೆಗುರುಳಿಸಿದೆ. ಇದರಿಂದ ಗ್ರಾಮೀಣ ಭಾಗದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆಯುಂಟಾಗಿತ್ತು. ಬೆಳಗ್ಗೆ 9 ಗಂಟೆ ನಂತರ ರಸ್ತೆಗೆ ಅಡ್ಡಲಾಗಿ ಉರುಳಿದ್ದ ಮರಗಳ ತೆರವು ಕಾರ್ಯಾಚರಣೆ ನಡೆಸಲಾಯಿತು.

ನೆಲಕ್ಕುರುಳಿದ 90ಕ್ಕೂ ಹೆಚ್ಚು ವಿದ್ಯುತ್ ಕಂಬ: ಬಿರುಗಾಳಿಗೆ ಚೆಸ್ಕಾಂ ವರುಣ ಉಪ ವಿಭಾಗದಲ್ಲಿ ಅಪಾರ ಪ್ರಮಾಣದ ಹಾನಿಯಾಗಿದೆ. ವಾಜಮಂಗಲ, ಭುಗತಗಳ್ಳಿ, ವರುಣ, ಸುತ್ತೂರು ರಸ್ತೆ, ನಾಡನಹಳ್ಳಿ ಸೇರಿದಂತೆ ವಿವಿಧ ಗ್ರಾಮ ವ್ಯಾಪ್ತಿಯಲ್ಲಿ 82 ವಿದ್ಯುತ್ ಕಂಬಗಳು ಧರೆಗುರುಳಿದೆ. ಅಲ್ಲದೆ, ವಿವಿಧೆಡೆ 10ಕ್ಕೂ ಹೆಚ್ಚು ಕಂಬಗಳಿಗೆ ಹಾನಿಯಾಗಿದೆ. ಸಿಡಿಲು ಬಡಿದ ಪರಿಣಾಮ ಒಂದು ಟ್ರಾನ್ಸ್‌ಫಾರ್ಮರ್ ಸ್ಫೋಟಿಸಿದೆ. ಕಂಬಗಳು ಮುರಿದು ಬಿದ್ದ ಪರಿಣಾಮ ಹಲವು ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಚೆಸ್ಕಾಂ ಸಿಬ್ಬಂದಿ ಮುರಿದು ಬಿದ್ದ ಕಂಬಗಳನ್ನು ಬದಲಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ವರುಣ ಹೋಬಳಿಯ ಬಹುತೇಕ ಗ್ರಾಮಗಳಿಗೆ ವಿದ್ಯುತ್ ವ್ಯತ್ಯಯ ಉಂಟಾಗಿದ್ದು, ವಿದ್ಯುತ್ ಸಂಪರ್ಕ ಕಲ್ಪಿಸಲು ಲೈನ್‌ಮನ್‌ಗಳು ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ಮಕಾಡೆ ಮಲಗಿದ ಜಾಹಿರಾತು ಫಲಕಗಳು: ಮೈಸೂರು–ಬನ್ನೂರು, ಮೈಸೂರು–ತಿ.ನರಸೀಪುರ ರಸ್ತೆ, ರಿಂಗ್ ರಸ್ತೆ ಸೇರಿದಂತೆ ವಿವಿಧೆಡೆ ರಸ್ತೆ ಪಕ್ಕ ಅಳವಡಿಸಿದ್ದ ಜಾಹಿರಾತು ಫಲಕಗಳು ಉರುಳಿ ಬಿದ್ದಿವೆ. ಬೃಹತ್ ಗಾತ್ರದ ಕಬ್ಬಿಣದ ಬೀಮ್ ಬಳಸಿ ನಿರ್ಮಿಸಿದ್ದ ಜಾಹಿರಾತು ಫಲಕ ತಲೆ ಕೆಳಗಾಗಿ ಬಿದ್ದಿದ್ದು, ಅವುಗಳ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ.

ಮೇಲ್ಛಾವಣಿ ಕಳೆದುಕೊಂಡ ಪೆಟ್ಟಿಗೆ ಅಂಗಡಿಗಳು: ಬಿರುಗಾಳಿಗೆ ರಸ್ತೆಬದಿ ಇದ್ದ ಪೆಟ್ಟಿಗೆ ಅಂಗಡಿ, ಹೋಟೆಲ್ ಸೇರಿದಂತೆ ಕೆಲ ಮಳಿಗೆಗಳ ಮುಂದೆ ಅಳವಡಿಸಿದ್ದ ಮೇಲ್ಛಾವಣಿ ಹಾರಿ ಹೋಗಿದೆ. ಕಬ್ಬಿಣ ಶೀಟ್‌ನಿಂದ ತಯಾರಿಸಿದ್ದ ಮೇಲ್ಛಾವಣಿ, ತೆಂಗಿನ ಗರಿಯಿಂದ ನಿರ್ಮಿಸಿದ್ದ ಮೇಲ್ಛಾವಣಿಯೂ ಬಿರುಗಾಳಿಗೆ ಆಹುತಿಯಾಗಿವೆ.

ಮೈಸೂರು ನಗರದಲ್ಲೂ ಅವಾಂತರ: ಮತ್ತೊಂದೆಡೆ ಮೈಸೂರಿನ ಕೆಲ ಬಡಾವಣೆ ಹಾಗೂ ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ಬಡಾವಣೆಗಳಲ್ಲೂ ಬಿರುಗಾಳಿ ಅವಾಂತರ ಸೃಷ್ಟಿಸಿದೆ. ಬನ್ನೂರು ರಸ್ತೆಯ ದೇವೇಗೌಡ ಜಂಕ್ಷನ್‌ನಿಂದ ನಂಜನಗೂಡು ಜಂಕ್ಷನ್ ವರೆಗೆ ರಿಂಗ್ ರಸ್ತೆಯ ವಿಭಜಕದಲ್ಲಿ ಬೆಳೆಸಿರುವ 30ಕ್ಕೂ ಹೆಚ್ಚು ಬೇವಿನ ಮರಗಳು ರಿಂಗ್ ರಸ್ತೆಗೆ ಬಿದ್ದಿವೆ. ಅಲ್ಲದೆ, ಪೊಲೀಸ್ ಲೇಔಟ್, ಸರ್ದಾರ್ ವಲ್ಲಭಭಾಯಿ ಬಡಾವಣೆ ಸೇರಿದಂತೆ ಅಕ್ಕಪಕ್ಕದ ಬಡಾವಣೆಗಳಲ್ಲೂ ಹಲವು ಮರಗಳು ಉರುಳಿಬಿದ್ದಿವೆ. ಹೊಸದಾಗಿ ಕಟ್ಟಿರುವ ಮನೆಗಳ ಮುಂಭಾಗದ ಮೇಲ್ಛಾವಣಿಗೆ ಬಳಸಿದ್ದ ಅಲಂಕಾರಿಕ ಹೆಂಚುಗಳು ಗಾಳಿಗೆ ತೂರಿ ಹೋಗಿವೆ. ಅಲ್ಲದೆ, ಮನೆ ಮುಂದೆ ಇಟ್ಟಿದ್ದ ಹೂವು ಹಾಗೂ ಅಲಂಕಾರಿಕ ಗಿಡಗಳ ಹೂವಿನ ಕುಂಡಗಳು ಗಾಳಿಗೆ ಹಾರಿ ಹೋಗಿ ಎಲ್ಲೆಂದರಲ್ಲಿ ಅಸ್ತವ್ಯಸ್ತವಾಗಿ ಬಿದ್ದಿವೆ.

ಮೈಸೂರಿನ ವಿವಿಧೆಡೆ: ಮೈಸೂರಿನ ವಿಶ್ವಮಾನವ ಜೋಡಿ ರಸ್ತೆ, ರಾಮಕೃಷ್ಣನಗರ, ಸಿದ್ಧಾರ್ಥ ಬಡಾವಣೆ, ಜೆ.ಪಿ.ನಗರ, ವಿವೇಕಾನಂದ ವೃತ್ತ, ಸೀವೆಜ್ ಫಾರಂ ಸೇರಿದಂತೆ ವಿವಿಧ ಬಡಾವಣೆಗಳಲ್ಲೂ ಮರಗಳು ಉರುಳಿ ಬಿದ್ದಿವೆ. ಅಲ್ಲದೆ, ಕೆಲವೆಡೆ ಮರಗಳ ಕೊಂಬೆಗಳು ಮನೆಗಳ ಮೇಲೆ ಮುರಿದು ಬಿದ್ದಿವೆ. ಮೈಸೂರು ಮಹಾನಗರ ಪಾಲಿಕೆಯ ಕಂಟ್ರೋಲ್ ರೂಮ್‌ಗೆ ಮಳೆ ಅವಾಂತರದಿಂದ ಮರಗಳು ಉರುಳಿಬಿದ್ದ ಬಗ್ಗೆ ದೂರುಗಳು ಬಂದಿವೆ. ಇಂತಹ ಸ್ಥಳಕ್ಕೆ ಅಭಯ–1, ಅಭಯ–2 ಹಾಗೂ ಅಭಯ–3 ತಂಡಗಳು ತೆರಳಿ, ತೆರವು ಕಾರ್ಯಾಚರಣೆ ನಡೆಸಿವೆ.

ಹೆಚ್.ಡಿ.ಕೋಟೆಯಲ್ಲೂ ಭಾರೀ ಹಾನಿ: ವರುಣಾರ್ಭಟಕ್ಕೆ ಹೆಚ್.ಡಿ.ಕೋಟೆ ತಾಲೂಕಿನಲ್ಲೂ ಭಾರೀ ಹಾನಿಯಾಗಿದೆ. ಬಿರುಗಾಳಿ ರಭಸಕ್ಕೆ ಹಲವು ಮನೆಗಳ ಮೇಲ್ಛಾವಣಿ ಹಾರಿಹೋಗಿವೆ. ಅನೇಕ ಮರಗಳು ಹಾಗೂ ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಅಪಾರ ಪ್ರಮಾಣದ ಬಾಳೆ ಬೆಳೆ ನಾಶವಾಗಿದೆ.

ದಾಖಲೆ ಸಲ್ಲಿಸಿ!!

ವಂಚಿಸಿರುವ ಸಂಬಂಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಮೊ.ಸಂ. 37/2026 ಕಲಂ 316(2), 318(4), 351(3), 3(5) ಬಿಎನ್‌ಎಸ್ ಅಡಿ ಪ್ರಕರಣ ದಾಖಲಿಸಲಾಗಿದೆ. ನಂತರ ಸದರಿ ಪ್ರಕರಣಕ್ಕೆ ಕೆಪಿಐಡಿ ಕಾಯ್ದೆಯ ಕಲಂ 9 ಅನ್ನು ಅಳವಡಿಸಿಕೊಂಡು ತನಿಖೆಯನ್ನು ಮುಂದುವರೆಸಲಾಗಿದೆ.

ಆದ್ದರಿಂದ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿನ್ನ ಅಡವಿಟ್ಟು ವಂಚನೆಗೆ ಒಳಗಾಗಿರುವ ಸಾರ್ವಜನಿಕರು ಮುಂದಿನ ಕಾನೂನು ಕ್ರಮಕ್ಕಾಗಿ ತಮ್ಮ ಬಳಿ ಲಭ್ಯವಿರುವ ಅಗತ್ಯ ದಾಖಲಾತಿಗಳೊಂದಿಗೆ ಸಹಾಯಕ ಪೊಲೀಸ್ ಆಯುಕ್ತರು, ಸಿಸಿಬಿ ಘಟಕ ಮೈಸೂರು ನಗರ, ಅವರನ್ನು ಸಿಸಿಬಿ ಕಚೇರಿಯಲ್ಲಿ ಭೇಟಿ ಮಾಡಬಹುದು ಎಂದು ನಗರ ಪೊಲೀಸ್ ಆಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಗೆ ದಾವಣಗೆರೆಯ ಹೆಚ್.ಮಹಾಂತೇಶ್ ಎಂಬುವವರು ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು ಏ.29ರಂದು ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು.

ವಿದ್ಯಾರ್ಥಿಗಳು ಆತ್ಮಹತ್ಯೆ

ಕೋಚಿಂಗ್ ಕ್ಲಾಸ್‌ಗೆ ಹೋಗಿದ್ದರು. ಹಿರಿಯ ತಂಗಿ ಸ್ನಾನ ಮುಗಿಸಿ ಹೊರಬಂದಾಗ ಪ್ರದೀಪ್ ಫ್ಯಾನ್‌ಗೆ ನೇಣು ಹಾಕಿಕೊಂಡಿರುವುದು ಬೆಳಕಿಗೆ ಬಂದಿದೆ.

ಮೂರನೇ ಬಾರಿಗೆ ಪರೀಕ್ಷೆ ಬರೆದಿದ್ದ ಯುಪಿಯ ರಿತಿಕ್ ಮಿಶ್ರಾ: ಉತ್ತರ ಪ್ರದೇಶದ ಲಖಿಂಪುರ್ ಖೇರಿಯ 21 ವರ್ಷದ ರಿತಿಕ್ ಮಿಶ್ರಾ ಎಂಬ ವಿದ್ಯಾರ್ಥಿ ಗುರುವಾರ (ಮೇ 14) ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮೂರನೇ ಬಾರಿಗೆ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿ ಈ ಬಾರಿ ಉತ್ತಮ ಅಂಕಗಳನ್ನು ಪಡೆಯುವ ನಿರೀಕ್ಷೆ ಯಲ್ಲಿದ್ದ. ಪ್ರಶ್ನೆಪತ್ರಿಕೆ ಸೋರಿಕೆಯಿಂದಾಗಿ ಪರೀಕ್ಷೆ ರದ್ದಾದ ಪರಿಣಾಮ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ದೆಹಲಿಯ ಆಜಾದ್‌ಪುರದ ಯುವತಿ: ಆಜಾದ್‌ಪುರದಲ್ಲಿ 20 ವರ್ಷದ ಯುವತಿ ತನ್ನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಯುವತಿಯ ಕುಟುಂಬಸ್ಥರು ಪೊಲೀಸರಿಗೆ ಮಾಹಿತಿ ನೀಡದೇ ಶವಸಂಸ್ಕಾರ ನೆರವೇರಿಸಿದ್ದಾರೆ. ಈ ಸಂಬಂಧ ಸದ್ಯ ತನಿಖೆ ನಡೆಯುತ್ತಿದೆ.

ಒತ್ತಡದಿಂದಾಗಿ ಗೋವಾದ ಬಾಲಕ ಆತ್ಮಹತ್ಯೆ: ದಕ್ಷಿಣ ಗೋವಾದ ಮಾರ್ಗೋವ್‌ನಲ್ಲಿ 17 ವರ್ಷದ ಬಾಲಕ ಬುಧವಾರ (ಮೇ 13) ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಡೆತ್‌ನೋಟ್‌ನಲ್ಲಿ ಶೈಕ್ಷಣಿಕ ಒತ್ತಡವೇ ಕಾರಣ ಎಂದು ಬರೆದಿಟ್ಟಿದ್ದಾನೆ.

ಜಿಟಿ ವಿರುದ್ಧ ಗೆದ್ದ ಕೊಲ್ಕತ್ತಾದ ಪ್ಲೇ–ಆಫ್ ಕನಸು ಜೀವಂತ!

ಕೊಲ್ಕತ್ತಾ, ಮೇ 16(ವಿವಿಹೆಚ್)– ಫಿಲ್ ಆಲೆನ್, ಅಂಗ್‌ಕ್ರಿಶ್ ರಘುವಂಶಿ ಹಾಗೂ ಕ್ಯಾಮರೋನ್ ಗ್ರೀನ್ ಅವರ ಅರ್ಧಶತಕದ ನೆರವಿನಿಂದ ಬಲಿಷ್ಠ ಗುಜರಾತ್ ಜೈಂಟ್ಸ್ ತಂಡವನ್ನು 29 ರನ್‌ಗಳಿಂದ ಮಣಿಸಿದ ಕೊಲ್ಕತ್ತಾ ನೈಟ್‌ರೈಡರ್ಸ್ ತನ್ನ ಪ್ಲೇ–ಆಫ್ ಕನಸನ್ನು ಇನ್ನೂ ಜೀವಂತವಾಗಿರಿಸಿಕೊಂಡಿದೆ. ಮುಂಬರುವ ಪಂದ್ಯಗಳ ಲೆಕ್ಕಾಚಾರದ ಮೇಲೆ ಕೆಕೆಆರ್ ಭವಿಷ್ಯ ನಿಂತಿದೆ.



ಫಿನ್ ಆಲೆನ್–ರಘುವಂಶಿ

ಇಲ್ಲಿನ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ನಿಗದಿತ 20 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡು 247 ರನ್ ಕಲೆಹಾಕಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಜಿಟಿ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 218 ರನ್ ಗಳಿಸಲಷ್ಟೆ ಶಕ್ತವಾಯಿತು.

ತವರಿನಂಗಳದಲ್ಲಿ ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಕೆಕೆಆರ್ ತ್ರಿಮೂರ್ತಿಗಳ ಅರ್ಧ ಶತಕದ ನೆರವಿನಿಂದ ಬೃಹತ್ ಮೊತ್ತ ದಾಖಲಿಸಿತು. ಆರಂಭಿಕರಾಗಿ ಬ್ಯಾಟ್ ಬೀಸಿದ ನಾಯಕ ಅಜಿಂಕ್ಯಾ ರಹಾನೆ 14(14) ರನ್‌ಗಳಿಗೆ ವಿಕೆಟ್ ಒಪ್ಪಿಸಿ ಹೊರನಡೆದರು. ವಿಕೆಟ್ ಬಿದ್ದರು ರನ್ ವೇಗ ತಗ್ಗಿಸದ ಫಿನ್ ಆಲೆನ್ 35 ಎಸೆತಗಳಲ್ಲಿ 4 ಬೌಂಡರಿ ಹಾಗೂ ಭರ್ಜರಿ 10 ಸಿಕ್ಸರ್ ಮೂಲಕ 93 ರನ್‌ಗಳಿಸಿ ಔಟಾದರು.

ಈ ವೇಳೆ ಒಂದಾದ ಅಂಗ್‌ಕ್ರಿಶ್ ರಘುವಂಶಿ ಹಾಗೂ ಕ್ಯಾಮರೋನ್ ಗ್ರೀನ್ ಶತಕ ಜೊತೆಯಾಟವಾಡುವ ಮೂಲಕ ತಂಡ ಮೊತ್ತ ಇನ್ನೂರರ ಗಡಿದಾಟಲು ಸಹಕರಿಸಿದರು. ರಘುವಂಶಿ 44 ಎಸೆತಗಳಲ್ಲಿ 4 ಬೌಂಡರಿ, 7 ಸಿಕ್ಸರ್ ಸಹಿತ ಅಜೇಯ 82 ರನ್ ಗಳಿಸಿದರೆ, ಗ್ರೀನ್ 28 ಎಸೆತಗಳಲ್ಲಿ 3 ಬೌಂಡರಿ, 4 ಸಿಕ್ಸರ್ ಸಹಿತ ಅಜೇಯ 52 ರನ್ ಗಳಿಸಿದರು. ಜಿಟಿ ಪರ ಮೊಹಮ್ಮದ್ ಸಿರಾಜ್ ಸಾಯ್ ಕಿಶೋರ್ ತಲಾ ಒಂದೊಂದು ವಿಕೆಟ್ ಪಡೆದರು.

ಜಿಟಿ ಪರ ನಾಯಕ ಶುಬ್‌ಮನ್ ಗಿಲ್ 85(49ಎ, 5ಬೌ, 7ಸಿ), ನಿಶಾಂತ್ ಸಂಧು 1(4), ಜಾಸ್ ಬಟ್ಲರ್ 57(35), ಸಾಯ್ ಸುದರ್ಶನ್ ಅಜೇಯ 53(28) ಹಾಗೂ ರಾಹುಲ್ ತೆವಾಟಿಯಾ ಅಜೇಯ 2(4) ರನ್ ಬಾರಿಸಿದರು. ಕೆಕೆಆರ್ ಪರ ಸುನೀಲ್ ನರೈನ್ 2 ವಿಕೆಟ್, ಸೌರಬ್ ದುಬೆ ಹಾಗೂ ಕ್ಯಾಮರೋನ್ ಗ್ರೀನ್ ತಲಾ ಒಂದೊಂದು ವಿಕೆಟ್ ಪಡೆದರು.

ಇಂದಿನಿಂದ ಬಿಡದಿ ರೈತರ ಪರ ನನ್ನ ಹೋರಾಟ ಆರಂಭ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಘೋಷಣೆ

- ಟೌನ್ ಶಿಪ್ ಹೆಸರಿನಲ್ಲಿ ಭೂ ದಂಧೆ ನಡೆಯುತ್ತಿದೆ
- ನವ ನಗರ ನಿರ್ಮಾಣದ ವಿರುದ್ಧ ಗುಡುಗಿದ ಮಣ್ಣಿನ ಮಗ
- ಅವರು ಹೋಗಿ ರೈತರಿಂದ ಹೊಡೆಸಿಕೊಂಡು ಬರಲಿ, ಆಮೇಲೆ ನಾನು ಹೋಗಿ ಮಾತನಾಡುತ್ತೇನೆ ಎಂದು ಕಿಡಿ
- 20,000 ಎಕರೆ ಭೂಮಿ ಯಾರ ಹೆಸರಿನಲ್ಲಿ ಇದೆ ಎಂದು ಮುಖ್ಯಮಂತ್ರಿ ಪ್ರಶ್ನಿಸಿದ ಮಾಜಿ ಪ್ರಧಾನಿ


ಜೆಪಿ ಭವನದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಾತನಾಡುತ್ತಿರುವುದು

ಬೆಂಗಳೂರು, ಮೇ 16– ಬಿಡದಿ ಟೌನ್ ಶಿಪ್ ಹೆಸರಿನಲ್ಲಿ ರೈತರ ಜಮೀನು ಕಿತ್ತುಕೊಂಡು ದಂಧೆ ನಡೆಸಲು ಹೊರಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಈ ದಂಧೆಯ ವಿರುದ್ಧ ಹೋರಾಟಕ್ಕೆ ಧುಮುಕುವುದಾಗಿ ಘೋಷಿಸಿದರು.

ಜೆಡಿಎಸ್ ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಮಹತ್ವದ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ರೈತರ ಭೂಮಿಯನ್ನು ಕಿತ್ತುಕೊಂಡು ದಂಧೆ ಮಾಡಲು ಈ ಸರ್ಕಾರ ಹೊರಟಿದೆ ಒಬ್ಬರು 'ರೈತರು ಹೊಡೆದರೆ ಹೊಡೆಸಿಕೊಳ್ಳುವೆ' ಎಂದು ಹೇಳಿದ್ದಾರೆ. ಮೊದಲು ಅವರು ಹೋಗಿ ರೈತರಿಂದ ಹೊಡೆಸಿಕೊಂಡು ಬರಲಿ, ಆಮೇಲೆ ನಾನು ಹೋಗಿ ಮಾತನಾಡುತ್ತೇನೆ ಎಂದು ಗುಡುಗಿದರು.

ದೇವೇಗೌಡರು ಈ ಹಿಂದೆ ಸಭೆಯಲ್ಲಿ ಅಳುತ್ತಿದ್ದರು ಎಂದು ಕೆಲವರು ವ್ಯಂಗ್ಯ ಮಾಡುತ್ತಿದ್ದರು. ಆದರೆ ಈ ವ್ಯವಸ್ಥೆಯನ್ನು ನೋಡಿ ಈಗ ನಾನು ನಗುತ್ತಿದ್ದೇನೆ. ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ನನ್ನ ಸ್ನೇಹಿತರು ಮತ್ತು ಹಳೆಯ ಸಹೋದ್ಯೋಗಿ. ಜೊತೆಯಲ್ಲಿ ಕೆಲಸ ಮಾಡಿದ್ದೇವೆ. ಆದರೆ ಇಲ್ಲಿ ನಡೆಯುತ್ತಿರುವುದು ಯಾರಿಗೂ ಕಾಣದಿರುವುದು ನನಗೆ ಅತೀವ ನೋವು ತಂದಿದೆ ಎಂದು ಮಾಜಿ ಪ್ರಧಾನಿಗಳು ಬೇಸರ ವ್ಯಕ್ತಪಡಿಸಿದರು.

ಕುಮಾರಸ್ವಾಮಿ ಅವರು ಕೇಂದ್ರ ಮಂತ್ರಿ ಆಗಿದ್ದಾರೆ. ಕುಮಾರಸ್ವಾಮಿಗೆ ಮಾಡುವುದಕ್ಕೆ ಬೇರೆ ಕೆಲಸ ಇಲ್ಲ ಎಂದು ಒಬ್ಬ ವ್ಯಕ್ತಿ ಹೇಳಿರುವ ಮದಿಯನ್ನು ಗಮನಿಸಿದೆ. ಅವರು ಮಾಡಿದ ಬಿಡದಿ ಟೌನ್‌ಶಿಪ್ ಅನ್ನು ನಾನು ಮಾಡುತ್ತಿದ್ದೇನೆ ಎಂದು ಆ ವ್ಯಕ್ತಿ ಹೇಳಿದ್ದಾರೆ. ಆಗ ಕುಮಾರಸ್ವಾಮಿ ಮಾಡಲು ಹೊರಟಿದ್ದು ಏನು ಈ ವ್ಯಕ್ತಿ ಈಗ ಮಾಡುತ್ತಿರುವ ದಂಧೆ ಏನು ಎಂಬುದು ಜನರಿಗೆ ಅರ್ಥವಾಗಿದೆ. ಅದರ ವಿರುದ್ಧ ನಾನು ಹೋರಾಟ ಮಾಡುತ್ತೇನೆ ಎಂದು ಪರೋಕ್ಷವಾಗಿ ಡಿ.ಕೆ.ಶಿವಕುಮಾರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು ನಗರದ ಮೇಲೆ ಹೆಚ್ಚು ಒತ್ತಡ ಆಗುತ್ತದೆ ಎಂದು ಕುಮಾರಸ್ವಾಮಿ ಐದು ಟೌನ್ ಶಿಪ್ ಗಳನ್ನು ಮಾಡಲು ಹೊರಟಿದ್ದರು. ಆಗ ಕಾಂಗ್ರೆಸ್ ಪಕ್ಷದ ನಾಯಕರು ದೊಡ್ಡ ಅಪಪ್ರಚಾರ ನಡೆಸಿ ಕುಮಾರಸ್ವಾಮಿಯವರು ಭೂಮಿಯನ್ನು ಹೊಡೆಯಲು ಹೊರಟಿದ್ದಾರೆ ಎಂದು ಸತ್ಯಶೋಧನಾ ಸಮಿತಿ ರಚಿಸಿ ತನಿಖೆಯನ್ನು ಮಾಡಿದರು. ಆ ವರದಿಯಲ್ಲಿ ಯಾವ ಸತ್ಯ ಹೊರಗೆ ಬಂತು ದೇವರೇ ಬಲ್ಲ ಎಂದು ಮಾಜಿ ಪ್ರಧಾನಿಗಳು ವ್ಯಂಗ್ಯವಾಡಿದರು.

ಅಂದು ಜನರು ವಿರೋಧ ಮಾಡಿದ್ದಕ್ಕೆ ಕುಮಾರಸ್ವಾಮಿಯವರು ಐದು ಟೌನ್ ಶಿಪ್ ಯೋಜನೆಗಳನ್ನು ಕೈಬಿಟ್ಟರು. ಈಗಲೂ ಕೂಡ ಬಿಡದಿ ಟೌನ್ ಶಿಪ್ ಯೋಜನೆಗೆ ಜನರ ಆಕ್ರೋಶ, ವಿರೋಧ ಇದೆ. ಹೀಗಾಗಿ ಯೋಜನೆಯನ್ನು ತಕ್ಷಣವೇ ಕೈಬಿಡಬೇಕು ಎನ್ನುವುದು ನನ್ನ ಆಗ್ರಹವಾಗಿದೆ ಎಂದು ದೇವೇಗೌಡರು ಹೇಳಿದರು.

ಈಗ ಬೆಂಗಳೂರು ಜವಾಬ್ದಾರಿ ಹಾಗೂ ನೀರಾವರಿ ಜವಾಬ್ದಾರಿಯನ್ನು ಒಬ್ಬರೇ ವಹಿಸಿಕೊಂಡಿದ್ದಾರೆ. ಅದರ ಜೊತೆಗೆ ರಾಷ್ಟ್ರೀಯ ಪಕ್ಷದ ಜವಾಬ್ದಾರಿಯನ್ನು ಕೂಡ ಅವರೇ ಹೊತ್ತುಕೊಂಡಿದ್ದಾರೆ. ಏನೋ ಮುಖ್ಯಮಂತ್ರಿ ಆಗಬೇಕೆಂದು ಒಡಂಬಡಿಕೆ ಆಗಿದೆಯಂತೆ. ನಿಮ್ಮಗಳ ಮುಂದೆ ಮನೋರಂಜನೆ ಮಾಡುತ್ತಿದ್ದಾರೆ. ಬಿಡದಿಯ ರೈತರು ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ ಎಂದು ಮಾಜಿ ಪ್ರಧಾನಿ ದೇವೇಗೌಡರು ಕಿಡಿಕಾರಿದರು.

20,000 ಎಕರೆ ಭೂಮಿ ಯಾರ ಹೆಸರಿನಲ್ಲಿ ಇದೆ!: ಸಿದ್ದರಾಮಯ್ಯನವರೇ, ನೀವು ನನ್ನ ಜೊತೆ ಕೆಲಸ ಮಾಡಿದ್ದೀರಿ. ನಿಮ್ಮ ಸಾಮಾಜಿಕ ನ್ಯಾಯದ ಮಾತಿನ ಬಗ್ಗೆ ನನಗೂ ಅರಿವಿದೆ. ಬೆಂಗಳೂರು ಸುತ್ತಮುತ್ತ ಸುಮಾರು 20,000 ಎಕರೆ ಭೂಮಿ ಯಾರ ಹೆಸರಿನಲ್ಲಿ ಇದೆ ಎಂಬುದನ್ನು ತನಿಖೆ ಮಾಡಿ ಎಂದು ಈಗಾಗಲೇ ಪತ್ರ ಬರೆದಿದ್ದೇನೆ. ಅವರು, ಬೆಂಗಳೂರು ನಗರದ ಹೊಣೆ ಹೊತ್ತಿರುವವರ ಒತ್ತಡಕ್ಕೆ ಮಣಿದು ಜನರ ಸಮಸ್ಯೆಯನ್ನು ಕೇಳುತ್ತಿಲ್ಲ. ಬಿಡದಿ ರೈತರ ಸಮಸ್ಯೆಯನ್ನು ಯಾರಾದರೂ ಹೋಗಿ ಕೇಳಿದ್ದೀರಾ ಎಂದು ದೇವೇಗೌಡರು ಪ್ರಶ್ನಿಸಿದರು.

ಟೌನ್ ಶಿಪ್ ಹೆಸರಿನಲ್ಲಿ ಫಲವತ್ತಾದ ಭೂಮಿಯನ್ನು ಹೊಡೆಯಲು ಹೊರಟಿದ್ದಾರೆ. ಭೂಮಿಯನ್ನು ಕಿತ್ತುಕೊಂಡು ಯಾರಿಗೆ ಕೊಡಲು ಹೊರಟಿದ್ದಾರೆ ಎಂಬುದನ್ನು ಸರ್ಕಾರ ಹೇಳಬೇಕು. ಭಾಗದಲ್ಲಿ ರೈತರು ದೊಡ್ಡ ಮಟ್ಟದ ಹೈನುಗಾರಿಕೆ, ತೋಟಗಾರಿಕೆ ಮಾಡುತ್ತಿದ್ದಾರೆ. ರೈತರು ನಿತ್ಯವೂ ಡೇರಿಗೆ ಹಾಲನ್ನು ನೀಡುತ್ತಿದ್ದಾರೆ. ಹಿಂದೆ ಕುಮಾರಸ್ವಾಮಿ ಅವರು 250 ಕೋಟಿ ವೆಚ್ಚದಲ್ಲಿ ನೀರಾವರಿ ಯೋಜನೆ ಮಾಡಿ ಈ ಭಾಗಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇಂತಹ ನೀರಾವರಿ ಜಾಗವನ್ನು ಕಿತ್ತುಕೊಳ್ಳಲು ನಿಮ್ಮ ಪಕ್ಷದ ಅಧ್ಯಕ್ಷರು ಹೊರಟಿದ್ದಾರೆ. ನೀವು ಅದರ ಬಗ್ಗೆ ನಿರ್ಧಾರ ಕೈಗೊಳ್ಳುವ ಸಮಯ ಇದಾಗಿದೆ. ಬೆಂಗಳೂರು ಹೊಣೆಗಾರಿಕೆ ಗೊತ್ತಿರುವ ವ್ಯಕ್ತಿಯ ಒತ್ತಡಕ್ಕೆ ಮಣಿದು ಜನಸಾಮಾನ್ಯರಿಗೆ ಅನ್ಯಾಯ ಮಾಡಬೇಡಿ. ಬಿಡದಿ ರೈತರು ಕಣ್ಣೀರು ಹಾಕುತ್ತಿದ್ದಾರೆ ಎಂದು ದೇವೇಗೌಡರು ಮುಖ್ಯಮಂತ್ರಿ ಸಿದ್ದರಾಮಯ್ಯರ ಆಗ್ರಹಪಡಿಸಿದ್ದಾರೆ.

ಹುಟ್ಟುಹಬ್ಬದ ಶುಭಾಶಯ


ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಮೈಸೂರಿನ ಕಾಂಗ್ರೆಸ್ ಮುಖಂಡ ಬಿ.ಶ್ರೀನಾಥ್ ಬಾಬು ಬೆಂಗಳೂರಿನ ಸದಾಶಿವನಗರದ ನಿವಾಸದಲ್ಲಿ ಭೇಟಿಯಾಗಿ, ಅವರಿಗೆ ತಾಯಿ ಚಾಮುಂಡೇಶ್ವರಿ ದೇವಿಯ ಪ್ರಸಾದ ನೀಡಿ, ಶುಭಾಶಯ ಕೋರಿದರು. ಈ ವೇಳೆ ಜಿ.ರಾಘವೇಂದ್ರ, ಅಬ್ಬು ಜಗ್ಗಾರಿಂಯ, ಹರೀಶ್ ನಾಯ್ಡು ಮತ್ತಿತರರಿದ್ದರು.

ಎಂಟು ಮಂದಿ ಪೋಲೀಸ್ ಸಿಬ್ಬಂದಿಗೆ 'ನೈಟ್ಸ್ ಇನ್ ಖಾಕಿ' ಪ್ರಶಸ್ತಿ ಪ್ರದಾನ

ಪೋಲೀಸರಿಗೆ ಪ್ರಶಂಸೆಗಿಂತ ದೂರೇ ಜಾಸ್ತಿ: ಎಸ್ಪಿ ಮಲ್ಲಿಕಾರ್ಜುನ ಬಾಲದಂಡ



ಮೈಸೂರು ರೌಂಡ್ ಟೇಬಲ್–21 ಮತ್ತು ಮೈಸೂರು ಲೇಡಿಸ್ ಸರ್ಕಲ್–9 ವತಿಯಿಂದ ಕೊಡಮಾಡುವ 'ನೈಟ್ಸ್ ಇನ್ ಖಾಕಿ' ಪ್ರಶಸ್ತಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ 8 ಮಂದಿ ಪೊಲೀಸ್ ಸಿಬ್ಬಂದಿಗೆ ನೀಡಿ, ಅಭಿನಂದಿಸಿದರು. ಈ ವೇಳೆ ನಗರ ಉಪ ಪೊಲೀಸ್ ಆಯುಕ್ತ ಸುಂದರರಾಜ್, ರೌಂಡ್ ಟೇಬಲ್ 13ರ ವಲಯ ಅಧ್ಯಕ್ಷ ಶುಶ್ರೂತ್ ಬೆಳಗೂರ್, ಮೈಸೂರು ರೌಂಡ್‌ಟೇಬಲ್ 21ರ ಅಧ್ಯಕ್ಷ ಅಕ್ಷಯ್ ಕೋನೆರಿ, ಲೇಡಿಸ್ ಸರ್ಕಲ್ –9ರ ಅಧ್ಯಕ್ಷೆ ಎಸ್.ಶ್ರೀನಿಜಾ ಮತ್ತಿತರರು ಇದ್ದರು.

ಮೈಸೂರು, ಮೇ 16(ವಿವಿಹೆಚ್)– ಜನರ ಸೇವೆಗಾಗಿ ತಮ್ಮ ಖಾಸಗಿ ಜೀವನವನ್ನೇ ತ್ಯಾಗ ಮಾಡಿ ಬದುಕುವ ಪೋಲೀಸರ ಬಗ್ಗೆ ಪ್ರಶಂಸೆಗಿಂತ ದೂರೇ ಜಾಸ್ತಿ ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಬೇಸರವ್ಯಕ್ತಪಡಿಸಿದರು.

ನಗರದ ವಿಂಡ್ ಚೇಮ್ಸ್ ಸಭಾಂಗಣದಲ್ಲಿ ಮೈಸೂರು ರೌಂಡ್ ಟೇಬಲ್–21 ಮತ್ತು ಮೈಸೂರು ಲೇಡಿಸ್ ಸರ್ಕಲ್–9ರ ಸಂಯುಕ್ತಾಶ್ರಯದಲ್ಲಿ ಶನಿವಾರ ಆಯೋಜಿಸಲಾಗಿದ್ದ 'ನೈಟ್ಸ್ ಇನ್ ಖಾಕಿ' ಪ್ರಶಸ್ತಿಯನ್ನು ಪೊಲೀಸ್ ಸಿಬ್ಬಂದಿಗೆ ಪ್ರದಾನ ಮಾಡಿ ಅವರು ಮಾತನಾಡಿದರು.

ಪೊಲೀಸ್ ಇಲಾಖೆಯಲ್ಲಿ ಕಾಯಕ ಮಾಡುವುದು ಎಂದರೆ ಅದು ಬಹಳ ಕಷ್ಟದ ಕೆಲಸ. ಹೀಗಾಗಿ ಇಂತಹ ಕೆಲಸ ಮಾಡುವವರನ್ನು ಗುರುತಿಸಿ, ಪ್ರೋತ್ಸಾಹಿಸುವ ಅಗತ್ಯ ಬಹಳ ಇದೆ ಎಂದು ಅಭಿಪ್ರಾಯಪಟ್ಟರು.

ಪೋಲೀಸರ ಕರ್ತವ್ಯ, ಸೇವೆಯನ್ನು ಗುರುತಿಸಿ ಮಾತನಾಡುವವರಿಗಿಂತ ಯಾವುದೋ ಒಂದು ತಪ್ಪಿಗೆ ಇಲಾಖೆಯ ಕಡೆಗೆ ಬೆರಳು ಮಾಡಿ ಮಾತನಾಡುವವರೇ ಜಾಸ್ತಿ ಇದ್ದಾರೆ. ಹಬ್ಬ–ಹರಿದಿನಗಳೆನ್ನದೆ, ಎಲ್ಲವನ್ನೂ ಬದಿಗೊತ್ತಿ ಜನರಿಗಾಗಿ ದುಡಿಯುವ ಕೆಲಸ ಮಾಡುತ್ತಿದ್ದಾರೆ. ಯಾವ ಹೊತ್ತಿನಲ್ಲೂ ಕರ್ತವ್ಯದ ಕರೆ ಬಂದಾಗ ಸನ್ನದ್ದರಾಗಿ ಬರುತ್ತಾರೆ. ಆದ್ದರಿಂದ ಈ ಸೇವೆಯನ್ನು ಗುರುತಿಸಿ ಸನ್ಮಾನ ಮಾಡಿದರೆ ಮುಂದೆ ಇನ್ನೂ ಉತ್ತಮವಾಗಿ ಕೆಲಸ ಮಾಡಲು ಅವರಿಗೆ ಸ್ಫೂರ್ತಿ ದೊರೆಯುತ್ತದೆ ಎಂದರು.

ಪೊಲೀಸರು ಕೂಡ ಮನುಷ್ಯರೇ. ಅವರಿಂದಲೂ ತಪ್ಪಾಗುವುದು ಸಹಜ. ನೂರರಲ್ಲಿ ಒಬ್ಬರೋ–ಇಬ್ಬರೋ ತಪ್ಪು ಮಾಡಿದರೆ ಅದನ್ನು ಇಡೀ ಇಲಾಖೆಯೇ ಮಾಡಿದಂತೆ ದೂಷಣೆ ಮಾಡುವುದು ಸರಿಯಲ್ಲ. ಸಣ್ಣ ತಪ್ಪನ್ನೇ ಎತ್ತಿ ತೋರಿಸುವ ಪ್ರವೃತ್ತಿ ಮುಂದುವರೆದಿರುವುದು ನಿಜಕ್ಕೂ ವಿಷಾದನೀಯ. ಸಮಾಜದಲ್ಲಿನ ಶಾಂತಿ–ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸರ ಪಾತ್ರ ಪ್ರಮುಖವಾದದ್ದು ಎಂಬುದನ್ನು ಮರೆಯುವಂತಿಲ್ಲ ಎಂದರು.

ನಗರ ಉಪ ಪೊಲೀಸ್ ಆಯುಕ್ತ ಸುಂದರರಾಜ್ ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ಎಲ್ಲರಿಗಿಂತ ಹೆಚ್ಚಾಗಿ ಟ್ರೋಲ್ ಆಗುತ್ತಿರುವವರು ಎಂದರೆ ಪೊಲೀಸರು. ಪೊಲೀಸರ ಒಂದು ತಪ್ಪನ್ನೇ ವಿಜೃಂಭಣೆ ಮಾಡುವ ಕೆಲಸ ಆಗುತ್ತಿದೆ. ಶ್ರಮವಹಿಸಿ ಜನಸೇವೆ ಮಾಡುತ್ತಿದ್ದರೂ ನಿರಂತರವಾಗಿ ದೂಷಣೆಗೆ ಒಳಗಾಗುತ್ತಿದ್ದಾರೆ. ಪೊಲೀಸರು ಬಹಳ ಒತ್ತಡದಲ್ಲಿ ಬದುಕನ್ನು ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಉತ್ತಮ ಸಾಧನೆಗೆ ಪ್ರಶಸ್ತಿಗಳು ಹರಸಿ ಬರುತ್ತವೆ. ಪ್ರಶಸ್ತಿಗಳು ಜವಾಬ್ದಾರಿಯನ್ನು ಇನ್ನು ಹೆಚ್ಚಿಸುತ್ತವೆ. ಇನ್ನೂ ಮುಂದೆ ಪ್ರಶಸ್ತಿ ಪಡೆದವರು ಮೈಯೆಲ್ಲ ಕಣ್ಣಾಗಿ ಕೆಲಸ ಮಾಡಬೇಕು. ಹಲವು ಬಾರಿ ಆಲೋಚನೆ ಮಾಡಿ ಮುಂದೆ ಹೆಜ್ಜೆ ಇಡಬೇಕು ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಪೊಲೀಸ್ ಸಿಬ್ಬಂದಿ ಗಳಾದ ಎನ್.ಮಹೇಶ್, ಎ.ಬಾಲಸುಬ್ರಮಣ್ಯ, ಲಿಂಗರಾಜಪ್ಪ, ಕೆ.ಜೆ.ಸುರೇಶ್, ಕೆ.ಅಜ್ರಾ, ವನಜಾಕ್ಷಿ, ಎಂ.ಡಿ.ಪ್ರದೀಪ್, ಎ.ಎನ್.ಲೋಕೇಶ್ ಅವರನ್ನು ಅಭಿನಂದಿಸಲಾಯಿತು.

ರೌಂಡ್ ಟೇಬಲ್ 13ರ ವಲಯ ಅಧ್ಯಕ್ಷ ಶುಶ್ರೂತ್ ಬೆಳಗೂರ್, ಸೂರಜ್ ಕೃಷ್ಣಂ, ಸುನಿಲ್ ಶಂಕರ್, ಲೇಡಿಸ್ ಸರ್ಕಲ್‌ನ ವಲಯಾಧ್ಯಕ್ಷೆ ನಾಗಶ್ರೀ ನಿಖಿಲೇಶ್, ಮೈಸೂರು ರೌಂಡ್‌ಟೇಬಲ್ 21ರ ಅಧ್ಯಕ್ಷ ಅಕ್ಷಯ್ ಕೋನೆರಿ, ಲೇಡಿಸ್ ಸರ್ಕಲ್ –9ರ ಅಧ್ಯಕ್ಷೆ ಎಸ್.ಶ್ರೀನಿಜಾ ಮತ್ತಿತರರು ಉಪಸ್ಥಿತರಿದ್ದರು.

ಪುತ್ರಿ ಹುಟ್ಟುಹಬ್ಬದ ಪ್ರಯುಕ್ತ ವಿಶೇಷ ಮಕ್ಕಳ ಶಾಲೆಗೆ ದಂಪತಿ ದೇಣಿಗೆ


ಬೆಂಗಳೂರಿನ ದಂಪತಿ ತಮ್ಮ ಪುತ್ರಿಯ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಶ್ರೀ ನವಚೇತನ ಬಸವೇಶ್ವರ ಟ್ರಸ್ಟ್‌ನ ವಿಶೇಷ ಮಕ್ಕಳ ಶಾಲೆಗೆ ಗೃಹೋಪಯೋಗಿ ವಸ್ತುಗಳು ಹಾಗೂ ದಿನಸಿ ಪದಾರ್ಥವನ್ನು ಗಣ್ಯರ ಮೂಲಕ ಹಸ್ತಾಂತರಿಸಿದರು.

ಮೈಸೂರು, ಮೇ 16– ಬೆಂಗಳೂರಿನ ಡಾ.ಪ್ರದೀಪ್ ಕೃಷ್ಣ ಹಾಗೂ ಡಾ.ಪೂಜಾ ಪ್ರದೀಪ್ ದಂಪತಿ, ತಮ್ಮ ಪುತ್ರಿ ಆರಾಧ್ಯಳ ಐದನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ಶ್ರೀರಾಂಪುರದಲ್ಲಿರುವ ಶ್ರೀ ನವಚೇತನ ಬಸವೇಶ್ವರ ಟ್ರಸ್ಟ್‌ನ ವಿಶೇಷ ಮಕ್ಕಳ ಶಾಲೆಗೆ ಸುಮಾರು ಒಂದು ಲಕ್ಷ ರೂಪಾಯಿ ಮೌಲ್ಯದ ವಿವಿಧ ಗೃಹೋಪಯೋಗಿ ವಸ್ತುಗಳು ಹಾಗೂ ದಿನಸಿ ಪದಾರ್ಥಗಳನ್ನು ದೇಣಿಗೆಯಾಗಿ ನೀಡಿದರು.

ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸಮಾಜ ಸೇವಕ ಎಸ್.ರಂಗನಾಥ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಉಪಸ್ಥಿತಿಯಲ್ಲಿ ರೆಫ್ರಿಜರೇಟರ್, ಟಿವಿ, ಮಿಕ್ಸಿ ಹಾಗೂ ದಿನಸಿ ಪದಾರ್ಥಗಳನ್ನು ಶಾಲಾ ಆಡಳಿತ ಮಂಡಳಿಗೆ ಹಸ್ತಾಂತರಿಸಲಾಯಿತು.

ಈ ವೇಳೆ ಪತ್ರಕರ್ತ ಅನಿಲ್ ಕುಮಾರ್, ಟ್ರಸ್ಟ್ ಅಧ್ಯಕ್ಷ ಮರಿಗೌಡ, ಪತ್ರಕರ್ತೆ ಶ್ರೀಮತಿ ಸ್ವಾತಿ, ಶೇಷ ಪ್ರಸಾದ್, ವಿಶ್ವನಾಥ್, ಪ್ರಶಾಂತ್, ಶಾಲೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಮಳೆಗಾಲದಲ್ಲಿ ವಿದ್ಯುತ್ ವ್ಯತ್ಯಯ, ಅವಘಡಗಳ ತಪ್ಪಿಸಲು ಮುನ್ನೆಚ್ಚರಿಕೆ ವಹಿಸಿ

ಸೆಸ್ಕ್ ಅಧಿಕಾರಿಗಳು, ಸಿಬ್ಬಂದಿಗೆ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರೂ ಆದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ತಾಕೀತು


ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಪ್ರಧಾನ ಕಚೇರಿಯಲ್ಲಿ ಮುಂಗಾರು ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರೂ ಆದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಮೇ 16(ಎಂಟಿವೈ)– ಮುಂಗಾರು ಸನ್ನಿಹಿತವಾಗಿದ್ದು, ಮಳೆಗಾಲದಲ್ಲಿ ಉಂಟಾಗುವ ವಿದ್ಯುತ್ ವ್ಯತ್ಯಯ ಹಾಗೂ ತುರ್ತು ಸಮಸ್ಯೆಗಳನ್ನು ಸಮರ್ಥ ರೀತಿ ಎದುರಿಸಲು ಸೆಸ್ಕ್ ಸಜ್ಜಾಗಿರಬೇಕು ಎಂದು ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು ಆದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಸೂಚಿಸಿದ್ದಾರೆ.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಪ್ರಧಾನ ಕಚೇರಿಯಲ್ಲಿ ಮುಂಗಾರು ಹಿನ್ನೆಲೆಯಲ್ಲಿ ಶನಿವಾರ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಅಧಿಕಾರಿಗಳಿಂದ ಸೆಸ್ಕ್ ವ್ಯಾಪ್ತಿಯ ಐದು ಜಿಲ್ಲೆಗಳ ಉಪ ವಿಭಾಗಗಳ ವ್ಯಾಪ್ತಿಯ ದೂರುಗಳ ನಿರ್ವಹಣೆ, ವಿದ್ಯುತ್ ಅಡಚಣೆಗಳು, ಸಾರ್ವಜನಿಕ ಸಂಪರ್ಕ ವ್ಯವಸ್ಥೆ ಹಾಗೂ ಅಗತ್ಯವಿರುವ ಸಾಮಗ್ರಿಗಳ ಸಂಗ್ರಹ ಕುರಿತು ಮಾಹಿತಿ ಪಡೆದ ಬಳಿಕ ಮಳೆಗಾಲದಲ್ಲಿ ಸಂಭವನೀಯ ವಿದ್ಯುತ್ ವ್ಯತ್ಯಯ, ಅವಘಡ ತಡೆಗೆ ಎಚ್ಚರದಿಂದ ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಮುಂಗಾರು ಸಂದರ್ಭದಲ್ಲಿ ಉಂಟಾಗುವ ಸಮಸ್ಯೆಗಳನ್ನು ಸೆಸ್ಕ್ ಸಮಗ್ರವಾಗಿ ನಿಭಾಯಿಸಲಿದೆ ಎಂಬ ವಿಶ್ವಾಸ ಜನರಲ್ಲಿ ಮೂಡುವಂತೆ ಸೆಸ್ಕ್ ಕಾರ್ಯನಿರ್ವಹಿಸಬೇಕು. ಸಾರ್ವಜನಿಕರ ಸಂಪರ್ಕ ಉತ್ತಮವಾಗಿದ್ದರೆ ಸಮಸ್ಯೆ ಪರಿಹಾರ ಸುಲಭವಾಗಲಿದೆ. ಆದ್ದರಿಂದ ದೂರು ಸ್ವೀಕಾರ ಮತ್ತು ಸ್ಪಂದನಾ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು. ಮುಂಗಾರು ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಗ್ರಾಹಕರಿಗೆ ತ್ವರಿತವಾಗಿ ಸ್ಪಂದನೆ ನೀಡುವುದು ಅತ್ಯಂತ ಮುಖ್ಯವಾಗಿದೆ. ಹೀಗಾಗಿ ಸೆಸ್ಕ್ ಟೋಲ್‌ಫ್ರೀ ಹಾಗೂ ಸಾರ್ವಜನಿಕ ಸಂಪರ್ಕ ಸಂಖ್ಯೆಗಳು ನಿರಂತರವಾಗಿ ಕಾರ್ಯನಿರ್ವಹಿಸುವಂತೆ ಕಟ್ಟೆಚ್ಚರ ವಹಿಸಬೇಕು. ನಿಷ್ಕ್ರಿಯವಾಗಿರುವ ಸಂಪರ್ಕ ಸಂಖ್ಯೆಗಳನ್ನು ತಕ್ಷಣವೇ ಸಕ್ರಿಯಗೊಳಿಸಬೇಕು ಎಂದರು.

ಸೆಸ್ಕ್ ವ್ಯಾಪ್ತಿಗೆ ಬರುವ ಐದು ಜಿಲ್ಲೆಗಳ ವ್ಯಾಪ್ತಿಯ ವಿಭಾಗಗಳ ಕಾರ್ಯಪಾಲಕ ಅಭಿಯಂತರರು ತಮ್ಮ ವ್ಯಾಪ್ತಿಯಲ್ಲಿ ಮುಂಗಾರು ಸಂದರ್ಭದಲ್ಲಿ ಸಮಸ್ಯೆ ನಿವಾರಣೆಗೆ ಬೇಕಾಗಿರುವ ಅಗತ್ಯ ಸಲಕರಣೆ(ಮೆಟೀರಿಯಲ್ಸ್) ಮತ್ತು ಸಾಮಗ್ರಿಗಳನ್ನು ದಾಸ್ತಾನು ಇಟ್ಟುಕೊಳ್ಳಲು ಕ್ರಮ ಕೈಗೊಳ್ಳಬೇಕು. ಪದೇ ಪದೆ ಬೇಡಿಕೆ ಇಡುವುದಕ್ಕಿಂತ ಅಗತ್ಯವಿರುವಷ್ಟು ಸಾಮಗ್ರಿಗಳನ್ನು ತ್ವರಿತಗತಿಯಲ್ಲಿ ದಾಸ್ತಾನು ಮಾಡಿಕೊಳ್ಳಬೇಕು. ಎಲ್ಲಾ ಇಇಗಳು ತಮ್ಮ ವಿಭಾಗಗಳಲ್ಲಿರುವ ಸ್ಟಾಕ್ ಮಾಹಿತಿಯನ್ನು ನಿರಂತರವಾಗಿ ಅಪ್ಡೇಟ್ ಮಾಡಬೇಕು ಎಂದು ಸೂಚಿಸಿದರು.

ಸರಿಯಾದ ಸಮಯಕ್ಕೆ ಸಾಮಗ್ರಿಗಳು ಪೂರೈಕೆಯಾಗದೇ ಇದ್ದರೆ ಕೆಲಸ ನಿರ್ವಹಿಸುವುದು ಕಷ್ಟ. ಎಲ್ಲಾ ವಿಭಾಗಗಳಿಗೂ ಶೀಘ್ರವಾಗಿ ಸಾಮಗ್ರಿಗಳು ತಲುಪಬೇಕು. ಆದ್ದರಿಂದ ಯಾವುದೇ ಡಿವಿಜನ್‌ನಿಂದ ಬೇಡಿಕೆ ಬಂದ ಕೂಡಲೇ ಅಗತ್ಯ ಸಾಮಗ್ರಿಗಳನ್ನು ತ್ವರಿತವಾಗಿ ಪೂರೈಸಬೇಕು. ಮುಂಗಾರು ಅವಧಿಯಲ್ಲಿ ಹೆಚ್ಚಿನ ಬೇಡಿಕೆ ಇರುವುದರಿಂದ ಕನಿಷ್ಠ ಎರಡು ತಿಂಗಳಿಗೆ ಅಗತ್ಯವಾಗುವಷ್ಟು ಕಂಬಗಳು ಹಾಗೂ ಇತರೆ ಮೆಟೀರಿಯಲ್ಸ್ ಗಳನ್ನು ಈಗಲೇ ಪೂರೈಕೆ ಮಾಡಬೇಕು ಎಂದು ಸೂಚಿಸಿದರು.

ನಿರ್ಲಕ್ಷ್ಯಿಸುವ ಗುತ್ತಿಗೆದಾರರಿಗೆ ನೋಟೀಸ್ ನೀಡಿ: ಮುಂಗಾರು ಸಂದರ್ಭದಲ್ಲಿ ಎಸ್‌ಒಪಿ ಪ್ರಕಾರ ಕೆಲಸ ನಿರ್ವಹಿಸದ ಗುತ್ತಿಗೆದಾರರಿಗೆ ನೋಟೀಸ್ ನೀಡಬೇಕು. ಮಳೆಗಾಲದ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ಹಾಗೂ ಗುಣಮಟ್ಟದ ಕೆಲಸ ಮಾಡುವ ಗುತ್ತಿಗೆದಾರರಿಗೆ ಹೆಚ್ಚಿನ ಕೆಲಸ ನೀಡಬೇಕು. ಕೆಲಸದಲ್ಲಿ ನಿರ್ಲಕ್ಷ್ಯ ತೋರಿಸುವವರಿಗೆ ಕಡಿಮೆ ಕೆಲಸ ನೀಡಬೇಕು. ಮುಂಗಾರು ವೇಳೆ ಕೆಲಸದಲ್ಲಿ ವಿಳಂಬ ಮಾಡಿದರೆ ಸಮಸ್ಯೆ ಪರಿಹಾರ ಆಗುವುದಿಲ್ಲ. ಹೀಗಾಗಿ ಅಂತಹ ಗುತ್ತಿಗೆದಾರರಿಗೆ ನೋಟೀಸ್ ನೀಡುವಂತೆ ತಿಳಿಸಿದರು.

ಸಭೆಯಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕರಾದ ಶರಣಮ್ಮ ಎಸ್. ಜಂಗಿನ, ಮುಖ್ಯ ಪ್ರಧಾನ ವ್ಯವಸ್ಥಾಪಕರಾದ(ಆಂತರಿಕ ಲೆಕ್ಕಪರಿಶೋಧನೆ) ಲಿಂಗರಾಜಮ್ಮ, ಮುಖ್ಯ ಇಂಜಿನಿಯರ್ ಎಲ್. ಲೋಕೇಶ್, ಅಧೀಕ್ಷಕ ಇಂಜಿನಿಯರ್‌ಗಳಾದ ಸುನೀಲ್ ಕುಮಾರ್, ಸೋಮಶೇಖರ್, ಪ್ರಧಾನ ವ್ಯವಸ್ಥಾಪಕರಾದ ಡಾ.ಬಿ.ಆರ್. ರೂಪ, ಆರ್. ರಾಮಸ್ವಾಮಿ, ಹೆಚ್.ಆರ್.ದಿನೇಶ್ ಹಾಗೂ ಇತರ ಅಧಿಕಾರಿಗಳು ಪಾಲ್ಗೊಂಡಿದ್ದರು.


ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
ಜನರೊಂದಿಗೆ
ಜನತಾದಳ
ಸಶಕ್ತ ಜನತಾದಳ, ಸಮೃದ್ಧ ಕರ್ನಾಟಕ
ಕಾರ್ಯಕ್ರಮ
9964002028ಗೆ
Missed call ಕೊಡಿ.
ಜೆಡಿಎಸ್ ಸದಸ್ಯತ್ವ ಪಡೆಯಿರಿ
VISMAYA
ADVERTISERS
8050302424
ದಿನಾಂಕ: 17.05.2026 ಭಾನುವಾರ ಸಮಯ : 10.30 ಗಂಟೆ
ಸ್ಥಳ: ನಾಗಲಿಂಗೇಶ್ವರ - ಬೋಗೇಶ್ವರ ದೇವಸ್ಥಾನದ ಎದುರು,
ಬೋಗಾದಿ ರಿಂಗ್ ರಸ್ತೆ, ಮೈಸೂರು